ಮಾನವಿಕ ಕರ್ಣಾಟಕ

ಸಂಪುಟ ೯ ಸಂಚಿಕೆ ೪

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

೧೯೭೯

ಲೇಖಕರಿಗೆ ಸೂಚನೆಗಳು

೧ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ'ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಅವಶ್ಯಕವಾದ ಚಿತ್ರಗಳಿದ್ದರೆ ಅವನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು; ಅವುಗಳಲ್ಲಿ ಬದಲಾವಣೆಗಳೇನಾದರೂ ಅವಶ್ಯವಿದ್ದರೆ ಅವನ್ನೂ ಸೂಚಿಸಬೇಕು.

೪ ಸ್ವೀಕೃತವಾಗದ ಲೇಖನವನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆ ಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆಯೊಂದಿಗೆ ಪ್ರಕಟಿಸುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡೆರಡು ಪ್ರತಿ ಕಳುಹಿಸಿಕೊಡಬೇಕು.

೮ ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು-೫೭೦೦೦೬ ಎಂಬ ವಿಳಾಸಕ್ಕೆ ಕಳುಹಿಸಬೇಕು.

ಮಾನವಿಕ ಕರ್ಣಾಟಕ

ಸಂಪುಟ ೯ ಸಂಚಿಕೆ ೪

ಅಗಸ್ಟ್ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೭೯

MANAVIKA KARNATAKA, Kannada Quarterly of the University of Mysore, Volume 9, Number 4, August 1979. Edited by Dr. B. R. Gopal and Dr. B. S. Srikantaradhya

ಪ್ರಧಾನ ಸಂಪಾದಕರು

ಡಾ. ಹಾ. ಮಾ. ನಾಯಕ

ಸಂಪಾದಕರು

ಡಾ. ಬಾ. ರಾ. ಗೋಪಾಲ್

ಡಾ. ಬಿ. ಎಸ್. ಶ್ರೀಕಂಠಾರಾಧ್ಯ

ಪ್ರಕಾಶಕರು : ನಿರ್ದೇಶಕರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ

ಮುದ್ರಕರು : ಹರ್ಷ ಪ್ರಿಂಟರ್ಸ್, ವಿದ್ಯಾರಣ್ಯಪುರಂ, ಮೈಸೂರು–570 008

ವಿಷಯ ಸೂಚಿ

ಈ ಸಂಚಿಕೆಯ ಲೇಖಕರು

೧. ವಿ. ಎನ್. ಶೇಷಗಿರಿರಾವ್	ಅಧ್ಯಾಪಕರು, ತತ್ತ್ವಶಾಸ್ತ್ರ ವಿಭಾಗ, ಮಾನಸ ಗಂಗೋತ್ರಿ, ಮೈಸೂರು–೫೭೦೦೦೬
೨. ಕೆ. ಎನ್. ವೆಂಕಟರಾಯಪ್ಪ	ಪ್ರಾಧ್ಯಾಪಕರು ಮತ್ತು ವಿಭಾಗಮುಖ್ಯರು ಸಾಮಾಜಿಕ ಮಾನವಶಾಸ್ತ್ರ ವಿಭಾಗ, ಮಾನಸಗಂಗೋತ್ರಿ, ಮೈಸೂರು
೩. ಕೆ. ಲಕ್ಷ್ಮೀನಾರಾಯಣ್	ಸಂಶೋಧಕರು, ಸಾಮಾಜಿಕ ಮಾನವಶಾಸ್ತ್ರ ವಿಭಾಗ, ಮಾನಸಗಂಗೋತ್ರಿ, ಮೈಸೂರು
೪. ಬಾ. ಸಾಮಗ ಮಲ್ಪೆ	c/o ಎಚ್. ಎಸ್. ಸಾಮಗ, ಯಕ್ಷಗಾನ ಕಲಾವಿದರು, ಮಲ್ಪೆ, ಉಡುಪಿ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ
೫. ಕೆ. ಸಿ. ಬಸವರಾಜ	ಅಧ್ಯಾಪಕರು, ಅರ್ಥಶಾಸ್ತ್ರವಿಭಾಗ, ಸ್ನಾತಕೋತ್ತರ ಕೇಂದ್ರ, ಮಂಗಳಗಂಗೋತ್ರಿ, ಕೋಣಾಜೆ, ಮಂಗಳೂರು–೫೭೪೧೫೨
೬. ವಿ. ಎನ್. ಭಟ್ಟ	ಸಂಶೋಧಕರು, ಕನ್ನಡ ವಿಭಾಗ, ಮಧುರೈ ವಿಶ್ವವಿದ್ಯಾನಿಲಯ, ಮಧುರೈ, ತಮಿಳುನಾಡು
೭. ಎಚ್. ಎಂ. ನಾಗರಾಜರಾವ್	ಶಾಸನ ಸಹಾಯಕರು, ಎಪಿಗ್ರಾಫಿಯ ಕರ್ನಾಟಿಕ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು
೮. ಎಸ್. ವೇಣುಗೋಪಾಲಾಚಾರ್ಯ	237, ಅಶೋಕರಸ್ತೆ, ಮಂಡ್ಯ
೯. ರು. ಮ. ಷಡಕ್ಷರಯ್ಯ	ಸಂಶೋಧನ ವಿದ್ಯಾರ್ಥಿ, ಪ್ರಾಚೀನ ಇತಿಹಾಸ ಮತ್ತು ಶಾಸನಶಾಸ್ತ್ರವಿಭಾಗ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ–೫೮೦೦೦೩

ವಿ. ಎನ್. ಶೇಷಗಿರಿರಾವ್

ಮಧ್ಯಕಾಲೀನ ಪಾಶ್ಚಾತ್ಯ ಚಿಂತನೆ-ಒಂದು ವಿಶ್ಲೇಷಣೆ

೧

ಪಾಶ್ಚಾತ್ಯ ತತ್ತ್ವಶಾಸ್ತ್ರವನ್ನು ಕಾಲದದೃಷ್ಟಿಯಿಂದಲೂ, ವ್ಯಾಸಂಗದ ಅನುಕೂಲ ದೃಷ್ಟಿಯಿಂದಲೂ, ನಾಲ್ಕು ಭಾಗಗಳನ್ನಾಗಿ ಮಾಡಬಹುದು :

೧) ಪ್ರಾಚೀನ ಗ್ರೀಕ್ ತತ್ತ್ವಶಾಸ್ತ್ರ, ೨) ಮಧ್ಯಕಾಲೀನ ತತ್ತ್ವಶಾಸ್ತ್ರ, ೩) ಆಧುನಿಕ ತತ್ತ್ವಶಾಸ್ತ್ರ ಮತ್ತು ೪) ಸಮಕಾಲೀನ ತತ್ತ್ವಶಾಸ್ತ್ರ.

ಕ್ರಿ.ಪೂ. ೬ನೆಯ ಶತಮಾನದಲ್ಲಿ ಗ್ರೀಕ್ ಚಿಂತಕ ಥಾಲಿಸ್‌ನಿಂದ ಪ್ರಾರಂಭವಾದುದು ಪ್ರಾಚೀನ ಗ್ರೀಕ್ ತತ್ತ್ವಶಾಸ್ತ್ರ. ಇದು ವಿಶ್ವದ ರಹಸ್ಯದ ಬಗ್ಗೆ ಆಸಕ್ತಿಯನ್ನು ತಾಳಿತ್ತು. ಈ ಚಿಂತನೆ ಅನ್ಯಾಕ್ಸಿಮಾಂಡರ್, ಅನಾಕ್ಸಿಮಿನಸ್, ಪೈಥಾಗೊರಾಸ್, ಪಾರ್ಮಿನೈಡಿಸ್, ಹೆರಾಕ್ಲೈಟಸ್, ಎಂಪೆಡೋಕ್ಲಸ್, ಅನಾಕ್ಸಗೊರಾಸ್, ಅಣುವಾದಿಗಳಾದ ಲೂಸಿಪ್ಪಸ್, ಡೆಮಾಕ್ರೈಟಸ್ ಮುಂತಾದವರ ಮೂಲಕ ಹಾಯ್ದು ಸಾಕ್ರೆಟೀಸ್, ಪ್ಲೇಟೋ ಮುಂತಾದ ಚಿಂತಕರ ಕೈಯಲ್ಲಿ ವಿಸ್ತಾರಗೊಂಡು ಅರಿಸ್ಟಾಟಲನಲ್ಲಿ ಪರಮೋತ್ಕೃಷ್ಟತೆಯನ್ನು ಹೊಂದಿತು. ಅರಿಸ್ಟಾಟಲಿನ ನಂತರದಕಾಲದ ತತ್ತ್ವಶಾಸ್ತ್ರ (post-Aristotelian Philosophy) ಗ್ರೀಕ್ ತಾತ್ತ್ವಿಕ ಚಿಂತನೆಗೆ ಹೊಸದೇನನ್ನೂ ನೀಡದೆ ಕುಂಠಿತವಾಯಿತು.

ಮಧ್ಯಕಾಲೀನ ತತ್ತ್ವಶಾಸ್ತ್ರವೆಂದು ಕರೆಸಿಕೊಳ್ಳುವ ಚಿಂತನೆ ಕ್ರಿ.ಶ. ಎರಡನೆಯ ಶತಮಾನದಿಂದ ಹದಿನೈದನೆಯ ಶತಮಾನದ ಅಂತ್ಯದವರಗೂ ಪಸರಿಸಿತ್ತೆಂದು ಹೇಳಬಹುದು. ಈ ದೀರ್ಘ ಕಾಲದಲ್ಲಿ ಕ್ರಿ.ಶ. 4 ರಿಂದ 6 ಮತ್ತು 11ರಿಂದ 13ನೆಯ ಶತಮಾನಗಳು ಬಹು ಮುಖ್ಯವಾದುವು. ಕ್ರಿ.ಶ. 9ನೆಯ ಶತಮಾನದಲ್ಲಿ ಪ್ಲೇಟೋ, ಅರಿಸ್ಟಾಟಲ್ ಮುಂತಾದ ಚಿಂತಕರ ಗ್ರಂಥಗಳು ಅರೇಬಿಕ್ ಭಾಷೆಗೆ ತರ್ಜಮೆಗೊಂಡಮೇಲೆ ಮುಸ್ಲಿಂ ತಾತ್ತ್ವಿಕ ಚಿಂತನೆಯು ಬೆಳೆದು 12ನೆಯ ಶತಮಾನದಲ್ಲಿ ಪ್ರವರ್ಧಮಾನಕ್ಕೆ ಬಂದಿತು. ಅವಿಚಿನ್ನ, ಅವೆರೋಸ್, ಅಲ್ಫರ್ರ್ಯಾಬಿ ಮುಂತಾದವರು ಪ್ರಮುಖ ಮಹಮ್ಮದೀಯ (Arabic) ತಾತ್ತ್ವಿಕರು. ಇದೇ ಶತಮಾನದಲ್ಲಿ ಯಹೂದಿ (Jewish) ಚಿಂತನೆಯೂ ಬೆಳೆಯಿತು. ಅವೈಸ್ ಬರ್ನ್, ಮೈಮೊನೈಡಿಸ್ ಮುಂತಾದವರು ಹೆಸರಾಂತ ಯಹೂದಿ ಚಿಂತಕರು.

ಕ್ರೈಸ್ತಧರ್ಮವೇ ಮಧ್ಯಕಾಲೀನ ಚಿಂತನೆಯ ಕೇಂದ್ರಬಿಂದು. ಈ ಕಾಲದಲ್ಲಿ ಒರೈಜನ್, ಸಂತ ಅಗಸ್ಟೈನ್, ಬೋತಿಯಸ್, ಜಾನ್‌ಸ್ಕೋಟಸ್, ಅನ್‌ಸ್ಲೆಂ, ಸಂತ ಅಕ್ವಿನಾಸ್

ಸಂತ ಬೊನವೆಂಡರ್, ಡನ್ಸ್‌ಸ್ಕೋಟಸ್ ಮುಂತಾದ ಅನೇಕ ಪ್ರತಿಭಾವಂತರು ಆಗಿಹೋಗಿದ್ದಾರೆ. ಈ ಪ್ರತಿಭಾವಂತರಲ್ಲಿ ತಾತ್ತ್ವಿಕದೃಷ್ಟಿಯಿಂದ ಬಹು ಮುಖ್ಯರಾದವರೆಂದರೆ ಕ್ರಿ.ಶ. 4ನೆಯ ಶತಮಾನದಲ್ಲಿದ್ದ ಸಂತ ಅಗಸ್ಟಸ್ ಮತ್ತು ಕ್ರಿ.ಶ. 13ನೆಯ ಶತಮಾನದಲ್ಲಿದ್ದ ಸಂತ ಥಾಮಸ್ ಅಕ್ವಿನಾಸ್. ಮಧ್ಯಕಾಲೀನ ಚಿಂತನೆ ತಾತ್ವಿಕವೆನಿಸಿಕೊಳ್ಳುವಂತೆ ಇವರು ಮಾಡಿದ ಕೆಲಸ ಅಗಾಧ, ಅಪೂರ್ವ. ಇವರ ಚಿಂತನೆ ಇಡೀ ಮಧ್ಯಕಾಲೀನ ಚಿಂತನೆಯನ್ನು ಸರಿಸುಮಾರಾಗಿ ಪ್ರತಿನಿಧಿಸುತ್ತದೆ ಎಂದು ಹೇಳಬಹುದು.

ಆಧುನಿಕ ಪಾಶ್ಚಾತ್ಯ ತತ್ತ್ವಶಾಸ್ತ್ರ ಕ್ರಿ.ಶ. 16ನೆಯ ಶತಮಾನದಲ್ಲಿ ಪ್ರಾರಂಭವಾಯಿತು. ಪ್ರಸಿದ್ಧ ಫ್ರೆಂಚ್ ತತ್ತ್ವಜ್ಞಾನಿ, ವಿಜ್ಞಾನಿ ಹಾಗು ಗಣಿತಜ್ಞನಾದ ರೇನೆ ಡೇಕಾರ್ಟ್ ಇದರ ಜನಕ. ಆಧುನಿಕ ಚಿಂತನೆಯನ್ನು ಎಲ್ಲ ವಿಧವಾದ ಅವಿಚಾರಾತ್ಮಕ ಅಧಿಕಾರ (dogmatic authoritarianism) ದಿಂದ ಬಿಡುಗಡೆ ಮಾಡಿದ್ದೇ ಅವನ ಮಹತ್ಕಾರ್ಯ. ಮಾನವನೇ ಈ ಕಾಲದ ತಾತ್ತ್ವಿಕಚಿಂತನೆಯ ಕೇಂದ್ರ ಬಿಂದು; ಅವನ ಮೂಲಭೂತ ಸಮಸ್ಯೆಗಳ ವಿಶ್ಲೇಷಣೆ ಹಾಗು ಪರಿಹಾರಸಾಧ್ಯತೆಗಳೇ ಅದರ ಮುಖ್ಯ ವಿಷಯ. ಹೀಗೆ ಡೇಕಾರ್ಟನಿಂದ ಸ್ಫೂರ್ತಿಗೊಂಡ ಆಧುನಿಕ ಪಾಶ್ಚಾತ್ಯ ಚಿಂತನೆ ಹಂತ ಹಂತವಾಗಿ ಸ್ಪಿನೋಜ, ಲೈಬ್ನಿಸ್, ಲಾಕ್, ಬರ್ಕ್ಲಿ, ಹ್ಯೂಮ್, ಕಾಂಟ್, ಫೀಷೆ ಮುಂತಾದ ಚಿಂತಕರ ಮೂಲಕ ಹಾಯ್ದು ತನ್ನ ಪರಾಕಾಷ್ಠತೆಯನ್ನು ಜರ್ಮನ್ ಚಿಂತಕನಾದ ಹೆಗಲ್‌ನಲ್ಲಿ ಮುಟ್ಟುತ್ತದೆ.

ತದನಂತರವೇ ಸಮಕಾಲೀನ ಪಾಶ್ಚಾತ್ಯ ಚಿಂತನೆ ಪ್ರಾರಂಭವಾಗುವುದು. ಬ್ರಾಡ್ಲೇ, ಬೊಸಾಂಕೆ, ಗ್ರೀನ್, ಲೋಟ್ಸೆ, ರಾಯ್ಸ್, ಬೌನೆ, ಬ್ರೈಟ್‌ಮನ್, ವಿಲಿಯಂ ಜೇಮ್ಸ್, ಡ್ಯೂಯಿ, ಅಸ್ತಿತ್ತ್ವವಾದಿಗಳಾದ ಕಿರ್ಕೆಗಾರ್ಡ್, ಮಾರ್ಸಲ್, ಎಸ್‌ಪರ್ಸ್. ಸಾರ್ತ್, ಹೆಡಗರ್ ಪರಿಣಾಮವಾದಿಗಳಾದ ಮಾರ್ಗನ್, ಅಲೆಗ್ಸಾಂಡರ್, ಬರ್ಗ್‌ಸನ್, ತಾತ್ತ್ವಿಕ ವಿಶ್ಲೇಷಣೆಯ ಚಿಂತಕರಾದ ರಸಲ್, ವಿಜ್ಜೆನ್‌ಸ್ಟೈನ್, ಏಯರ್, ವಿಜ್ಞಾನಿ–ತಾತ್ವಿಕನಾದ ವೈಟ್‌ಹೆಡ್ ಮುಂತಾದ ಚಿಂತಕರ ಕೈಯಲ್ಲಿ ಪುಷ್ಟಿಗೊಂಡು ವಿಚಾರ ಪ್ರಚೋದಕವೂ, ವಿಮರ್ಶಾತ್ಮಕವೂ, ಮೌಲ್ಯಪ್ರಧಾನವೂ ಆಗಿ ನಿರಂತರವಾಗಿ ಮುಂದುವರಿಯುತ್ತಿದೆ.

೨

ಮಧ್ಯಕಾಲೀನ ತಾತ್ತ್ವಿಕ ಚಿಂತನೆ ಪ್ರಧಾನತಃ ಕ್ರೈಸ್ತಧರ್ಮದ ಸಮರ್ಥನೆಗೆ ಟೊಂಕ ಕಟ್ಟಿ ನಿಂತದ್ದು. ಅದನ್ನು 'ತಾತ್ತ್ವಿಕ' ಎಂದು ಪಾಶ್ಚಾತ್ಯ ಅರ್ಥದಲ್ಲಿ ಕರೆಯಲಾಗದು ಎಂಬುದು ಪ್ರಾಯಶಃ ಎಲ್ಲಾ ಆಧುನಿಕ ಪಾಶ್ಚಾತ್ಯ ಚಿಂತಕರ ಅಭಿಪ್ರಾಯ. ಮಧ್ಯಕಾಲೀನ ಚಿಂತನೆ ಸ್ವತಂತ್ರವಾಗಿರದೆ ಕ್ರೈಸ್ತಮತದ ಅಡಿಯಾಳಾಗಿತ್ತು; ಸತ್ಯ (Reality) ದ ಸ್ವರೂಪದ ಬಗ್ಗೆ ನಿರ್ದಾಕ್ಷಿಣ್ಯವಾಗಿ ವಿಚಾರಮಾಡುವ ತತ್ತ್ವಶಾಸ್ತ್ರದ ಕಾರ್ಯವನ್ನು ಈ ಕಾಲದಲ್ಲಿ ಕಡೆಗಣಿಸಲಾಗಿತ್ತು; ತತ್ತ್ವಶಾಸ್ತ್ರ ತನ್ನ ತೀರ್ಮಾನಗಳನ್ನು ನಿರ್ಭಯವಾಗಿ ಹೊರಗೆಡಹಲು ಅಸಮರ್ಥವಾಗಿತ್ತು; 'ಏನನ್ನು ಯೋಚಿಸಬೇಕು' 'ಹೇಗೆ ಯೋಚಿಸಬೇಕು'—ಮುಂತಾದವುಗಳನ್ನು ನಿರ್ಧರಿಸುತ್ತಿದ್ದುದು ಕ್ರೈಸ್ತ ಚರ್ಚ್; ಸ್ವತಂತ್ರ ಚಿಂತನೆಯ ವ್ಯಕ್ತಿಯಲ್ಲ. ಹೀಗೆ ಕ್ರೈಸ್ತಚರ್ಚ್ ತನ್ನ ಅಧಿಕಾರ (authority) ಎಂಬ ನೊಗವನ್ನು ಮಧ್ಯಕಾಲೀನ ಚಿಂತನೆಯ ಮೇಲೆ ಹೇರಿತ್ತು ಎಂಬುದು ಅವರ ಆಕ್ಷೇಪಣೆ. ಹೀಗೆ ಮಧ್ಯಕಾಲೀನ ಇಡೀ ಚಿಂತನೆ ಕ್ರೈಸ್ತಧರ್ಮದ ಚೌಕಟ್ಟಿನಲ್ಲೇ ವಿಕಾಸವಾಯಿತು. ಆ ಕಾಲದ ಚಿಂತಕರಲ್ಲಿ ಬಹು ಮಂದಿ ಕ್ರೈಸ್ತಪಾದ್ರಿಗಳೇ ಆಗಿದ್ದಾರೆ. ಯೇಸುಕ್ರಿಸ್ತ ಮತ್ತು ಆತನ ನೇರ ಶಿಷ್ಯರು ಏನನ್ನು ಬೋಧಿಸಿದರೋ

ಅದನ್ನು ಯಾವ ತಾರ್ಕಿಕ ವಿಶ್ಲೇಷಣೆಯೂ ಇಲ್ಲದೆ ಈ ಚಿಂತಕರು ಸುಮ್ಮನೆ ನಂಬಿದರು. ಹೀಗೆ ಕ್ರೈಸ್ತಧರ್ಮದ ಮೂಲತತ್ತ್ವಗಳಾದ ಟ್ರಿನಿಟಿ,[1] ಪುನರುತ್ಥಾನ.'[2] 'ಈಶ್ವರ ಪ್ರಸಾದ'[3]ದ ಆವಶ್ಯಕತೆ, ಸತ್ಸಂಗ, ಪ್ರಾರ್ಥನೆ ಮತ್ತು 'ಪಾಪನಿವೇದನೆ'[4] ಇವುಗಳಲ್ಲಿ ಅಚಲನಂಬಿಕೆ ಇಡೀ ಮಧ್ಯಕಾಲೀನ ತಾತ್ತ್ವಿಕ ಚಿಂತನೆಯ ಆಧಾರವಾಯಿತು. ಈ ಅರ್ಥದಲ್ಲಿಯೇ ಅದು ಪುರಾತನ ಗ್ರೀಕ್ ಮತ್ತು ಆಧುನಿಕ ತಾತ್ತ್ವಿಕ ಚಿಂತನೆಗಳಿಂದ ಭಿನ್ನವಾಗಿದೆಯೆಂದು ಹೇಳಬಹುದು.

ಮಧ್ಯಕಾಲೀನ ಚಿಂತನೆಯ ಪ್ರಕಾರ ಬುದ್ಧಿ (Reason) ಮತ್ತು ನಂಬಿಕೆ (ಕ್ರೈಸ್ತ ತತ್ತ್ವಗಳಲ್ಲಿ) (Revelation)—ಇವುಗಳಲ್ಲಿ ನಂಬಿಕೆಯೇ ಪ್ರಧಾನವಾದುದು. ಕ್ರೈಸ್ತ ತತ್ವಗಳನ್ನು ದೇವರೇ ಹೊರಗೆಡಹಿದ್ದಾನೆ (Revealed). ಈ ತತ್ತ್ವಗಳು ಸಂದೇಹಾಸ್ಪದ ವಲ್ಲ. ಏಕೆಂದರೆ ಅವುಗಳ ಬಗ್ಗೆ ಸಂದೇಹ ವ್ಯಕ್ತಪಡಿಸುವುದೆಂದರೆ ದೇವರ ಅಸ್ತಿತ್ತ್ವದ ಬಗ್ಗೇ ಸಂದೇಹ ವ್ಯಕ್ತಪಡಿಸಿದಂತೆ. ದೇವರೇ ಈ ತತ್ತ್ವಗಳನ್ನು ಹೊರಗೆಡಹಿದ್ದರಿಂದ ಅವು ನಂಬಲರ್ಹ ವಾದುವು; ಈ ನಂಬಿಕೆಯೇ ಜ್ಞಾನ ; ಇದು ಎಲ್ಲ ತಿಳುವಳಿಕೆಗೆ ಆಧಾರ; "ನೀವು ಕ್ರೈಸ್ತತತ್ತ್ವ ಗಳಲ್ಲಿ ನಂಬಿಕೆ ಇಡದೆ ಏನನ್ನೂ ತಿಳಿಯಲಾರಿರಿ", (unless you believe, you shall not understand)"; "ಯಾವುದೋ ಒಂದು ನಂಬಿಕೆಯನ್ನು ಹೊಂದುವುದಕ್ಕೋಸ್ಕರ ನಾನು ತಿಳಿಯಲಿಚ್ಛಿಸುವುದಿಲ್ಲ; (ಕ್ರೈಸ್ತತತ್ತ್ವಗಳಲ್ಲಿ) ನಂಬಿಕೆಯಿಂದ ಪ್ರಾರಂಭಿಸಿ ನಾನು ಎಲ್ಲವನ್ನೂ ತಿಳಿಯಲಿಚ್ಛಿಸುತ್ತೇನೆ (I do not desire to know in order that I may believe ; I believe in order that I may know)"; ಇವು ಇಡೀ ಮಧ್ಯಕಾಲೀನ ಚಿಂತನೆಯ ಬೀಜವಾಕ್ಯಗಳು. ಹೀಗೆ ಬುದ್ಧಿ ಮತ್ತು ನಂಬಿಕೆಗಳ ನಡುವಿನ ಸಂಬಂಧದ ವಿಶ್ಲೇಷಣೆಗೆ ಈ ಚಿಂತನೆ ಪ್ರಮುಖ ಸ್ಥಾನವನ್ನು ಕೊಟ್ಟಿದೆ. ಮೊದಲೇ ಹೇಳಿದಂತೆ ಕ್ರೈಸ್ತ ನಂಬಿಕೆಯ ಮುಂದಾಳತ್ವದಲ್ಲಿ ನಡೆದುದೆ ಈ ಕಾಲದ ವಿಶಿಷ್ಟ ಲಕ್ಷಣ.

ಮಧ್ಯಕಾಲೀನ ತಾತ್ತ್ವಿಕ ಚಿಂತನೆಯ ಮತ್ತೊಂದು ಪ್ರಮುಖ ಲಕ್ಷಣವೆಂದರೆ, ಅದು ತನ್ನ ಚಿಂತನೆಯಲ್ಲಿ ಪ್ರಾಚೀನ ಗ್ರೀಕರ, ವಿಶೇಷತಃ ಪ್ಲೇಟೋ, ನವ್ಯ ಪ್ಲೇಟೋ ಮತ್ತು ಅರಿಸ್ಟಾಟಲ್ ಸಿದ್ಧಾಂತಗಳ ಪರಿಕಲ್ಪನೆಗಳನ್ನು ಬಹಳವಾಗಿ ಉಪಯೋಗಿಸಿಕೊಂಡಿರುವುದು. ಉದಾಹರಣೆಗೆ ಸಂತ ಅಗಸ್ಟೈನ್ ಕ್ರೈಸ್ತಧರ್ಮದ ನಂಬಿಕೆಗಳಿಗೆ ತಾತ್ತ್ವಿಕ ಹೊದಿಕೆಯನ್ನು ಹೊದಿಸುವ ಪ್ರಯತ್ನದಲ್ಲಿ ಪ್ಲೇಟೋ ಮತ್ತು ನವ್ಯ ಪ್ಲೇಟೋ ಸಿದ್ಧಾಂತಗಳ ಮೊರೆ ಹೋಗುತ್ತಾನೆ. ಹಾಗೆಯೇ ಕ್ರೈಸ್ತಧರ್ಮದ ನಂಬಿಕೆಗಳಿಗೆ ತಾತ್ತ್ವಿಕ ಆಧಾರವನ್ನು ಕೊಡುವ ಪ್ರಯತ್ನದಲ್ಲಿ, ಸಂತ ಥಾಮಸ್ ಅಕ್ವಿನಾಸ್, ಅರಿಸ್ಟಾಟಲನ ಸಿದ್ಧಾಂತವನ್ನು ಉಪಯೋಗಿಸಿ ಕೊಂಡಿದ್ದಾನೆ. ಹೀಗೆ ಮಧ್ಯಕಾಲೀನ ಚಿಂತನೆಗೆ, ಪುರಾತನ ಗ್ರೀಕ್ ತಾತ್ತ್ವಿಕ ಚಿಂತನೆಯ ಪ್ರಭಾವ ತೆಕ್ಕೆಯಿಂದ ತನ್ನನ್ನು ತಾನು ಬಿಡಿಸಿಕೊಳ್ಳಲು ಅಸಾಧ್ಯವಾಗಿತ್ತು.

೨

ಈಗ ಸಂತ ಅಗಸ್ಟೈನ್ ಮತ್ತು ಸಂತ ಅಕ್ವಿನಾಸ್—ಇವರ ಚಿಂತನೆಯ ಪ್ರಮುಖ ಅಂಶ ಗಳನ್ನು ಸ್ಪಷ್ಟಪಡಿಸೋಣ. ಕ್ರೈಸ್ತತತ್ತ್ವಗಳಲ್ಲಿನ ನಂಬಿಕೆಯನ್ನು ಮಾನವ ಬುದ್ಧಿ ಸಮರ್ಥಿ ಸಲು ಹೇಗೆ ಸಾಧ್ಯವಾಗಿದೆ ಎಂಬುದೇ ಇವರ ತತ್ತ್ವಜ್ಞಾನದ ತಿರುಳು. ಇವರ ಚಿಂತನೆ "ತಾತ್ತ್ವಿಕ" ಎನಿಸಿಕೊಳ್ಳುವುದು ಈ ಪ್ರಯತ್ನದಿಂದಲೇ. ಇವರು ಅಗಾಧ ಚಿಂತಕರಾಗಿದ್ದು ದಷ್ಟೇ ಅಲ್ಲದೆ ಅಪ್ರತಿಮ ಅನುಭಾವಿಗಳೂ ಆಗಿದ್ದರು. ಅಂತರಂಗ ಶೋಧನೆ ಆತ್ಮನಿರೀಕ್ಷಣೆ

ಇವರ ತಾತ್ತ್ವಿಕ ಚಿಂತನೆಯ ಅಡಿಗಲ್ಲಾದವು. ಪರಮಾತ್ಮನನ್ನು ಅನುಸಂಧಾನ ಮಾಡಲು ಬೇಕಾದ ಸಾಧನ, ಅಂತರಂಗ ಹೋರಾಟ, ನಡೆನುಡಿ, ಆಚಾರ, ವಿಚಾರ–ಇವೆಲ್ಲವನ್ನು ಇವರ ಗ್ರಂಥಗಳು ಒಳಗೊಂಡಿವೆ. ಇವರ ಮಾತುಗಳು ಪರಿಶುದ್ಧ ಹೃದಯದಿಂದ ಹೊರಹೊಮ್ಮಿದ ನುಡಿಮುತ್ತುಗಳೆನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ.

ಸಂತ ಅಗಸ್ಟೈನ್ ಕ್ರಿ. ಶ. ಸುಮಾರು 354ರಲ್ಲಿ ಉತ್ತರ ಆಫ್ರಿಕಾದ ತಗಸ್ತೆ ಎಂಬ ಸ್ಥಳದಲ್ಲಿ ಜನಿಸಿದನು. ಮೊದಮೊದಲು ಸಂಶಯವಾದಿಯಾಗಿದ್ದ ಇವನು ನವ್ಯ ಪ್ಲೇಟೋ ಅನುಭವ ಸಿದ್ಧಾಂತದಿಂದ ಪ್ರಭಾವಿತನಾಗಿ ಆಸ್ತಿಕನಾಗುತ್ತಾನೆ. ಇವನು ಪ್ರಸಿದ್ಧ ಬರಹಗಾರನೂ ಆಗಿದ್ದನು. 'Confessions' ಮತ್ತು 'The City of God' ಇವು ಇವನ ಪ್ರಮುಖ ಗ್ರಂಥಗಳು. ಹನ್ನೆರಡನೆಯ ಶತಮಾನದ ಅಂತ್ಯದವರೆಗೂ ಇವನ ಪ್ರಭಾವ ಹರಡಿತ್ತು.

ಅಗಸ್ಟೈನನ ಪ್ರಕಾರ ತತ್ತ್ವಶಾಸ್ತ್ರದ ಅಧ್ಯಯನಕ್ಕೆ ಒಂದು ಗುರಿ ಉಂಟು. ಅದೇ ಅಮಿತಾನಂದ (Beautitude). ಈ ಅಮಿತಾನಂದವನ್ನು ಪಡೆಯುವುದಕ್ಕೋಸ್ಕರವೇ ಮಾನವ ತತ್ತ್ವಶಾಸ್ತ್ರವನ್ನು ಅಧ್ಯಯನ ಮಾಡಬೇಕು; ತತ್ತ್ವಶಾಸ್ತ್ರಕ್ಕೋಸ್ಕರ ಅಲ್ಲ. ಮಾನವ, Reasonಗೆ ಅನುಗುಣವಾಗಿ ಆಕಾಂಕ್ಷೆ ಮತ್ತು ಪ್ರವೃತ್ತಿಗಳನ್ನು (drives and impulses) ಸಮಾನವಾಗಿ ತೃಪ್ತಿಪಡಿಸಿಕೊಳ್ಳುವುದೇ 'ಆನಂದ'ವೆನಿಸುತ್ತದೆ. ಹೀಗೆ ತತ್ತ್ವಶಾಸ್ತ್ರ ಅಗಸ್ಟೈನನ ಪ್ರಕಾರ ಅನುಷ್ಠಾನ ಪ್ರಧಾನವಾದುದು.

ಅಗಸ್ಟೈನ್ ತನ್ನ ತಾತ್ತ್ವಿಕ ಚಿಂತನೆಯಲ್ಲಿ ನಂಬಿಕೆ (Faith) ಮತ್ತು ಬುದ್ಧಿಗಳ ಸಂಬಂಧವನ್ನು ಬಹಳ ಚೆನ್ನಾಗಿ ವಿಶ್ಲೇಷಿಸಿದ್ದಾನೆ. ನಂಬಿಕೆ, ಬುದ್ಧಿಗಿಂತ ಮೂಲಭೂತವಾದುದೆಂದು ಒಪ್ಪಿದರೂ, ಬುದ್ಧಿಗೆ ತನ್ನದೇ ಆದ ಸ್ಥಾನವನ್ನು ಅವನು ಕೊಟ್ಟಿದ್ದಾನೆ. ದೇವರನ್ನು ಕುರಿತ ಪೂರ್ಣಜ್ಞಾನ ಬುದ್ಧಿಯ ಮಿತಿಯಲ್ಲಿಲ್ಲದಿದ್ದರೂ, ಅವನನ್ನು ಕಡೇಪಕ್ಷ "ಗ್ರಹಿಸುವ" (comprehend) ಸಾಮರ್ಥ್ಯ ಅದಕ್ಕುಂಟು. ಬುದ್ಧಿಯು ಭಗವಂತನ ಕೊಡುಗೆ. ಆದುದರಿಂದ ಅದರ ಪ್ರಾಮುಖ್ಯತೆಯನ್ನು ಕಡೆಗಣಿಸಲಾಗುವುದಿಲ್ಲ ಎಂದು ಅಗಸ್ಟೈನ್ ವಾದಿಸುತ್ತಾನೆ. ಈ ಅರ್ಥದಲ್ಲಿ ಬುದ್ಧಿ ಮತ್ತು ನಂಬಿಕೆಗಳು ಪರಸ್ಪರ ವಿರುದ್ಧವಾದವುಗಳಲ್ಲ; ಅಂತಿಮಾರ್ಥದಲ್ಲಿ ಅವು ಒಂದೇ ಎಂಬುದು ಅಗಸ್ಟೈನ್‌ನ ತೀರ್ಮಾನ. ಯಾವುದನ್ನೇ ಅರ್ಥಮಾಡಿಕೊಳ್ಳುವ ಮೊದಲು ಕ್ರೈಸ್ತತತ್ತ್ವಗಳಲ್ಲಿ ಮೊದಲು ನಂಬಿಕೆಯನ್ನಿಡಬೇಕು; ಈ ನಂಬಿಕೆ ಆಂತರಿಕವಾದುದು; ಈ ನಂಬಿಕೆಯೇ ಜ್ಞಾನದ ಬಾಗಿಲು ಎಂದು ಅಗಸ್ಟೈನ್ ಪ್ರಬಲವಾಗಿ ಪ್ರತಿಪಾದಿಸುತ್ತಾನೆ.

ನಂಬಿಕೆಯನ್ನು ಹೀಗೆ ಅರ್ಥೈಸುವಲ್ಲಿ ಅಗಸ್ಟೈನ್ ಪ್ಲೋಟ್ಯೊನಸ್‌ನನ್ನು ಪೂರ್ಣವಾಗಿ ಅನುಸರಿಸುತ್ತಾನೆ. ಹಾಗೆಯೇ ಎಲ್ಲವೂ ಆಧ್ಯಾತ್ಮಿಕ; ಈ ಪ್ರಪಂಚದ ಜಂಜಾಟದಲ್ಲಿ ಸಿಲುಕದೆ ಅದನ್ನು ಮೆಟ್ಟಿನಿಂತು ಅದಕ್ಕೆ ಅತೀತವಾದ ದೇವರೊಡನೆ ಸಾಮರಸ್ಯವನ್ನು ಹೊಂದುವುದೇ ಜೀವನದ ಗುರಿಯಾಗಿರಬೇಕು, ಎಂದು ಪ್ಲೋಟೈನಸ್‌ನೊಡನೆ ಅಗಸ್ಟೈನನೂ ಪ್ರತಿಪಾದಿಸುತ್ತಾನೆ.

ದೇವರು ಸ್ವಯಂಸಿದ್ಧ ತತ್ತ್ವ. ಅವನು ಮಾನವ ಜೀವಿ ಹಾಗೂ ಇಡೀ ಜಗತ್ತಿನ ಒಡೆಯ. ಮಾನವ ಜೀವಿಗಳಲ್ಲಿನ ಅಭೌತಿಕ ಬೆಳಕೇ ದೇವರು; ಈ ಬೆಳಕೇ ಮಾನವನ ಎಲ್ಲ ಜ್ಞಾನ ಹಾಗು ತಿಳುವಳಿಕೆಯ ಮೂಲ. ಈ ದಿವ್ಯಬೆಳಕಿಲ್ಲದೆ ಮಾನವ ಜೀವ ಏನನ್ನೂ ತಿಳಿಯಲಾರದು ಎಂದು ಅಗಸ್ಟೈನ್ ಪ್ರತಿಪಾದಿಸುತ್ತಾನೆ. ಎಲ್ಲ ಕಲ್ಪನೆಗಳೂ, ಭಾವನೆಗಳೂ, ಜ್ಞಾನವೂ ದೇವರಲ್ಲಿ ಅಂತರ್ಗತ; ಈ ಭಾವನೆ ಕಲ್ಪನೆಗಳನ್ನು ಅವನು ಮಾನವರ ಮನಸ್ಸಿನ ಮೇಲೆ ಮುದ್ರೆಯೊತ್ತಿ ತನ್ನ ಅಭೌತಿಕ ಬೆಳಕಿನಿಂದ ಬೆಳಗಿಸುತ್ತಾನೆ. ಅಗ ಜೀವಿಗೆ ಜ್ಞಾನವನ್ನು

ಪಡೆಯಲು ಸಾಧ್ಯವಾಗುತ್ತದೆ. ಈ ಅರ್ಥದಲ್ಲಿ ಮಾನವನ ಮನಸ್ಸು ದೇವರೊಡನೆ ಭಾಗವಹಿಸುತ್ತದೆ ಎಂದು ಅಗಸ್ಟೈನ್ ಪ್ಲೇಟೋ ಮಾದರಿಯಲ್ಲಿ ಪ್ರತಿಪಾದಿಸುತ್ತಾನೆ. ಅಗಸ್ಟೈನ್ ಈ ವಾದವನ್ನು 'ದೈವೀದ್ದೀಪನವಾದ (Doctrine of Divine Illumination) ಎಂದು ಕರೆಯುತ್ತಾನೆ.

ಕ್ರೈಸ್ತಧರ್ಮಕ್ಕನುಗುಣವಾಗಿ, ದೇವರು ಈ ಪ್ರಪಂಚವನ್ನು ಶೂನ್ಯದಿಂದ ಒಂದು ಗೊತ್ತಾದ ಕಾಲದಲ್ಲಿ ಸೃಷ್ಟಿಸುತ್ತಾನೆಂದು ಅಗಸ್ಟೈನ್ ಪ್ರತಿಪಾದಿಸುತ್ತಾನೆ. ಆದರೆ ಪ್ಲೊಟೈನಸ್ ಸೃಷ್ಟಿ ಒಂದು ನಿರಂತರ ಕ್ರಿಯೆಯೆಂದೂ ಯಾವುದೋ ಒಂದು ಗೊತ್ತಾದ ಕಾಲದಲ್ಲಿ ಪ್ರಾರಂಭವಾಗುವುದಿಲ್ಲವೆಂದೂ ಹೇಳುವುದರ ಮೂಲಕ ಅಗಸ್ಟೈನನಿಂದ ದೂರಸರಿಯುತ್ತಾನೆ. ಪ್ರಪಂಚದಲ್ಲಿರುವ ಅನಿಷ್ಟಕ್ಕೆ ಮಾನವ ಜೀವಿಯ ಇಚ್ಛಾಸ್ವಾತಂತ್ರ್ಯವೇ ಕಾರಣವೆಂದು ಅಗಸ್ಟೈನ್ ವಾದಿಸುತ್ತಾನೆ.

೪

ಈಗ ಅಕ್ವಿನಾಸ್‌ನ ತಾತ್ತ್ವಿಕ ಚಿಂತನೆಗೆ ಬರೋಣ. ಕ್ರಿ.ಶ. 13ನೇ ಶತಮಾನದಲ್ಲಿದ್ದ (1227-1274) ಅಕ್ವಿನಾಸ್ ಕೂಡ, ಪ್ರಸಿದ್ಧ ಬರಹಗಾರನಾಗಿದ್ದ. Summa Theologica ಮತ್ತು Summa against the Gentiles ಇವನ ಪ್ರಮುಖ ಗ್ರಂಥಗಳು. ಅರಿಸ್ಟಾಟಲನ ಬಹುತೇಕ ಗ್ರಂಥಗಳ ಮೇಲೆ (ಭಾಷಾಂತರದಲ್ಲಿ) ಇವನು ಭಾಷ್ಯವನ್ನು ಬರೆದಿದ್ದಾನೆ. ಈ ಭಾಷ್ಯದಲ್ಲಿ ಅರಿಸ್ಟಾಟಲನ ತಾತ್ತ್ವಿಕ ಪರಿಕಲ್ಪನೆಗಳನ್ನು ಕ್ರೈಸ್ತಧರ್ಮದ ತತ್ತ್ವಗಳಿಗೆ ಅನ್ವಯವಾಗುವಂತೆ ಕೆಲವ್ರಸಾರಿ ತಿರುಚಿ, ಕೆಲವುಸಾರಿ ತಿದ್ದಿ ಮಾರ್ಪಡಿಸಿದ್ದಾನೆ. ಆದರೆ ದೇವರ ಅಸ್ತಿತ್ವವನ್ನು ಸಾಧಿಸುವ ಅರಿಸ್ಟಾಟಲನ ಬಹುತೇಕ ವಾದಗಳನ್ನು ತನ್ನ ತಾತ್ತ್ವಿಕ ಚಿಂತನೆಯಲ್ಲಿ ಅಕ್ಷರಶಃ ಉಪಯೋಗಿಸಿಕೊಂಡಿದ್ದಾನೆ. ಅರಿಸ್ಟಾಟಲನ ಪರಿಕಲ್ಪನೆಗಳು ಸ್ವವಿರೋಧವಾದಾಗ, ಮತ್ತು ಕ್ರೈಸ್ತಧರ್ಮದ ತತ್ತ್ವಗಳಿಗೆ ವಿರೋಧವಾದಾಗ, ತಕ್ಷಣವೇ ಅವುಗಳನ್ನು ತಿರಸ್ಕರಿಸುತ್ತಾನೆ. ಅವನ ಗ್ರಂಥಗಳು ಸ್ಪಷ್ಟತೆಯ ಪ್ರತೀಕಗಳಾಗಿವೆ. ಮಧ್ಯಕಾಲೀನ ತತ್ತ್ವಶಾಸ್ತ್ರದ ಇತಿಹಾಸದಲ್ಲೇ ಇವನು ಮೊಟ್ಟಮೊದಲಿಗೆ ಧರ್ಮಶಾಸ್ತ್ರ (Theology) ಮತ್ತು ತತ್ವಶಾಸ್ತ್ರ (Philosophy)ಗಳ ನಡುವೆ ಸ್ಪಷ್ಟ ಗಡಿರೇಖೆಯನ್ನು ಗುರುತಿಸಿದನು. ಧರ್ಮಶಾಸ್ತ್ರ ದೈವಿಕ ಸತ್ಯಗಳ (Revealed Truths) ಕ್ಷೇತ್ರ; ತತ್ತ್ವಶಾಸ್ತ್ರ ಮಾನವ ಬುದ್ಧಿಯು ಕಂಡುಹಿಡಿದು ಸಾಧಿಸಬಹುದಾದ ಸ್ವಾಭಾವಿಕ ಸತ್ಯ (Natural Truths)ಗಳ ಕ್ಷೇತ್ರ. ದೈವಿಕ ಸತ್ಯಗಳು ಮಾನವ ಬುದ್ಧಿಗೆ ವಿರೋಧವಾದವುಗಳಲ್ಲ. ಬುದ್ಧಿಗೆ ಎಟುಕದ ಆದರೆ, ಬಹು ಪ್ರಾಮಾಣ್ಯವುಳ್ಳ ದೋಷರಹಿತವಾದ ಸತ್ಯಗಳು; ಆದುದರಿಂದಲೇ ಅವು ನಂಬಿಕೆಗರ್ಹವಾದವು ಎಂದು ಅಕ್ವಿನಾಸ್ ವಾದಿಸುತ್ತಾನೆ. ತತ್ತ್ವಶಾಸ್ತ್ರ ಕ್ರಮಕ್ರಮವಾಗಿ ನಮ್ಮನ್ನು ಧರ್ಮಶಾಸ್ತ್ರದೆಡೆಗೆ ಕೊಂಡೊಯ್ಯುತ್ತದೆ; ಅದು ತನ್ನ ಪರಿಪೂರ್ಣತೆಯನ್ನು ಮುಟ್ಟುವುದು ಧರ್ಮಶಾಸ್ತ್ರದಲ್ಲಿಯೇ ಎಂಬುದು ಅಕ್ವಿನಾಸನ ಸ್ಪಷ್ಟ ಅಭಿಪ್ರಾಯ. ಹೀಗೆ ತತ್ತ್ವಶಾಸ್ತ್ರ ಮತ್ತು ಧರ್ಮಶಾಸ್ತ್ರಗಳ ಸಮನ್ವಯ ದೃಷ್ಟಿಯೇ ಇವನ ತಾತ್ತ್ವಿಕ ಚಿಂತನೆಯ ವಿಶಿಷ್ಟ ಲಕ್ಷಣ.

ಅಕ್ವಿನಾಸ್‌ಗಿಂತ ಹಿಂದೆ ಇದ್ದ ಕ್ರೈಸ್ತ ಚಿಂತಕರು ಅರಿಸ್ಟಾಟಲನ ತಾತ್ತ್ವಿಕ ಚಿಂತನೆಯನ್ನು ಅನುಮಾನ ದೃಷ್ಟಿಯಿಂದಲೇ ನೋಡುತ್ತಿದ್ದರು. ಆ ಚಿಂತನೆಗೆ ಬಲವಾದ ವಿರೋಧವೂ ಇತ್ತು. ಅಚಲನಾದ ದೇವರು ತನ್ನದೇ ಆದ ಲೋಕದಲ್ಲಿ ತನ್ನ ಆನಂದದಲ್ಲಿ ಮುಳುಗಿರುತ್ತಾನೆ; ಅಪರಿಪೂರ್ಣ ಮಾನವ ಜೀವಿಯ ಗೊಡವೆಯೇ ಅವನಿಗಿಲ್ಲ ಎಂದು ಪ್ರತಿ

ಪಾದಿಸುವ ಅರಿಸ್ಟಾಟಲನ ದೇವರ ಕಲ್ಪನೆ, ದಯಾಮಯನೂ, ಅಂತರ್ಯಾಮಿಯೂ ಜೀವೋದ್ಧಾರಕನೂ ಆದ ಕ್ರೈಸ್ತಧರ್ಮದ ದೇವರ ಕಲ್ಪನೆಗೆ ವಿರುದ್ಧವಾದುದೆಂದು ಇಲ್ಲಿ ಬೇರೆ ಹೇಳಬೇಕಾಗಿಲ್ಲ. ಆದುದರಿಂದಲೇ ಅರಿಸ್ಟಾಟಲನ ತಾತ್ತ್ವಿಕ ಚಿಂತನೆಯನ್ನು ಆಹ್ವಾನಿಸುವುದು ಆಪತ್ತೇ ಎಂದು ಹಿಂದಿನ ಕ್ರೈಸ್ತ ಚಿಂತಕರು ನಂಬಿದ್ದರು. ಆದರೆ ಅಕ್ವಿನಾಸ್ ಎಲ್ಲಿಲ್ಲದ ಹುರುಪಿನಿಂದ ಅರಿಸ್ಟಾಟಲನ ತಾತ್ತ್ವಿಕ ಚಿಂತನೆಯನ್ನು ಸ್ವಾಗತಿಸುತ್ತಾನೆ; ಆದರೂ ಅರಿಸ್ಟಾಟಲನ ತಾತ್ತ್ವಿಕ ಕಲ್ಪನೆಗಳು ಕ್ರೈಸ್ತಧರ್ಮಕ್ಕೆ ವಿರುದ್ಧವಾದಾಗ, ತಕ್ಷಣವೇ ಅವುಗಳನ್ನು ತ್ಯಜಿಸುತ್ತಾನೆ.

ಅರಿಸ್ಟಾಟಲನಂತೆ ಅಕ್ವಿನಾಸನಿಗೂ ಪ್ರತ್ಯೇಕ (Particulars)ಗಳನ್ನು ಕಂಡರೆ ಬಹಳ ಇಷ್ಟ, ಗೌರವ. ಅವನು ಯಾವಾಗಲೂ ಪ್ರತ್ಯೇಕಗಳ ಮೂಲಕ 'ಸಾಮಾನ್ಯ' (Universal)ವನ್ನು, ಕಾರ್ಯದ ಮೂಲಕ ಕಾರಣವನ್ನು ಅರ್ಥೈಸುತ್ತಾನೆ. ಈ ಜಗತ್ತು ಸತ್ಯ, ಮಿಥ್ಯೆಯಲ್ಲ. ಜೀವನದ ಪರಮೋತ್ಕೃಷ್ಟ ಗುರಿ ದೇವರನ್ನು ಸೇರುವುದು ಎಂದು ಅಕ್ವಿನಾಸ್ ಸಾರುತ್ತಾನೆ.

೫

ಕೊನೆಯದಾಗಿ ಇಡೀ ಮಧ್ಯಕಾಲೀನ ಚಿಂತನೆಯನ್ನು ಕುರಿತು ಇಷ್ಟು ಹೇಳಬಹುದು: ಅದು ನಡೆದುಬಂದ ದಾರಿಯನ್ನು ಈ ಕೆಳಗಿನ ನಾಲ್ಕು ಹಂತಗಳು ಸೂಚಿಸುತ್ತವೆ.

(೧) ಕ್ರೈಸ್ತಧರ್ಮ 'ತಾತ್ತ್ವಿಕ ಚಿಂತನೆ'ಯೆನಿಸಿಕೊಳ್ಳಲುಪಕ್ರಮಿಸಿದ ಕಾಲ. ಇದು ಕ್ರಿ.ಶ. 2ನೇ ಶತಮಾನದಿಂದ 12ನೇ ಶತಮಾನದ ಅಂತ್ಯದವರೆಗೂ ಹಬ್ಬುತ್ತದೆ.

(೨) ಕ್ರೈಸ್ತಧರ್ಮ ಮತ್ತು ತಾತ್ತ್ವಿಕ ಪರಿಕಲ್ಪನೆಗಳ 'ರಚನಾತ್ಮಕ ಸಮನ್ವಯ' ಕಾಲ. ಇದು ಕ್ರಿ.ಶ. 13ನೇ ಶತಮಾನದಲ್ಲಿ ವಿಶೇಷತಃ ಅಕ್ವಿನಾಸ್‌ನ ಮೂಲಕ ಉಂಟಾಗುತ್ತದೆ.

(೩) ಕ್ರೈಸ್ತ ತಾತ್ತ್ವಿಕ ಚಿಂತನೆ ಕಟುವಿಮರ್ಶೆಗೊಳಗಾಗಿ ತನ್ನ ಬೆಳವಣಿಗೆಯಲ್ಲಿ ಕ್ರಮೇಣ ಕುಂಠಿತವಾದುದು. ಇದು ಕ್ರಿ.ಶ. 14ನೇ ಶತಮಾನದಲ್ಲಿ ವಿಶೇಷತಃ ಒಕ್ಹಮ್ ಮುಂತಾದ ಚಿಂತಕರ ಕೈಯಲ್ಲಿ ಉಂಟಾಗುತ್ತದೆ.

(೪) ಕ್ರೈಸ್ತ ಚಿಂತನೆ ಪೂರ್ಣ ಸತ್ತಿಸಿ ಆಧುನಿಕ ಪಾಶ್ಚಾತ್ಯ ಚಿಂತನೆಯ ಉಗಮಕ್ಕೆ ದಾರಿ ಮಾಡಿಕೊಟ್ಟದು. ಇದು ಕ್ರಿ.ಶ. 15ನೇ ಶತಮಾನದ ಅಂತ್ಯದವರೆಗೂ ಹಬ್ಬುತ್ತದೆ. ಕ್ರಿ.ಶ. 16ನೇ ಶತಮಾನದಲ್ಲಿ ಆಧುನಿಕ ಪಾಶ್ಚಾತ್ಯ ತಾತ್ತ್ವಿಕ ಚಿಂತನೆ ತಲೆಯೆತ್ತುತ್ತದೆ.

ಇದು ಮಧ್ಯಕಾಲೀನ ಪಾಶ್ಚಾತ್ಯ ಚಿಂತನೆಯ ಒಂದು ಪಕ್ಷಿನೋಟ.

ಅಡಿಟಿಪ್ಪಣಿಗಳು

1. ಕ್ರೈಸ್ತಧರ್ಮ ಏಕದೇವತಾವಾದ (Monotheism). ಈ ಧರ್ಮದ ಪ್ರಕಾರ 'ಸತ್ಯ' (Reality) ಏಕ; ಆದರೆ ಅದು ಕೇವಲ ಏಕವಲ್ಲ, ಅದ್ವಯವಲ್ಲ; ಅನೇಕದಲ್ಲಿ ಏಕ ಏಕದಲ್ಲಿ ಅನೇಕ (Many in One and One in Many). ತಂದೆ (Father), ದೇವಪುತ್ರ (Son) ಮತ್ತು ಪವಿತ್ರಾತ್ಮ (The Holy Spirit or The Holy Ghost)— ಇವೇ ಏಕಸತ್ಯದ ಮೂರು ಮುಖಗಳು. ತಂದೆ ಈ ಭೂಮಿಗೆ ಇಳಿದುಬರುವುದಿಲ್ಲ;

ಅವನು ಅತೀತ (transcendental). ಪ್ರಪಂಚವನ್ನು ಅನ್ಯಾಯ, ಅಂಧಕಾರ, ಪಾಪಗಳಿಂದ ವಿಮೋಚನೆಗೊಳಿಸಲು ತನ್ನ ಏಕೈಕ ಸಂಜಾತಪುತ್ರನಾದ (the only begotten son) ಏಸುಕ್ರಿಸ್ತನನ್ನು ಈ ಭೂಮಿಗೆ ಕಳುಹಿಸುತ್ತಾನೆ. ಏಸುವಿನ ನುಡಿಮುತ್ತುಗಳೇ ದೇವರ ನುಡಿಮುತ್ತುಗಳು. ತನ್ನಲ್ಲಿ ಸುಪ್ತವಾಗಿರುವ ಇಚ್ಛಾಬಲ (will) ಮತ್ತು ಬುದ್ಧಿ (intellect) ಗಳನ್ನು ಈ ಪ್ರಪಂಚವನ್ನು ಸೃಷ್ಟಿಸುವುದರ ಮೂಲಕ ದೇವರು ಹೊರಪಡಿಸುತ್ತಾನೆ. ಕ್ರೈಸ್ತ ಧರ್ಮದ ಪವಿತ್ರಾತ್ಮ (The holy spirit) ತನ್ನದೇ ಆದ ವಿಶಿಷ್ಟ ಕಾರ್ಯವನ್ನು ಹೊಂದಿದೆ. ಅದೆಂದರೆ ಜೀವಿಯು ಕ್ರಮಕ್ರಮವಾಗಿ ಕ್ರೈಸ್ತ ತತ್ತ್ವಗಳಲ್ಲಿ ಬಲವಾದ ನಂಬಿಕೆಯನ್ನು ಹೊಂದುವಂತೆ ಮಾಡುವುದು. ಪವಿತ್ರಾತ್ಮ ಜೀವಿಯಲ್ಲಿ ಸೇರಿಕೊಂಡು ಅದಕ್ಕೆ ಪವಿತ್ರತೆಯನ್ನು ದೈವಿಕತೆಯನ್ನೂ (divinity) ನೀಡುತ್ತದೆ. ಒಟ್ಟಿನಲ್ಲಿ ಜೀವಿ ನಿರ್ಮಲ ಜೀವನವನ್ನು ನಡೆಸುವಂತೆ ಇದು ಪ್ರೇರೇಪಿಸುತ್ತದೆ.

ಕ್ರೈಸ್ತಧರ್ಮದ ಪ್ರಕಾರ ದೇವಪುತ್ರನಾದ ಯೇಸುಕ್ರಿಸ್ತ ದೇವರಿಂದ ಸಂಜಾತನಾಗುತ್ತಾನೆ; 'ಮಾಡಲ್ಪಡುವುದಿಲ್ಲ' (The son is begotten, not made). ಪವಿತ್ರಾತ್ಮ (holy spirit) ಮಾಡಲ್ಪಡುವುದಿಲ್ಲ; ದೇವರಿಂದ 'proceed' ಆಗುತ್ತದೆ. ಮಾನವ ಜೀವಿ ಮತ್ತು ಪ್ರಪಂಚಗಳು ದೇವರಿಂದ ಸಂಜಾತವಾಗುವುದಿಲ್ಲ; ಅವು 'proceed' ಆಗುವುದೂ ಇಲ್ಲ; ಅವು 'ಮಾಡಲ್ಪಡುತ್ತವೆ'. (They are not begotten; they are not emanations from the divine; on the other hand they are made). ಇವುಗಳನ್ನು ದೇವರು ಶೂನ್ಯದಿಂದ ಸೃಷ್ಟಿಸುತ್ತಾನೆ.

2. ಕ್ರೈಸ್ತಧರ್ಮದ ಪ್ರಕಾರ ಶರೀರ, ಆತ್ಮನ 'ಸೆರೆಮನೆ'ಯಲ್ಲ. 'ಅಶರೀರ ಆತ್ಮ' ಅದರ ಪ್ರಕಾರ ಒಂದು ಅಮೂರ್ತ ತತ್ತ್ವ. ಶರೀರ ಸೆರೆಮನೆಯಲ್ಲದ್ದರಿಂದ ಅದರಿಂದ ಆತ್ಮ ಬಿಡುಗಡೆ ಹೊಂದಬೇಕಾದ ಪ್ರಮೇಯವೇ ಏಳುವುದಿಲ್ಲ. ಕ್ರೈಸ್ತ ತತ್ತ್ವಗಳಲ್ಲಿ ಜೀವಿ ಅಚಲ ನಂಬಿಕೆ, ಶ್ರದ್ಧೆಯನ್ನಿಟ್ಟು ಸಶರೀರನಾಗಿ ಪರಿಶುದ್ಧ ಜೀವನವನ್ನು ನಡೆಸುವುದರ ಮೂಲಕ ದೇವರನ್ನು ಸೇರಬೇಕು ಎಂದು ಈ ಧರ್ಮ ಪ್ರತಿಪಾದಿಸುತ್ತದೆ. ಇದೇ ಜೀವನದ ಗುರಿ. ಏಸುಕ್ರಿಸ್ತ ಶಿಲುಬೆಗೇರಿಸಲ್ಪಟ್ಟ ಮೇಲೂ ಪುನರುತ್ಥಾನನಾದ ಎಂದು ಈ ಧರ್ಮ ನಂಬುತ್ತದೆ.

3. ಜೀವಿಯ ಉದ್ಧಾರಕ್ಕೆ ದೇವರ ದಯೆ (ಪ್ರಸಾದ) ಅತ್ಯಾವಶ್ಯಕ ಎಂದು ಈ ಧರ್ಮ ಸಾರುತ್ತದೆ.

4. ಜೀವಿ ಎಷ್ಟೇ 'ಪಾಪಿ'ಯಾದರೂ ಅವನು ಪಶ್ಚಾತ್ತಾಪಪಡುವುದರ ಮೂಲಕ, ದೇವರಲ್ಲಿ ಅನನ್ಯ ಶರಣಾಗುವುದರ ಮೂಲಕ ದೇವರನ್ನು ಸೇರಬಹುದು, ಎಂಬ ಆಶಾವಾದವನ್ನು ಈ ಧರ್ಮ ಪ್ರತಿಪಾದಿಸುತ್ತದೆ.

"ನಿನಗೆ ಉಳಿದ ಯಾವ ಸುಖಗಳಿಲ್ಲದಿದ್ದರೂ ಚಿಂತೆಯಿಲ್ಲ; ಈಶ್ವರನ ಅಡಿಯಾಳಾಗಿ, ಮಾತಿನಲ್ಲಿ ಮಾತ್ರವಲ್ಲ–ಕಾರ್ಯರಂಗದಲ್ಲಿ–ಉತ್ತಮ ಪುರುಷನಾಗಿ, ವಿವೇಕಿಯಾಗಿ, ಬಾಳುವ ಆನಂದವೇ ಸಾಕು. ಇಂತಹ ಜೀವನವನ್ನು ಗಳಿಸಿರುವುದೆಂದರೆ ಯಾರಿಗೆ ತಾನೇ ಹೆಮ್ಮೆಯಾಗದು ! ಇತರರು ತಮ್ಮ ಪಂಥಗಳಲ್ಲಿ ಗಂಭೀರವಾಗಿ ತರ್ಕಮಾಡಿ ಸಮಸ್ಯೆಗಳ ರೂಪದಲ್ಲಿ ಹೇಳುತ್ತಿರುವುದನ್ನು ನಾನು ಅನುಷ್ಠಾನದಲ್ಲಿ ಉದಾಹರಿಸುತ್ತಿದ್ದೇನೆ. ಅವರು ಪ್ರಸಂಗ ಮಾಡಿ, ವಾದಜಲ್ಪಗಳನ್ನು ಹೂಡಿ, ಕೊಂಡಾಡುತ್ತಿರುವ ಗುಣಾತಿಶಯಗಳನ್ನು ನಾನು ನನ್ನ ಜೀವನದಲ್ಲೇ ಅನುಸಂಧಾನವನ್ನು ಸ್ಯೂಸನ ಕೃಪೆಯಿಂದ ನಾನೇ ತಿಳಿದುಕೊಳ್ಳಬಲ್ಲೆ; ಮತ್ತು ಆತನ ದಯೆಯಿಂದ ನಾನು ಯೋಗ್ಯನಾದ ಬಂಟನಾಗಿರುವೆನು, ಪಟ್ಟಣಿಗನಾಗಿರುವೆನು; ಮನಸ್ಸಿಗೆ ಅಜೇಯವಾದ ವಸ್ತುಗಳು ಯಾವುವೂ ಇಲ್ಲವೆಂದು ಇತರರಿಗೆ ತೋರಿಸಿಕೊಡಲು ಅರ್ಹನಾದ ಸಾಕ್ಷಿಯಾಗಿರುವೆನು–ಎಂಬುದನ್ನು ಸ್ಯೂಸನೇ ಕಂಡುಕೊಂಡಿದ್ದಾನೆ. ನನ್ನ ಭಯಭ್ರಾಂತಿಗಳೆಲ್ಲಾ ನಿರಾಧಾರವಾದವು, ನನ್ನ ಆಶಾಪಾಶಗಳೆಲ್ಲಾ ನಿರರ್ಥಕವಾದುವು. ಬಾಹ್ಯವಸ್ತುಗಳಲ್ಲಿ ನಮ್ಮ ಶ್ರೇಯವಿಲ್ಲ, ನಮ್ಮ ಆತ್ಮೀಯ ಜೀವನದಲ್ಲೇ ನಾವದನ್ನು ಅರಸಬೇಕು. ಅಲ್ಲಿಯೇ ಸಿಗದಿದ್ದರೆ ನಮಗದು ಮತ್ತೆಲ್ಲಿಯೂ ಸಿಕ್ಕದು ಇದನ್ನು ಮನಗಾಣಿಸುವುದಕ್ಕೋಸ್ಕರ ಸ್ಯೂಸನು ನನ್ನನ್ನು ಇಂದು ಇಲ್ಲಿಗೆ ಕರೆಸುವನು, ನಾಳೆ ಅಲ್ಲಿಗೆ ಕಳುಹಿಸುವನು. ....ಇಂಥ ಸೇವೆಗೆ ನನ್ನನ್ನು ನೇಮಿಸಿರಲಾಗಿ, ಆ ನನ್ನ ದೇವದೇವನ ಆಣತಿ ಅಪ್ಪಣೆಗಳಿಗೇ ನನ್ನ ತನುಮನವನ್ನೆಲ್ಲಾ ಧಾರೆಯೆರೆಯದೆ, ನಾನೆಲ್ಲಿದ್ದೇನೆ. ಯಾರೊಡನಿದ್ದೇನೆ, ನನ್ನನ್ನು ಕುರಿತು ಜನರೇನೆಂದುಕೊಳ್ಳುತ್ತಾರೆ, ಎಂಬ ಈ ಅಲ್ಪ ವಿಚಾರಗಳಿಗೆ ನಾನು ಕಿವಿಗೊಡಲೆ?"

—ಸ್ಟೋಯಿಕ ಗುರು
ಎಪಿಕ್ಟೆಟಸ್‌ನ ಉಪದೇಶಸಾರದಿಂದ*

---

*ಕೀರ್ತಿಶೇಷ ಪ್ರೊಫೆಸರ್ ಕೆ. ಆರ್. ಶ್ರೀನಿವಾಸಯ್ಯಂಗಾರ್ ಅವರ 'ಗ್ರೀಕರ ತತ್ತ್ವ ಸಾರ ಸಂಗ್ರಹ' ಪು. 344 (ಮೈಸೂರು ವಿಶ್ವವಿದ್ಯಾನಿಲಯ, 1960).


ಕೆ. ಎನ್. ವೆಂಕಟರಾಯಪ್ಪ
ಮತ್ತು
ಕೆ. ಲಕ್ಷ್ಮೀನಾರಾಯಣ್

ದಾವಣಗೆರೆ ನಗರದ ಪ್ರಾಕೃತಿಕ ಪರಿಸರ

ದಾವಣಗೆರೆ ನಗರ ತ್ವರಿತಗತಿಯಲ್ಲಿ ಬೆಳೆಯುತ್ತಿರುವ ಕೈಗಾರಿಕೆಯ ಮತ್ತು ವಾಣಿಜ್ಯದ ಕೇಂದ್ರ. ಇಂದು ಇದು ಚಿತ್ರದುರ್ಗ ಜಿಲ್ಲೆಯಲ್ಲಿದೆ ಮತ್ತು ದಾವಣಗೆರೆ ತಾಲೂಕು ಮತ್ತು ಉಪವಿಭಾಗಗಳ ಕೇಂದ್ರ ಕಾರ್ಯಸ್ಥಾನವಾಗಿದೆ. 1971ರ ಜನಗಣತಿಯ ಪ್ರಕಾರ ನಗರದ ಜನಸಂಖ್ಯೆ 1,21,110 ಇತ್ತು. ಈ ಲೇಖನದಲ್ಲಿ ನಗರದ ಪ್ರಾಕೃತಿಕ ಪರಿಸರ ಮತ್ತು ಅದರಿಂದ ನಗರದ ಬೆಳವಣಿಗೆಗೆ ಆದ ಪ್ರತ್ಯಕ್ಷ ಪ್ರಯೋಜನಗಳ ಬಗ್ಗೆ ವಿವರಿಸಲಾಗಿದೆ. ಪ್ರಾಕೃತಿಕ ಪರಿಸರದಿಂದಾಗಿ ನಗರದ ಬೆಳವಣಿಗೆಗೆ ಪರೋಕ್ಷ ಪ್ರಯೋಜನಗಳೆಷ್ಟೋ ಆಗಿದ್ದರೂ ಇಲ್ಲಿ ಸ್ಥಳಾಭಾವದಿಂದಾಗಿ ಅವುಗಳನ್ನು ವಿವರಿಸಲು ಸಾಧ್ಯವಾಗಿಲ್ಲ.

ಸ್ಥಾನ

ದಾವಣಗೆರೆ ಉತ್ತರ ಅಕ್ಷಾಂಶ 14°26'50" ರಿಂದ 14°28'50" ಮತ್ತು ಪೂರ್ವ ರೇಖಾಂಶ 75°54'20" ರಿಂದ 75°56'20"ರ ಮಧ್ಯೆ ಇದೆ. ಇದು ಕರ್ನಾಟಕ ರಾಜ್ಯದ ಭೂಗೋಳಿಕ ಕೇಂದ್ರಕ್ಕೆ ಹತ್ತಿರದಲ್ಲಿರುವ ಏಕಮಾತ್ರ ನಗರವಾಗಿದೆ.[1] ಇದು ಬೆಂಗಳೂರಿನಿಂದ 259 ಕಿ.ಮೀ, ಚಿತ್ರದುರ್ಗದಿಂದ 57 ಕಿ.ಮೀ., ಹರಿಹರದಿಂದ 14 ಕಿ.ಮೀ , ಹುಬ್ಬಳ್ಳಿಯಿಂದ 145 ಕಿ.ಮೀ., ಧಾರವಾಡದಿಂದ 166 ಕಿ.ಮೀ., ಬಳ್ಳಾರಿಯಿಂದ 192 ಕಿ.ಮೀ., ಮತ್ತು ಶಿವಮೊಗ್ಗದಿಂದ 93 ಕಿ.ಮೀ. ದೂರದಲ್ಲಿದೆ (ನಕ್ಷೆ 1 ಸುತ್ತಲಿನ ಪ್ರದೇಶದಲ್ಲಿ ದಾವಣಗೆರೆಯ ಸ್ಥಾನವನ್ನು ತೋರಿಸುತ್ತದೆ)




ನಕ್ಷೆ ೧

ಮೇಲ್ಮೈ ಸ್ವರೂಪಗಳು

ದಾವಣಗೆರೆ ದಕ್ಷಿಣ ಪ್ರಸ್ಥಭೂಮಿಯಲ್ಲಿ ಪಶ್ಚಿಮ ಘಟ್ಟಗಳ ಪೂರ್ವಭಾಗದಲ್ಲಿದೆ. ಇದು ಮಧ್ಯಸ್ಥ ಸಮುದ್ರ ಮಟ್ಟಕ್ಕಿಂತ 588.27 ಮೀಟರ್ ಎತ್ತರದಲ್ಲಿದ್ದು ಈ ಪ್ರದೇಶದ ಮುಖ್ಯ ಹರಿವು ತುಂಗಭದ್ರಾ ನದಿ ದಾವಣಗೆರೆಯ ಪಶ್ಚಿಮದಿಕ್ಕಿನಲ್ಲಿ 16 ಕಿ. ಮೀ. ದೂರದಲ್ಲಿ ಹರಿಯುತ್ತದೆ. ನಗರದ ಎಡಗಡೆಯ ಭಾಗ ವಾಯುವ್ಯದ ಕಡೆಗೆ ಮತ್ತು ಬಲಗಡೆಯ ಭಾಗ

ಈಶಾನ್ಯದ ಕಡೆಗೆ ಸ್ವಲ್ಪ ಇಳುಕಲಾಗಿದೆ. ನಗರದ ಪಶ್ಚಿಮಭಾಗದಿಂದ ಹರಿಯುವ ನೀರು ತುಂಗಭದ್ರಾ ನದಿಯನ್ನು ಸೇರುತ್ತದೆ. ನಗರದ ಪೂರ್ವ ಭಾಗದಲ್ಲಿರುವ ಬೇತೂರು ಹಳ್ಳ ನಗರದ ಪೂರ್ವಭಾಗದಿಂದ ಹರಿಯುವ ನೀರನ್ನು ಸಂಗ್ರಹಿಸುತ್ತದೆ ಮತ್ತು ಅದು ನಗರದ ಪೂರ್ವಭಾಗದ ಎಲ್ಲೆಯಾಗಿದೆ. ದಾವಣಗೆರೆ ಮತ್ತು ಹರಿಹರಗಳ ಮಧ್ಯೆ ಇರುವ, ಅಷ್ಟೇನೂ ಎತ್ತರವಲ್ಲದ, ಏಕಮಾತ್ರ ಬಾಲೆಗುಡ್ಡ ಈ ಮೈದಾನದಲ್ಲಿ ಗಮನ ಸೆಳೆಯುತ್ತದೆ. (ನಕ್ಷೆ 2 ದಾವಣಗೆರೆ ನಗರಪ್ರದೇಶವನ್ನು ತೋರಿಸುತ್ತದೆ).



ನಕ್ಷೆ 2

ಭೂಸ್ವರೂಪ


ಶಿಲಾರಚನೆ

ಬಳ್ಳಾರಿ, ಧಾರವಾಡ, ಶಿವಮೊಗ್ಗ ಮತ್ತು ಚಿತ್ರದುರ್ಗ ಜಿಲ್ಲೆಗಳನ್ನೊಳಗೊಂಡ ದಾವಣಗೆರೆ ಪ್ರದೇಶದಲ್ಲಿ ಮುಖ್ಯವಾಗಿ ಧಾರವಾಡ ಭಿನ್ನಸ್ತರ ಶಿಲೆಗಳಿವೆ. ಇವು ರಾಜ್ಯದುದ್ದಕ್ಕೂ ವಾಯುವ್ಯ–ಆಗ್ನೇಯ ದಿಕ್ಕಿನಲ್ಲಿ ಉದ್ದವಾಗಿಯೂ, ಕಿರಿದಾಗಿಯೂ, ಒಂದೇ ಅಗಲದ್ದಾಗಿಯೂ ಇರುವ ಪಟ್ಟಗಳ ರೂಪದಲ್ಲಿವೆ. ಇಂಥ ಎಷ್ಟೋ ಪಟ್ಟಗಳಲ್ಲಿ ಧಾರವಾಡ–ಶಿವಮೊಗ್ಗ ಪಟ್ಟ ಮತ್ತು ಗದಗ-ಚಿಕ್ಕನಾಯಕನಹಳ್ಳಿ ಪಟ್ಟ ವಿಸ್ತಾರವಾದವುಗಳು. ಈ ರಚನೆಗಳು ಎಷ್ಟೋ ಲೋಹದ ಮತ್ತು ಲೋಹವಲ್ಲದ ಖನಿಜಗಳನ್ನೊಳಗೊಂಡಿವೆ. ಈ ಶಿಲೆಯಲ್ಲಿ ಕಬ್ಬಿಣದ ಅದಿರು, ಮ್ಯಾಂಗನೀಸ್, ಕ್ರೋಮೈಟ್ ಮತ್ತು ಬಾಕ್ಸೈಟ್‌ಗಳ ವ್ಯಾಪಕವಾದ ನಿಕ್ಷೇಪವಿದೆ. ಭಾರತದಲ್ಲಿ ದೊರಕುವ ಬಂಗಾರವೆಲ್ಲ ಈ ಶಿಲೆಯಿಂದ ಲಭ್ಯವಾಗುತ್ತದೆ. ಈ ಶಿಲೆಯ ಘಟಕಗಳು ಸ್ಲೇಟ್, ಆ್ಯಂಫಿಬೊಲೈಟ್, ಫಿಲ್ಲೈಟ್, ಷೆಲ್, ಕ್ವಾರ್ಟ್ಸ್ ಮತ್ತು ಹರಳು ಸುಣ್ಣದ ಕಲ್ಲು.

ಚಿತ್ರದುರ್ಗ ಜಿಲ್ಲೆಯ ಪೂರ್ವಭಾಗ ಗ್ರಾನಿಟಿಕ್ ಗ್ನೈಯಿಸ್‌ನ್ನೊಳಗೊಂಡಿದೆ (ಬೆಣಚುಕಲ್ಲು, ಫೆಲ್‌ಸ್ಪಾರ್ ಮತ್ತು ಅಭ್ರಕಗಳಿಂದ ಕೂಡಿ ಪದರಗಳಾಗಿರುವ ಶಿಲೆ). ಈ ಶಿಲಾರಚನೆಗಳು ಬಹುಶಃ ಧಾರವಾಡ ಶಿಲಾರಚನೆಗಳಿಗಿಂತ ಇತ್ತೀಚಿನವಾಗಿದ್ದಿರಬೇಕು. ಇವು ಬೇರೆ ತರಹದ್ದಾಗಿವೆ ಮತ್ತು ಧಾರವಾಡ ಭಿನ್ನಸ್ತರ ಶಿಲೆಗಳ ನಡುವೆ ಸೇರಿಕೊಂಡಿವೆ. ಈ ಅಂತಸ್ಸರಣದಿಂದ ನಾಲ್ಕು ವಿಧದ ಶಿಲೆಗಳ ರಚನೆಯಾಗಿದೆ. ಅವು ಚಾಂಪಿಯನ್‌ಗ್ನೈಯಿಸ್, ಪೆನಿನ್‌ಸುಲಾರ್ ಗ್ನೈಯಿಸ್, ಕ್ಲೊಸ್ಪೇಟ್ ಮತ್ತು ಕ್ಲೋಸ್‌ಪೇಟ್ ಗ್ರಾನಿಟ್.[2]

ಖನಿಜಸಂಪತ್ತು

ದಾವಣಗೆರೆ ಪ್ರದೇಶದಲ್ಲಿರುವ ಎಲ್ಲ ಜಿಲ್ಲೆಗಳಲ್ಲಿ ನಿರ್ದಿಷ್ಟ ಖನಿಜವಲಯಗಳಿವೆ. ಈ ವಲಯಗಳು ಧಾರವಾಡ ಜಿಲ್ಲೆಯ ಆಗ್ನೇಯ ಭಾಗದಲ್ಲಿ, ಬಳ್ಳಾರಿ ಜಿಲ್ಲೆಯ ಮಧ್ಯಭಾಗದಲ್ಲಿ, ಚಿತ್ರದುರ್ಗ ಜಿಲ್ಲೆಯ ಮಧ್ಯ ಮತ್ತು ದಕ್ಷಿಣ ಭಾಗವಲ್ಲಿವೆ ಮತ್ತು ಶಿವಮೊಗ್ಗ ಜಿಲ್ಲೆಯಲ್ಲಿ ಎಲ್ಲ ಕಡೆಗಳಲ್ಲಿ ಹರಡಿಕೊಂಡಿವೆ. ಪ್ರತಿ ಜಿಲ್ಲೆಯಲ್ಲಿ ಒಂದು ಯೋಜಿತ ಕೈಗಾರಿಕಾಭಿವೃದ್ಧಿ ಪ್ರದೇಶವಿದೆ. ಇವು ಚಿತ್ರದುರ್ಗ ಜಿಲ್ಲೆಯಲ್ಲಿ ದಾವಣಗೆರೆ–ಹರಿಹರ, ಬಳ್ಳಾರಿ ಜಿಲ್ಲೆಯಲ್ಲಿ ಹೊಸಪೇಟೆ, ಶಿವಮೊಗ್ಗ ಜಿಲ್ಲೆಯಲ್ಲಿ ಶಿವಮೊಗ್ಗ - ಭದ್ರಾವತಿ ಮತ್ತು ಧಾರವಾಡ ಜಿಲ್ಲೆಯಲ್ಲಿ ಹುಬ್ಬಳ್ಳಿ-ಧಾರವಾಡಗಳಾಗಿವೆ. ಈ ನಾಲ್ಕು ಕೈಗಾರಿಕಾಭಿವೃದ್ಧಿ ಪ್ರದೇಶಗಳಲ್ಲಿ ಶಿವಮೊಗ್ಗ - ಭದ್ರಾವತಿ ಚೆನ್ನಾಗಿ ಅಭಿವೃದ್ಧಿಯಾಗಿದೆ. ಇಲ್ಲಿ ಒಂದು ಉಕ್ಕಿನ, ಒಂದು ಕಾಗದದ, ಒಂದು ಸಿಮೆಂಟ್‌ನ, ಒಂದು ಸಕ್ಕರೆಯ, ಒಂದು ನಾರಿನ ಹಲಗೆಯ, ಹಲವು ಬೆಂಕಿಪೊಟ್ಟಣದ ಕಾರಖಾನೆಗಳು, ಮರ ಕೊಯ್ಯುವ ಮಿಲ್ಲುಗಳು ಮತ್ತು ಹಲವು ಕೈಮಗ್ಗದ ಬಟ್ಟೆಗಳನ್ನು, ಚರ್ಮದ ವಸ್ತುಗಳನ್ನು, ಪೀಠೋಪಕರಣಗಳನ್ನು, ಕಬ್ಬಿಣದ ಸಾಮಾನುಗಳನ್ನು ಮತ್ತು ಗೃಹೋಪಯೋಗಿ ಪಾತ್ರೆಗಳನ್ನು ತಯಾರಿಸುವ ಚಿಕ್ಕ ಕೇಂದ್ರಗಳಿವೆ. ಎರಡನೆಯ ಸ್ಥಾನದಲ್ಲಿರುವ ದಾವಣಗೆರೆ–ಹರಿಹರ ಪ್ರದೇಶಗಳಲ್ಲಿ ಹತ್ತಿಯ ಗಿರಣಿಗಳು, ಉಣ್ಣೆಯ ಮಿಲ್ಲುಗಳು, ಎಂಜಿನಿಯರಿಂಗ್, ಸಕ್ಕರೆ ಮತ್ತು ಪೊಲಿಫೈಬರ್ ಕಾರಖಾನೆಗಳಿವೆ. ಮೂರನೆಯ ಸ್ಥಾನದಲ್ಲಿರುವ ಹುಬ್ಬಳ್ಳಿ-ಧಾರವಾಡದಲ್ಲಿ ಒಂದು ದೊಡ್ಡ ರೈಲ್ವೆ ವರ್ಕ್‌ಷಾಪ್, ಅನೇಕ ಹತ್ತಿಯ ಗಿರಣಿಗಳು ಮತ್ತು ಎಣ್ಣೆಯ ಮಿಲ್ಲುಗಳಿವೆ. ನಾಲ್ಕನೆಯ ಸ್ಥಾನದಲ್ಲಿರುವ ಹೊಸಪೇಟೆಯಲ್ಲಿ ಒಂದು ಚಿಕ್ಕ ಉಕ್ಕಿನ,



ಪ್ರದೇಶದಲ್ಲಿರುವ ಖನಿಜ ಸಂಪತ್ತು

ನಕ್ಷೆ 3

ಎರಡು ಸಕ್ಕರೆಯ, ಒಂದು ಸಿಮೆಂಟಿನ ಕೊಳವೆಯ, ಒಂದು ಗೊಬ್ಬರದ, ಒಂದು ರಟ್ಟಿನ, ಒಂದು ವಾಹನಗಳ ಹೊರಕವಚವನ್ನು ಕಟ್ಟುವ ಕಾರಖಾನೆಗಳು ಮತ್ತು ಹಲವು ಹತ್ತಿಯ ಕಾಳು ಬೇರ್ಪಡಿಸಿ ಚಪ್ಪಟೆಮಾಡುವ ಮತ್ತು ಎಣ್ಣೆಯ ಮಿಲ್ಲುಗಳಿವೆ ಈಗ ಹೊಸಪೇಟೆ ಮತ್ತು ಬಳ್ಳಾರಿಗಳ ನಡುವೆ ಇರುವ ತೋರಣಗಲ್ಲಿನಲ್ಲಿ ಒಂದು ದೊಡ್ಡ ಉಕ್ಕಿನ ಕಾರಖಾನೆ ನಿರ್ಮಾಣ ವಾಗುತ್ತಿದೆ.

ಹುಬ್ಬಳ್ಳಿ – ಧಾರವಾಡವನ್ನು ಬಿಟ್ಟು ಉಳಿದೆಲ್ಲ ಯೋಜಿತ ಕೈಗಾರಿಕಾಭಿವೃದ್ಧಿ ಪ್ರದೇಶಗಳು ಖನಿಜವಲಯಗಳಲ್ಲಿವೆ. ಭದ್ರಾವತಿಯಲ್ಲಿರುವ ಕಾರಖಾನೆಗಳು ಅಲ್ಲಿಂದ ಮೂವತ್ತು ಮೈಲುಗಳ ತ್ರಿಜ್ಯದ ಪ್ರದೇಶದಲ್ಲಿರುವ ಕಬ್ಬಿಣ ಮತ್ತು ಮ್ಯಾಂಗನೀಸ್ ಅದಿರು, ಸುಣ್ಣದ ಕಲ್ಲು ಮತ್ತು ಚೈನಾ ಜೇಡಿಯನ್ನು ಉಪಯೋಗಿಸಿಕೊಳ್ಳುತ್ತಿವೆ. ಹೊಸಪೇಟೆಯಲ್ಲಿ ಈಗ ನಿರ್ಮಾಣ ವಾಗುತ್ತಿರುವ ಉಕ್ಕಿನ ಕಾರಖಾನೆಯು ನಿರ್ಮಾಣ ಪೂರ್ಣಗೊಂಡಾಗ ಸೊಂಡೂರು ಬೆಟ್ಟಗಳಲ್ಲಿ

ರುವ ಹೇರಳವಾದ ಕಬ್ಬಿಣದ ಅದಿರನ್ನು ಉಪಯೋಗಿಸಿಕೊಳ್ಳುತ್ತದೆ. ಈಗ ದಾವಣಗೆರೆ–ಹರಿಹರ ಖನಿಜ ವಲಯದಲ್ಲಿ ಲಭ್ಯವಿರುವ ಖನಿಜಗಳನ್ನು ಉಪಯೋಗಿಸಿಕೊಳ್ಳುವುದಕ್ಕೆ ಯಾವುದೇ ಯೋಜನೆ ತಯಾರಾಗಿಲ್ಲ.

ಹರಿಹರ – ದಾವಣಗೆರೆ ವಲಯದಲ್ಲಿ ದೊರಕುವ ಖನಿಜಗಳು ಮತ್ತು ದಾವಣಗೆರೆ-ಹರಿಹರಗಳಿಂದ ಅವುಗಳ ದೂರವನ್ನು ನಕ್ಷೆ 3 ತೋರಿಸುತ್ತದೆ. ಈ ವಲಯ ಸಂಪೂರ್ಣ ಚಿತ್ರದುರ್ಗ ಜಿಲ್ಲೆ, ಬಳ್ಳಾರಿ ಜಿಲ್ಲೆಯಲ್ಲಿರುವ ಹರಪನಹಳ್ಳಿ ತಾಲ್ಲೂಕು ಮತ್ತು ಶಿವಮೊಗ್ಗ ಜಿಲ್ಲೆಯಲ್ಲಿರುವ ಹೊನ್ನಾಳಿ ತಾಲ್ಲೂಕನ್ನು ಒಳಗೊಂಡಿದೆ. ಹೆಚ್ಚಿನ ಖನಿಜಗಳು ಎಪ್ಪತ್ತೈದು ಮೈಲುಗಳ ತ್ರಿಜ್ಯದ ಪ್ರದೇಶದಲ್ಲಿ ದೊರಕುತ್ತವೆ.

ಪಟ್ಟಿ 1 ವಿವಿಧ ತ್ರಿಜ್ಯ ವಲಯಗಳಲ್ಲಿ ದೊರಕುವ ಖನಿಜಗಳನ್ನು ತೋರಿಸುತ್ತದೆ.

ಪಟ್ಟಿ 1

ವಿವಿಧ ತ್ರಿಜ್ಯವಲಯಗಳಲ್ಲಿ ದೊರಕುವ ಖನಿಜಗಳು

ತ್ರಿಜ್ಯವಲಯ	ಖನಿಜಗಳು
I 25 ಮೈಲಿಗಳು	ಮ್ಯಾಂಗನೀಸ್, ತಾಮ್ರ, ಬಂಗಾರ, ಕಾಯೊಲಿನ್, ಕಲ್ನಾರು.
II 25 – 50 ಮೈಲಿಗಳು	ಮ್ಯಾಂಗನೀಸ್, ಕಬ್ಬಿಣ, ಸುಣ್ಣದಕಲ್ಲು, ತಾಮ್ರ, ಜಿಪ್ಸಮ್, ಬಾಕ್ಸೈಟ್, ಸೀಸ ಮತ್ತು ಇತರ ಖನಿಜಗಳು.
III 50 – 75 ಮೈಲುಗಳು	ಮ್ಯಾಂಗನೀಸ್, ಸುಣ್ಣದ ಕಲ್ಲು, ಕಲ್ನಾರು.

ಈ ವಲಯದಲ್ಲಿ ಹೆಚ್ಚಾಗಿ ಸಿಗುವ ಆರ್ಥಿಕ ಖನಿಜಗಳು ಕಬ್ಬಿಣದ ಅದಿರು, ತಾಮ್ರ, ಸುಣ್ಣದಕಲ್ಲು, ಬಾಕ್ಸೈಟ್, ಗಂಧಕ, ಕಾಯೋಲಿನ್, ಕ್ಯಾನೈಟ್ ಮತ್ತು ಕಲ್ನಾರು. ಪಟ್ಟಿ 2 ವಲಯದಲ್ಲಿರುವ ಅಂದಾಜು ಖನಿಜ ನಿಕ್ಷೇಪವನ್ನು ತೋರಿಸುತ್ತದೆ. ಪಟ್ಟಿ 3 ಪ್ರತಿವರ್ಷ ತೆಗೆಯಲ್ಪಡುವ ಖನಿಜಗಳ ತೂಕವನ್ನು ತೋರಿಸುತ್ತದೆ.

ಪಟ್ಟಿ 2

ದಾವಣಗೆರೆ – ಹರಿಹರ ವಲಯದಲ್ಲಿರುವ ಅಂದಾಜು ಖನಿಜ ನಿಕ್ಷೇಪ

ಖನಿಜ	ಅಂದಾಜು ನಿಕ್ಷೇಪ (ದಶಲಕ್ಷ ಟನ್ನುಗಳಲ್ಲಿ)	ಸೂಚನೆ
ಕಬ್ಬಿಣದ ಅದಿರು	52	
ಮ್ಯಾಂಗನೀಸ್	50	
ತಾಮ್ರ	1	

ಗಂಧಕ	— ಗಂಧಕದ ಅಳವು ಗೊತ್ತಾಗಿಲ್ಲ. ಆದರೆ ಹೆಚ್ಚಿನ ಪ್ರಮಾಣದಲ್ಲಿ ಸಿಗುವ ಸಾಧ್ಯತೆ ಇದೆ.
ಸುಣ್ಣದಕಲ್ಲು	50
ಬಾಕ್ಸೈಟ್	0.1
ಕಾಯೊಲಿನ್	0.1
ಕ್ಯಾನೈಟ್	0.46
ಕಲ್ನಾರು	—

ಮೂಲ : ಖನಿಜ ಮತ್ತು ಗಣಿಗಳ ಇಲಾಖೆ

ಪಟ್ಟಿ 3

ಪ್ರತಿವರ್ಷ ತೆಗೆಯಲ್ಪಡುವ ಖನಿಜಗಳ ತೂಕ

ಮುಖ್ಯ ಖನಿಜ	ತೂಕ ಮೆಟ್ರಿಕ್ ಟನ್‌ಗಳಲ್ಲಿ		
	ಚಿತ್ರದುರ್ಗ	ಶಿವಮೊಗ್ಗ	ಬಳ್ಳಾರಿ
ಕಬ್ಬಿಣದ ಅದಿರು	1,96,941	1,22,176	16,92,052
ಮ್ಯಾಂಗನೀಸ್	40,025	44,047	42,891
ಸುಣ್ಣದಕಲ್ಲು	652	1,35,677	

ಮೂಲ : ಖನಿಜ ಮತ್ತು ಗಣಿಗಳ ಇಲಾಖೆ

ಕಬ್ಬಿಣದ ಅದಿರು : ಚಿತ್ರದುರ್ಗ ಭಿನ್ನಸ್ತರ ಶಿಲೆಗಳಲ್ಲಿ ಸಾಕಷ್ಟು ಪ್ರಮಾಣದ ಮೃದು ಲಿಮೊನೈಟ್ ಅದಿರು ಮತ್ತು ಮಿಶ್ರೈಸೇರಿದ ಗಡುಸು ಹ್ಯಾಮಟೈಟ್ ಅದಿರಿನೊಂದಿಗೆ ದೊರಕುತ್ತದೆ. ಹೊಸದುರ್ಗ ಮತ್ತು ಹೊಳಲ್ಕೆರೆ ತಾಲ್ಲೂಕುಗಳಲ್ಲಿ ಸಾಕಷ್ಟು ಪ್ರಮಾಣದ ಗಡಸು ಹ್ಯಾಮಟೈಟ್ ಅದಿರು ಸಿಗುತ್ತದೆ. ಇವುಗಳನ್ನು ರಫ್ತು ಮಾಡುವ ಉದ್ದೇಶದಿಂದ ತೆಗೆಯಲಾಗುತ್ತದೆ. ಆದರೆ ಈ ಸ್ಥಳಗಳು ರೈಲುಮಾರ್ಗದಿಂದ ದೂರದಲ್ಲಿವೆ. ಈ ಅದಿರುಗಳಲ್ಲಿ ಶೇಕಡಾ 60ರಿಂದ 65ರಷ್ಟು ಕಬ್ಬಿಣ ಸಿಗುತ್ತದೆ. ಇದರ ಒಟ್ಟು ಅಂದಾಜು ನಿಕ್ಷೇಪ 52 ದಶಲಕ್ಷ ಟನ್‌ಗಳು.

ಮ್ಯಾಂಗನೀಸ್ : ಈ ವಲಯದಲ್ಲಿ ಮ್ಯಾಂಗನೀಸ್‌ನ ಮುಖ್ಯ ನಿಕ್ಷೇಪಗಳು ಸುಣ್ಣದ ಕಲ್ಲಿನ ನಿಕ್ಷೇಪಗಳೊಂದಿಗೆ ಸೇರಿವೆ ಮತ್ತು ಎರಡು ವಲಯಗಳಲ್ಲಿ ದೊರಕುತ್ತವೆ. ಅವು ದಾವಣಗೆರೆ ಮತ್ತು ಹೊಳಲ್ಕೆರೆ ತಾಲ್ಲೂಕುಗಳನ್ನೊಳಗೊಂಡ ಪಶ್ಚಿಮವಲಯ ಮತ್ತು ಸಂಪೂರ್ಣ ಹೊಸದುರ್ಗ ತಾಲ್ಲೂಕು ಮತ್ತು ಹೊಳಲ್ಕೆರೆ ತಾಲ್ಲೂಕಿನ ಹೆಚ್ಚಿನ ಭಾಗವನ್ನೊಳಗೊಂಡ ಪೂರ್ವ ವಲಯ. ಚನ್ನಗಿರಿ ಮತ್ತು ಹರಪನ ಹಳ್ಳಿಗಳಲ್ಲಿಯೂ ನಿಕ್ಷೇಪಗಳಿವೆ. ಒಟ್ಟು ಅಂದಾಜು ನಿಕ್ಷೇಪ 50 ದಶಲಕ್ಷ ಟನ್‌ಗಳು.

ತಾಮ್ರ : ತಾಮ್ರದ ಅದಿರು ಚಿತ್ರದುರ್ಗದಿಂದ ಹತ್ತು ಮೈಲು ದೂರದಲ್ಲಿ ಆಗ್ನೇಯ ದಿಕ್ಕಿನಲ್ಲಿರುವ ಇಂಗಳದಾಳದ ಹತ್ತಿರ ಮತ್ತು ದಾವಣಗೆರೆ ತಾಲ್ಲೂಕಿನಲ್ಲಿರುವ ಕೈದಾಳೆ ಎಂಬಲ್ಲಿ ಸಿಗುತ್ತದೆ. ಇಂಗಳದಾಳ ನಿಕ್ಷೇಪ ರಾಜ್ಯದಲ್ಲಿಯೇ ಅತಿ ದೊಡ್ಡದು ಮತ್ತು ಅತಿ ಉತ್ತಮ ವಾಗಿದೆ. ಇದರ ಅಂದಾಜು ನಿಕ್ಷೇಪ 1 ದಶಲಕ್ಷ ಟನ್‌ಗಳು.

ಗಂಧಕ : ಇಂಗಳದಾಳದ ಹತ್ತಿರ ಗಂಧಕದ ನಿಕ್ಷೇಪವಿದೆ. ಒಟ್ಟು ನಿಕ್ಷೇಪವನ್ನು ಈಗ ಅಂದಾಜು ಮಾಡಲಾಗುತ್ತಿದೆ. ಇದು ಹೆಚ್ಚಿನ ಪ್ರಮಾಣದಲ್ಲಿ ಸಿಗುವ ಸಾಧ್ಯತೆ ಇದೆ.

ಸುಣ್ಣದಕಲ್ಲು : ಸುಣ್ಣದ ಕಲ್ಲಿನ ಪಟ್ಟಿಗಳು ಚಿತ್ರದುರ್ಗ, ಹೊಳಲ್ಕೆರೆ ಮತ್ತು ಹೊಸದುರ್ಗ ತಾಲ್ಲೂಕುಗಳಲ್ಲಿವೆ. ಒಟ್ಟು ಅಂದಾಜು ನಿಕ್ಷೇಪ 50 ದಶಲಕ್ಷ ಟನ್‌ಗಳು. ಗದಗದ ಹತ್ತಿರ ದೋಣಿ ಎಂಬಲ್ಲಿ ಸಹ ಇದರ ನಿಕ್ಷೇಪವಿದೆ. ಆದರೆ ಇವು ಉತ್ತಮ ದರ್ಜೆಯವಲ್ಲ.

ಕಲ್ನಾರು : ಈ ವಲಯದಲ್ಲಿ ನಾಲ್ಕು ಪ್ರದೇಶಗಳಲ್ಲಿ ಕಲ್ನಾರು ದೊರೆಯುತ್ತದೆ. ಅವು ದಾವಣಗೆರೆ ತಾಲ್ಲೂಕಿನಲ್ಲಿರುವ ನಾಯಕೊಂಡ, ಹೊಸದುರ್ಗ ತಾಲ್ಲೂಕಿನಲ್ಲಿರುವ ಬೂದಿಹಾಳು, ಹೊಳಲ್ಕೆರೆಯ ಹತ್ತಿರದಲ್ಲಿರುವ ಸುಕಳಕಟ್ಟೆ ಮತ್ತು ಹರಪನಹಳ್ಳಿಯ ಹತ್ತಿರ. ಇದರ ನಿಕ್ಷೇಪ ಪ್ರಮಾಣ ಇನ್ನೂ ಗೊತ್ತಾಗಬೇಕಾಗಿದೆ.

ಕಾಯೊಲಿನ್ (ಚೈನಾಜೇಡಿ) : ಹರಪನಹಳ್ಳಿ ತಾಲ್ಲೂಕಿನಲ್ಲಿ ಸಾಕಷ್ಟು ಪ್ರಮಾಣದಲ್ಲಿ ಬಿಳಿ ಚೈನಾ ಜೇಡಿಯ ನಿಕ್ಷೇಪವಿದೆ. ಒಟ್ಟು ಅಂದಾಜು ಮಾಡಲಾದ ಚೈನಾಜೇಡಿಯ ಪ್ರಮಾಣ 1 ಲಕ್ಷ ಟನ್‌ಗಳು.

ಬಾಕ್ಸೈಟ್ : ಅಂದಾಜು 1 ಲಕ್ಷ ಟನ್. ಬಾಕ್ಸೈಟ್ ನಿಕ್ಷೇಪ ಹೊಸದುರ್ಗ ತಾಲ್ಲೂಕಿನ ಮಾಧವಪುರದಲ್ಲಿದೆ.[3]

ಮಣ್ಣುಗಳು

ದಾವಣಗೆರೆ ಪ್ರದೇಶದಲ್ಲಿ ಕಡುಕಪ್ಪು, ಕೆಂಪು, ಜಂಬು ಮತ್ತು ಕೆಂಪು ಮತ್ತು ಕಪ್ಪು ಮಿಶ್ರಮಣ್ಣುಗಳಿವೆ. ಕಡುಕಪ್ಪು ಮಣ್ಣುಗಳು ಚಿತ್ರದುರ್ಗ ಜಿಲ್ಲೆಯ ಉತ್ತರ ಮತ್ತು ಪಶ್ಚಿಮ ಭಾಗಗಳಲ್ಲಿ, ಬಳ್ಳಾರಿ ಜಿಲ್ಲೆಯ ದಕ್ಷಿಣ ಭಾಗದಲ್ಲಿ ಮತ್ತು ಶಿವಮೊಗ್ಗ ಜಿಲ್ಲೆಯ ಪೂರ್ವಭಾಗದಲ್ಲಿ ಕಾಣಸಿಗುತ್ತವೆ. ಈ ಮಣ್ಣುಗಳು ಫಲವತ್ತಾದುವು ಮತ್ತು ಇವುಗಳಲ್ಲಿ ಹತ್ತಿ, ಜೋಳ, ಗೋಧಿ ಮತ್ತು ಮೆಣಸು ಒಳ್ಳೆಯ ಬೆಳೆ ಕೊಡುತ್ತವೆ. ನೀರನ್ನು ಈ ಮಣ್ಣುಗಳಿಗೆ ಒದಗಿಸಿದರೆ ಭತ್ತ ಮತ್ತು ಕಬ್ಬು ಬೆಳೆಯಬಹುದು.

ಕೆಂಪು ಮಣ್ಣುಗಳು ಬಳ್ಳಾರಿ ಜಿಲ್ಲೆಯ ದಕ್ಷಿಣ ಭಾಗದಲ್ಲಿ, ಧಾರವಾಡ ಜಿಲ್ಲೆಯ ದಕ್ಷಿಣ ಭಾಗದಲ್ಲಿ ಮತ್ತು ಚಿತ್ರದುರ್ಗ ಜಿಲ್ಲೆಯ ಪಶ್ಚಿಮ ಭಾಗದಲ್ಲಿ ಕಂಡುಬರುತ್ತವೆ. ಮೂಲತಃ ಇವು ಫಲವತ್ತಲ್ಲದ ಮಣ್ಣುಗಳು. ಭತ್ತ, ರಾಗಿ, ಬೇಳೆಗಳು ಮತ್ತು ನೆಲಗಡಲೆ ಈ ಮಣ್ಣು ಗಳಲ್ಲಿ ಬೆಳೆಯುವ ಮುಖ್ಯ ಪೈರುಗಳು.

ಜಂಬು ಮಣ್ಣುಗಳು (ಲ್ಯಾಟರೈಟ್) ಶಿವಮೊಗ್ಗ ಜಿಲ್ಲೆಯ ಪಶ್ಚಿಮ ಭಾಗದಲ್ಲಿ ಮತ್ತು ಧಾರವಾಡ ಜಿಲ್ಲೆಯ ಪಶ್ಚಿಮ ಭಾಗದಲ್ಲಿ ಕಾಣಿಸುತ್ತವೆ. ಒಳ್ಳೆಯ ಬೆಳೆ ಕೊಡುತ್ತವೆ. ಕಾರಣ ಇವು ಸರಂಧ್ರವಾಗಿವೆ ಮತ್ತು ಇವುಗಳಲ್ಲಿ ಖನಿಜ ಪದಾರ್ಥಗಳು ಹೆಚ್ಚಿವೆ.

ಕೆಂಪು ಮತ್ತು ಕಪ್ಪು ಮಿಶ್ರ ಮಣ್ಣುಗಳು ಧಾರವಾಡ ಜಿಲ್ಲೆಯ ಉತ್ತರ ಭಾಗದಲ್ಲಿ ಕಾಣಸಿಗುತ್ತವೆ.[4]

ಅರಣ್ಯಗಳು ಮತ್ತು ಸಸ್ಯವರ್ಗ

ದಾವಣಗೆರೆ ಪ್ರದೇಶದ ಸಸ್ಯಜೀವನವನ್ನು ಮೂರು ವರ್ಗಗಳಾಗಿ ವಿಂಗಡಿಸಬಹುದು. ಅವು ಆರ್ದ್ರ ಸದಾಹಸಿರಾಗಿರುವ (moist evergreen) ಮಳೆನಾಡಿನ ಕಾಡುಗಳು, ಮಿಶ್ರಿತ ಸದಾಹಸಿರಾಗಿರುವ (mixed evergreen) ಪಶ್ಚಿಮ ಭಾಗದ ಕಾಡುಗಳು ಮತ್ತು ಪ್ರಸ್ಥಭೂಮಿಯ ವರ್ಷಂಪ್ರತಿ ಉದುರಿಹೋಗುವ ಕುರುಚಲು ಮತ್ತು ಹುಲ್ಲುಗಳಿರುವ ಒಣ ಭಾಗ.

ಸದಾಹಸಿರಾಗಿರುವ ಕಾಡುಗಳನ್ನು ಧಾರವಾಡ ಮತ್ತು ಶಿವಮೊಗ್ಗ ಜಿಲ್ಲೆಗಳ ಪಶ್ಚಿಮ ಭಾಗವಲ್ಲಿ ಕಾಣಬಹುದು. ಮಿಶ್ರಿತ ಸದಾಹಸಿರಾಗಿರುವ ಕಾಡುಗಳನ್ನು ಶಿವಮೊಗ್ಗ ಜಿಲ್ಲೆಯ ಮಧ್ಯ ಮತ್ತು ದಕ್ಷಿಣ ಭಾಗದಲ್ಲಿ ಮತ್ತು ಘಟಪ್ರಭಾ ಜಲಾನಯನ ಪ್ರದೇಶದಲ್ಲಿ ಕಾಣಬಹುದು. ವರ್ಷಂಪ್ರತಿ ಉದುರಿಹೋಗುವ ಕಾಡುಗಳನ್ನು ಚಿತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಹಾಗೂ ಧಾರವಾಡ ಮತ್ತು ಶಿವಮೊಗ್ಗ ಜಿಲ್ಲೆಗಳ ಪೂರ್ವಭಾಗದಲ್ಲಿ ಕಾಣಬಹುದು.[5] ಈ ಪ್ರದೇಶದಲ್ಲಿರುವ ಅರಣ್ಯದ ಒಟ್ಟು ಪ್ರದೇಶ 4,27,511 ಹೆಕ್ಟೇರ್‌ಗಳು.[6]

ಇಲ್ಲಿ ಸಾಮಾನ್ಯವಾಗಿ ಕಾಣಬರುವ ಮರಗಳು ಕಮರ, ಸ್ವಾಮಿ ಮರ, ತರದ, ದಿಂಡಿಗ, ಬೇವು, ಹೊಂಗೆ, ಹುಣಸೆ, ಕಕ್ಕೆ, ಸಘುಲು, ಹುರಗಾಲು, ತೇಗ, ಧೂಮ, ಸುರಹೊನ್ನೆ, ಬಾಳಗಿ, ನಾಗಸಂಪಿಗೆ, ಹಡಸಾಲೆ, ಧೂಪ, ಕಿರಭೋಗಿ, ದೇವದಾರು, ಬೀಟೆ, ಮತ್ತಿ ಮತ್ತು ಹೊನಲ.

ಈ ಅರಣ್ಯಗಳಲ್ಲಿ ಉತ್ಪತ್ತಿಯಾಗುವ ವಸ್ತುಗಳು ಮುಖ್ಯವಾಗಿ ಮರ, ಸೌದೆ, ಇದ್ದಿಲು, ಶ್ರೀಗಂಧ, ಬೀಟೆ, ಹೊನಲ, ದೇವದಾರು, ನಾಗಸಂಪಿಗೆ, ಅಳಲೆ, ಮತ್ತಿ ಮತ್ತು ಹುಣಸೆ. ಇಲ್ಲಿ ಸಿಗುವ ಇತರ ವಸ್ತುಗಳು ತಂಗಡಿ ತೊಗಟೆ, ಕಕ್ಕೆ ತೊಗಟೆ, ಹುಣಸೆಕಾಯಿ, ಹೊಂಗೆ ಎಲೆ ಮತ್ತು ಹೂವುಗಳು, ತುಮ್ರಿ ಎಲೆಗಳು, ತೂಪರೆ, ಜೇನು, ಅಂಟು, ಬಿದಿರು, ಹರ್ದ, ಬೇವಿನ ಬೀಜಗಳು, ಮೂವು ಮತ್ತು ಹೊನ್ನೆ.[7]

ಬೆಳೆಗಳು

ದಾವಣಗೆರೆ ಪ್ರದೇಶದಲ್ಲಿ ಬೆಳೆಯುವ ಮುಖ್ಯ ಬೆಳೆಗಳು ಭತ್ತ, ರಾಗಿ, ಜೋಳ, ಸಜ್ಜೆ, ಉಪಕೃತ ಧಾನ್ಯಗಳು (millets), ಕಡಲೆ, ತೊಗರಿ, ಬೇಳೆಗಳು, ಕಬ್ಬು, ಹತ್ತಿ ಮತ್ತು ನೆಲಗಡಲೆ. ಬತ್ತ, ರಾಗಿ, ಜೋಳ, ಸಜ್ಜೆ, ಗೋದಿ, ಉಪಕೃತ ಧಾನ್ಯಗಳು, ಕಡಲೆ, ತೊಗರಿ, ಇತರ ಬೇಳೆಗಳು, ಕಬ್ಬು, ಹತ್ತಿ ಮತ್ತು ನೆಲಗಡಲೆ ಬೆಳೆದ ಪ್ರದೇಶ 1974ರಲ್ಲಿ ಕ್ರಮವಾಗಿ 3,26,540, 1,36,337, 6,03,862, 57,419, 1,17,555, 1.71,643, 23,140, 47,629, 1,86,402, 21,861, 4,14,671 ಮತ್ತು 2,90,381 ಹೆಕ್ಟೇರ್‌ಗಳಷ್ಟಿತ್ತು.[8]

ಪ್ರಾಣಿವರ್ಗ


ಸದಾಹಸಿರಾಗಿರುವ ಮಳೆನಾಡಿನ ಅರಣ್ಯಗಳಲ್ಲಿ ವನ್ಯಮೃಗಗಳಾದ ಕಾಡೆಮ್ಮೆ, ಕಾಡುಕೋಣ, ಚಿರತೆ, ಹುಲಿ, ಕರಡಿ, ಜಿಂಕೆ, ಸಿಂಹ, ಚಿರತೆಯಂತೆ ಮಚ್ಚೆಗಳುಳ್ಳ ಬೆಕ್ಕು, ಕಿರುಬ, ಜ್ಯಾಕಲ್ ಎಂಬ ನರಿಯ ಗಾತ್ರದ ನಾಯಿ ಜಾತಿಯ ಪ್ರಾಣಿ ಮತ್ತು ಮಂಗಗಳಿವೆ. ತುಂಗಾ,

ಭದ್ರಾ ಮತ್ತು ತುಂಗಭದ್ರಾ ನದಿಗಳಲ್ಲಿ ಮೊಸಳೆಗಳಿವೆ. ಹೆಚ್ಚಾಗಿ ಕಾಣಲು ಸಿಗುವ ಪಕ್ಷಿಗಳು ಹೆಬ್ಬಾತು, ಕೊಕ್ಕರೆ, ಹಸಿರು ಗಿಳಿ, ಕಾಡುಕಾಗೆ, ಊರಕಾಗೆ, ಮೈನಾ, ಬಂಗಾರದ ಹಿಂಬದಿಯ ಮರಕುಟಿಗ, ಕಾಡುಪಾರಿವಾಳ, ಬುಲ್‌ಬುಲ್, ಭಾರದ್ವಾಜ, ಕೋಗಿಲೆ ಮತ್ತು ಉಲ್ಲಂಗಿ. ಇಲ್ಲಿರುವ ಮುಖ್ಯವಾದ ಉರಗವರ್ಗದ ಪ್ರಾಣಿಗಳು ನಾಗರಹಾವು, ಹೆಬ್ಬಾವು, ಕ್ರೈಯ್ಟ್ ಎಂಬ ಬಂಗಾಳದ ಸರ್ಪ ಮತ್ತು ಇತರ ವಿಷಸರ್ಪಗಳು. ಇಲ್ಲಿರುವ ಸಾಧುಪ್ರಾಣಿಗಳು ಆಕಳು, ಎತ್ತು, ಎಮ್ಮೆ, ಕೋಣ, ಕುದುರೆ, ಕುರಿ, ಆಡು, ಮೇಕೆ, ಟಗರು, ಹೇಸರಗತ್ತೆ ಮತ್ತು ಕತ್ತೆ.[9] 1974ರಲ್ಲಿ 23,09.148 ಎತ್ತು ಮತ್ತು ಆಕಳುಗಳು, 8,32,626 ಕೋಣ ಮತ್ತು ಎಮ್ಮೆಗಳು, 9,82,381 ಕುರಿ ಮತ್ತು ಟಗರುಗಳು, 89,30,00 ಮೇಕೆ ಮತ್ತು ಆಡುಗಳು ಮತ್ತು 15,51,180 ಹುಂಜ ಮತ್ತು ಕೋಳಿಗಳಿದ್ದವು.[10]

ವಾಯುಗುಣ

ದಾವಣಗೆರೆಯ ವಾಯುಗುಣ(ಆಕೃತಿ 1) ಸೆಕೆಯಿಂದ ಕೂಡಿದ ಬಿಸಿಲುಗಾಲ, ಕಡಿಮೆ ಮಳೆ ಮತ್ತು ಹಿತವಾದ ಮಳೆಗಾಲದಿಂದ ಕೂಡಿದೆ. ಡಿಸೆಂಬರ್‌ನಿಂದ ಫೆಬ್ರುವರಿಯವರೆಗೆ ಇರುವ ಚಳಿಗಾಲದಲ್ಲಿ ಮೋಡವಿಲ್ಲದೆ ಗೆಲುವಾದ ಹವಾಮಾನವಿರುತ್ತದೆ. ಬೇಸಿಗೆ ಕಾಲ ಮಾರ್ಚ್ ತಿಂಗಳಲ್ಲಿ ಆರಂಭವಾಗಿ ಜೂನ್ ತಿಂಗಳವರೆಗೆ ಇರುತ್ತದೆ. ಈ ಕಾಲದಲ್ಲಿ ಈ ಪ್ರದೇಶ ನೈರುತ್ಯ ಮಾರುತದ ಪ್ರಭಾವಕ್ಕೊಳಗಾಗುತ್ತದೆ. ನೈರುತ್ಯ ಮಾರುತದ ಕಾಲ ಸೆಪ್ಟೆಂಬರ್ ತಿಂಗಳವರೆಗೆ

ಆಕೃತಿ 1



ದಾವಣಗೆರೆ ವಾಯುಗುಣ


ಇರುತ್ತದೆ. ಅಕ್ಟೋಬರ್ ಮತ್ತು ನವೆಂಬರ್‌ಗಳ ಮಧ್ಯದ ಕಾಲ ಹಿಮ್ಮೆಟ್ಟುವ ಮಳೆಗಾಲ (retreating monsoon season) ಅಥವಾ ಮಳೆಗಾಲದ ನಂತರದ ಕಾಲ.[11]

ದಾವಣಗೆರೆ ಪ್ರದೇಶದ ಪೂರ್ವಭಾಗದ ವಾಯುಗುಣ ದಾವಣಗೆರೆಯ ವಾಯುಗುಣದಂತೆಯೇ ಇದೆ. ಈ ಪ್ರದೇಶದ ಪಶ್ಚಿಮ ಭಾಗದ ವಾಯುಗುಣ ಅಷ್ಟೊಂದು ಬಿಸಿಲಲ್ಲದ ಬೇಸಿಗೆಯ ತಿಂಗಳುಗಳು, ಹೆಚ್ಚು ಮಳೆ, ತಂಪಾದ ಹವೆಯಿರುವ ಮಳೆಗಾಲ ಮತ್ತು ಚಳಿಗಾಲಗಳಿಂದ ಕೂಡಿದೆ.[12]

ಮಳೆ

ದಾವಣಗೆರೆಯಲ್ಲಿ ವೃಷ್ಟಿಮಾಪಕ ಕೇಂದ್ರವಿದೆ. ದಾವಣಗೆರೆಯಲ್ಲಿ ವರ್ಷದಲ್ಲಿ ಬೀಳುವ ಸರಾಸರಿ ಮಳೆ 639.9 ಮಿ. ಮೀ. (ದಾವಣಗೆರೆಯಲ್ಲಿ 50 ವರ್ಷಗಳ ಅವಧಿಯಲ್ಲಿ ಬಿದ್ದ ಸರಾಸರಿ, ಅತಿಹೆಚ್ಚು ಮತ್ತು ಅತಿ ಕಡಿಮೆ ಮಳೆಯ ವಿವರಗಳನ್ನು ಪಟ್ಟಿ 4ರಲ್ಲಿ ಕೊಡಲಾಗಿದೆ. ಆಕೃತಿ 2 ದಾವಣಗೆರೆಯಲ್ಲಿ ಪ್ರತಿತಿಂಗಳು ಬೀಳುವ ಸರಾಸರಿ ಮಳೆಯನ್ನು ತೋರಿಸುತ್ತದೆ). ಮಳೆ ನೈರುತ್ಯದಿಂದ ಈಶಾನ್ಯಕ್ಕೆ ಬಂದಂತೆ ಕಡಿಮೆಯಾಗುತ್ತದೆ. ಈ ಭಾಗದಲ್ಲಿ ನೈರುತ್ಯ ಮಾರುತದ ಕಾಲದಲ್ಲಿ (ಜೂನ್‌ನಿಂದ ಸೆಪ್ಟೆಂಬರ್ ತಿಂಗಳವರೆಗೆ) ಮತ್ತು ಹಿಮ್ಮೆಟ್ಟುವ ಮಳೆಗಾಲ (ಅಕ್ಟೋಬರ್ ಮತ್ತು ನವೆಂಬರ್)ದಲ್ಲಿ ಮಳೆಯಾಗುತ್ತದೆ. ವಾರ್ಷಿಕ ಮಳೆಯ ಶೇಕಡಾ 54 ರಷ್ಟು ಮಳೆ ನೈರುತ್ಯಮಾರುತದ ಕಾಲದಲ್ಲಾಗುತ್ತದೆ. ಅಕ್ಟೋಬರ್ ಮತ್ತು ನವೆಂಬರ್ ತಿಂಗಳು

ಆಕೃತಿ 2



ಮಳೆ

ಪಟ್ಟಿ 4

ದಾವಣಗೆರೆಯಲ್ಲಿ ಬಿದ್ದ ಸರಾಸರಿ, ಅತಿಹೆಚ್ಚು ಮತ್ತು ಅತಿಕಡಿಮೆ ಮಳೆಯ ವಿವರಗಳು

ವಿವರಗಳು ಆಧರಿಸಿದ ವರ್ಷಗಳು		ಜನವರಿ	ಫೆಬ್ರವರಿ	ಮಾರ್ಚ್	ಏಪ್ರಿಲ್	ಮೇ	ಜೂನ್	ಜುಲೈ	ಆಗಸ್ಟ್	ಸೆಪ್ಟೆಂಬರ್	ಅಕ್ಟೋಬರ್	ನವೆಂಬರ್	ಡಿಸೆಂಬರ್	ವಾರ್ಷಿಕ
50	a.	2.5	4.1	3.1	28.7	71.9	69.6	91.4	75.2	109.5	126.0	47.2	10.7	639.9
	b.	0.2	0.3	0.3	2.2	3.9	5.9	9.6	7.4	6.7	6.4	2.5	0.6	46.0

139 (1932)*	46 (1908)*	190.5**	18-6-1891
ಅತಿ ಹೆಚ್ಚು ವಾರ್ಷಿಕ ಮಳೆ ಸರಾಸರಿ ವಾರ್ಷಿಕ ಮಳೆಯ ಶೇಕಡಾ ಅಂತೆ ಮತ್ತು ಮಳೆಯಾದ ವರ್ಷ*	ಅತಿ ಕಡಿಮೆ ವಾರ್ಷಿಕ ಮಳೆ ಸರಾಸರಿ ಮಳೆಯ ಶೇಕಡಾ ಅಂತೆ ಮತ್ತು ಮಳೆಯಾದ ವರ್ಷ*	24 ಘಂಟೆಗಳಲ್ಲಿ ಬಿದ್ದ ಅತಿ ಹೆಚ್ಚು ಮಳೆ ** ಮೊತ್ತ (ಮಿ.ಮಿ.ಗಳಲ್ಲಿ)	ವರ್ಷ

a.—ಸರಾಸರಿ ಮಳೆ ಮಿ.ಮಿ.ಗಳಲ್ಲಿ

b.—ಸರಾಸರಿ ಮಳೆಯ ದಿನಗಳ ಸಂಖ್ಯೆ

* – ವರ್ಷಗಳನ್ನು ಕಂಸದಲ್ಲಿ ಕೊಟ್ಟಿದೆ

** – 1956ರವರೆಗೆ ಲಭ್ಯವಿರುವ ಎಲ್ಲ ವಿವರಗಳ ಮೇಲೆ ಆಧರಿಸಿದೆ.

ಮೂಲ : Sri Satyan (ed) : *Mysore State Gazetteer, Chitradurga District* (Bangalore Government Press, 1967), p. 25.

ಗಳಲ್ಲಿ ವಾರ್ಷಿಕ ಮಳೆಯ ಶೇಕಡಾ 27ರಷ್ಟು ಮಳೆ ಬೀಳುತ್ತದೆ. ಅಕ್ಟೋಬರ್ ಅತಿ ಹೆಚ್ಚು ಮಳೆಯಾಗುವ ತಿಂಗಳು.

ಐವತ್ತು ವರ್ಷಗಳ ಅವಧಿಯಲ್ಲಿ (1901-50) ಈ ಭಾಗದಲ್ಲಿ ಬಿದ್ದ ವಾರ್ಷಿಕ ಮಳೆಯಲ್ಲಿ ಆದ ವ್ಯತ್ಯಾಸಗಳು ಬಹಳ. 1932ರಲ್ಲಿ ಸರಾಸರಿ ವಾರ್ಷಿಕ ಮಳೆಯ ಶೇಕಡಾ 139 ರಷ್ಟು ಮಳೆಯಾಗಿತ್ತು. 1908 ಅತಿ ಕಡಿಮೆ ಮಳೆ ಬಿದ್ದ ವರ್ಷ. ಆ ವರ್ಷ ಸರಾಸರಿ ವಾರ್ಷಿಕ ಮಳೆಯ ಶೇಕಡಾ 46ರಷ್ಟು ಮಳೆಯಾಗಿತ್ತು.

ಚಿತ್ರದುರ್ಗ ಜಿಲ್ಲೆಯಲ್ಲಿ ಬೀಳುವ ಮಳೆಯ ಸಂಭವ – ಪ್ರಮಾಣದ ಬಗ್ಗೆ ವಿವರಗಳು ಸಿಗುತ್ತವೆ. 1901–50ರ ಕಾಲಾವಧಿಯಲ್ಲಿ ಹನ್ನೆರಡು ವರ್ಷಗಳಲ್ಲಿ ಸರಾಸರಿಗಿಂತ ಶೇಕಡಾ 8 ರಷ್ಟು ಕಡಿಮೆ ಮಳೆಯಾಗಿತ್ತು. ಅವರಲ್ಲಿ ಎರಡು ವರ್ಷಗಳು ಅನುಗೂಡಿ ಬಂದಿದ್ದವು, (ಪಟ್ಟಿ 5 ಚಿತ್ರದುರ್ಗ ಜಿಲ್ಲೆಯಲ್ಲಿ ಬೀಳುವ ಮಳೆಯ ಸಂಭವ ಪ್ರಮಾಣವನ್ನು–ತೋರಿಸುತ್ತದೆ)

ಪಟ್ಟಿ 5

ಚಿತ್ರದುರ್ಗ ಜಿಲ್ಲೆಯಲ್ಲಿ ಬೀಳುವ ಮಳೆಯ ಸಂಭವ ಪ್ರಮಾಣ (1901–50)

ಮಳೆ ಮಿ.ಮಿ.ಗಳಲ್ಲಿ	ವರ್ಷಗಳ ಸಂಖ್ಯೆ	ಮಳೆ ಮಿ.ಮಿ.ಗಳಲ್ಲಿ	ವರ್ಷಗಳ ಸಂಖ್ಯೆ
301–400	2	701–800	5
401–500	15	801–900	1
501–600	12	901–1000	2
601–700	13		

ಮೂಲ : Sri Satyan (ed.), *Mysore State Gazetteer, Chitradurga District*, p. 27.

ಜಿಲ್ಲೆಯಲ್ಲಿ ಈ ಐವತ್ತು ವರ್ಷಗಳ ಅವಧಿಯಲ್ಲಿ ನಲ್ವತ್ತು ವರ್ಷಗಳಲ್ಲಿ ಮಳೆ 400–700 ಮಿ. ಮಿ. ಬಿದ್ದಿತ್ತು. ಸರಾಸರಿ ವರ್ಷದಲ್ಲಿ ನಲವತ್ತಾರು ದಿನಗಳು ಮಳೆಯ ದಿನಗಳು.[13]


ದಾವಣಗೆರೆ ಪ್ರದೇಶದಲ್ಲಿ ಬೀಳುವ ವಾರ್ಷಿಕ ಸರಾಸರಿ ಮಳೆಯ ಪ್ರಮಾಣದಲ್ಲಿ ಪೂರ್ವ ಮತ್ತು ಪಶ್ಚಿಮ ಭಾಗಗಳಲ್ಲಿ ವ್ಯತ್ಯಾಸಗಳಿವೆ. ಚಿತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಹಾಗೂ ಶಿವಮೊಗ್ಗ ಮತ್ತು ಧಾರವಾಡ ಜಿಲ್ಲೆಗಳ ಪೂರ್ವಭಾಗಗಳಲ್ಲಿ 580 ಮಿ. ಮಿ. ಗಿಂತ ಕಡಿಮೆ ಮಳೆ ಬೀಳುತ್ತದೆ. ವಾರ್ಷಿಕ ಸರಾಸರಿ ಮಳೆ ಶಿವಮೊಗ್ಗ ಮತ್ತು ಧಾರವಾಡ ಜಿಲ್ಲೆಗಳ ಪಶ್ಚಿಮ ಭಾಗದಲ್ಲಿ ಕ್ರಮವಾಗಿ 2540 ಮಿ. ಮಿ. ಮತ್ತು 914 ಮಿ. ಮಿ. ಇದೆ.[14]

ಉಷ್ಣಾಂಶ

ಚಿತ್ರದುರ್ಗ ಜಿಲ್ಲೆಯಲ್ಲಿರುವ ಒಂದೇ ಹವಾಮಾನ ಸಮೀಕ್ಷಾ ಕೇಂದ್ರ ಚಿತ್ರದುರ್ಗ ನಗರದಲ್ಲಿದೆ. ಈ ಕೇಂದ್ರ ತೋರಿಸುವ ಹವಾಮಾನ ಆಧಾರಾಂಶವನ್ನು ಸಮಸ್ತ ಜಿಲ್ಲೆಗೆ ಮಾದರಿಯಾಗಿ

ಪರಿಗಣಿಸಬಹುದು. ನವೆಂಬರ್ ತಿಂಗಳ ಉತ್ತರಾರ್ಧದಿಂದ ಫೆಬ್ರುವರಿಯವರೆಗಿನ ಕಾಲ ಚಳಿಗಾಲವಾಗಿರುತ್ತದೆ.ಡಿಸೆಂಬರ್ ಅತಿ ಹೆಚ್ಚು ಚಳಿಯಿರುವ ತಿಂಗಳು. ಈ ತಿಂಗಳಲ್ಲಿ ದಿನದ ಮಧ್ಯಸ್ಥ ಅತಿ ಹೆಚ್ಚು ಉಷ್ಣಾಂಶ 27.9° ಸೆಂಟಿಗ್ರೇಡ್ (82.3° ಫಾರನ್‌ಹೀಟ್) ಮತ್ತು ದಿನದ ಮಧ್ಯಸ್ಥ ಅತಿ ಕಡಿಮೆ ಉಷ್ಣಾಂಶ 16.6० ಸೆಂಟಿಗ್ರೇಡ್ (61.9° ಫಾರನ್‌ಹೀಟ್) ಇರುತ್ತದೆ. ಮಾರ್ಚ್ ಮತ್ತು ಮೇ ತಿಂಗಳ ನಡುವಿನ ಕಾಲ ಹೆಚ್ಚು ಉಷ್ಣತೆಯಿರುವ ಕಾಲ. ಏಪ್ರಿಲ್ ಅತಿ ಹೆಚ್ಚು ಉಷ್ಣತೆ ಇರುವ ತಿಂಗಳು. ಈ ತಿಂಗಳಲ್ಲಿ ದಿನದ ಮಧ್ಯಸ್ಥ ಅತಿ ಹೆಚ್ಚು ಉಷ್ಣಾಂಶ 36.2° ಸೆಂಟಿಗ್ರೇಡ್ (97.2° ಫಾರನ್‌ಹೀಟ್). ಈ ಕಾಲದಲ್ಲಿ ಅತಿ ಹೆಚ್ಚು ಉಷ್ಣಾಂಶ ಕೆಲವು ಸಲ 41° ಸೆಂಟಿಗ್ರೇಡ್ (106° ಫಾರನ್ ಹೀಟ್) ವರೆಗೆ ಏರುತ್ತದೆ. ಜೂನ್ ತಿಂಗಳ ಆದಿಯಲ್ಲಿ ಈ ಜಿಲ್ಲೆಯ ಮೇಲೆ ಹಾದುಹೋಗುವ ಮಾರುತಗಳಿಂದ ಉಷ್ಣಾಂಶ ಕಡಿಮೆಯಾಗಿ ಹವೆ ಹಿತಕರವಾಗಿರುತ್ತದೆ. ಅಕ್ಟೋಬರ್ ತಿಂಗಳಲ್ಲಿ ಉಷ್ಣಾಂಶ ಸ್ವಲ್ಪ ಹೆಚ್ಚಾಗುತ್ತದೆ. ಸಂತರದ ಕಾಲಾವಧಿಯಲ್ಲಿ ಹಗಲು ಮತ್ತು ರಾತ್ರಿಯಲ್ಲಿ ಉಷ್ಣಾಂಶ ಕಡಿಮೆಯಿರುತ್ತದೆ. ಚಿತ್ರದುರ್ಗ ಕೇಂದ್ರದಲ್ಲಿ ತೋರಿಸಿದ ಅತಿ ಹೆಚ್ಚು ಉಷ್ಣಾಂಶ 41.7° ಸೆಂಟಿಗ್ರೇಡ್ ಮೇ 31.1921ರಂದು ಮತ್ತು ಅತಿ ಕಡಿಮೆ ಉಷ್ಣಾಂಶ 8.3° ಸೆಂಟಿಗ್ರೇಡ್ ನವೆಂಬರ್ 28, 1945 ಮತ್ತು ಡಿಸೆಂಬರ್ 11, 1945ರಂದು[16] (ಪಟ್ಟಿ 6 ಸರಾಸರಿ ಉಷ್ಣಾಂಶ ಮತ್ತು ಸಂಬಂಧಕ ಆರ್ದ್ರತೆಯನ್ನು ತೋರಿಸುತ್ತದೆ. ಆಕೃತಿ 3 ಉಷ್ಣಾಂಶದಲ್ಲಿ ಆಗುವ ಬದಲಾವಣೆಗಳನ್ನು ತೋರಿಸುತ್ತದೆ.)

ಆಕೃತಿ 3



ಉಷ್ಣಾಂಶ

ದಾವಣಗೆರೆ ಪ್ರದೇಶದ ಸರಾಸರಿ ತಿಂಗಳ ಉಷ್ಣಾಂಶದ ಬಗ್ಗೆ ಬಳ್ಳಾರಿ, ಗದಗ, ಮಡಿಕೇರಿ ಮತ್ತು ಚಿತ್ರದುರ್ಗಗಳಲ್ಲಿರುವ ಮಾದರಿ ಹವಾಮಾನ ಸಮೀಕ್ಷಾಕೇಂದ್ರಗಳಿಂದ

ಪಟ್ಟಿ 6

ಸರಾಸರಿ ಉಷ್ಣಾಂಶ ಮತ್ತು ಸಂಬಂಧಕ ಆರ್ದ್ರತೆ

ತಿಂಗಳು	ಮಧ್ಯಕ ದಿನದ ಅತಿ ಹೆಚ್ಚು ಉಷ್ಣಾಂಶ ಸೆಂ°	ಮಧ್ಯಕ ದಿನದ ಅತಿ ಕಡಿಮೆ ಉಷ್ಣಾಂಶ ಸೆಂ°	50 ವರ್ಷಗಳಲ್ಲಿ ತಿಳಿದಿದ್ದ ಅತಿ ಹೆಚ್ಚು ಉಷ್ಣಾಂಶ ಸೆಂ°	ತಾರೀಕು	50 ವರ್ಷಗಳಲ್ಲಿ ತಿಳಿದಿದ್ದ ಅತಿ ಕಡಿಮೆ ಉಷ್ಣಾಂಶ ಸೆಂ	ತಾರೀಕು	ಸಂಬಂಧಕ ಆರ್ದ್ರತೆ ಬೆಳಗ್ಗೆ 8–30 ಶೇಕಡಾ	ಸಂಜೆ 5-30 ಶೇಕಡಾ
ಜನವರಿ	29.2	17.0	33.9	1900 ಜನವರಿ 29	11.1	1918 ಜನವರಿ 16	63	35
ಫೆಬ್ರುವರಿ	31.9	19.0	36.1	1931 ಫೆಬ್ರುವರಿ 28	13.3	1947 ಫೆಬ್ರುವರಿ 6	54	30
ಮಾರ್ಚ್	34.9	21.4	38.9	1925 ಮಾರ್ಚ್ 31	16.1	1955 ಮಾರ್ಚ್ 12	51	25
ಏಪ್ರಿಲ್	36.2	22.7	39.4	1941 ಏಪ್ರಿಲ್ 19	17.2	1904 ಏಪ್ರಿಲ್ 2	63	30
ಮೇ	35.0	22.2	41.7	1931 ಮೇ 21	16.7	1951 ಮೇ 25	71	38
ಜೂನ್	30.5	21.3	37.8	1935 ಜೂನ್ 6	17.2	1906 ಜೂನ್ 6	78	62
ಜುಲೈ	28.0	20.6	34.4	1932 ಜುಲೈ 3	17.8	1943 ಜುಲೈ 10	82	73
ಆಗಸ್ಟ್	28.1	20.3	32.8	1932 ಆಗಸ್ಟ್ 17	17.8	1955 ಆಗಸ್ಟ್ 16	82	69
ಸೆಪ್ಟೆಂಬರ್	28.9	20.0	35.0	1905 ಸೆಪ್ಟೆಂಬರ್ 30	15.0	1910 ಸೆಪ್ಟೆಂಬರ್ 19	80	64
ಅಕ್ಟೋಬರ್	29.6	20.1	33 9	1905 ಅಕ್ಟೋಬರ್ 1	15.6	1943 ಅಕ್ಟೋಬರ್ 30	76	53
ನವೆಂಬರ್	28.3	18.3	32.8	1931 ನವೆಂಬರ್ 2	8.3	1945 ನವೆಂಬರ್ 28	71	50
ಡಿಸೆಂಬರ್	27.9	16.6	32.8	1930 ಡಿಸೆಂಬರ್ 24	8,3	1945 ಡಿಸೆಂಬರ್ 11	68	41
ವಾರ್ಷಿಕ	30.7	20.0	....	....	....	....	70	47
4	3	3	3	9	3	9	3	3

ಮೂಲ : Sri Satyan (ed): *Mysore State Gazetteer, Chitradurga District*, p. 25

ವಿವರಗಳು ಸಿಗುತ್ತವೆ. ಜನವರಿ ಮತ್ತು ಫೆಬ್ರುವರಿ ತಿಂಗಳುಗಳಲ್ಲಿ ಉಷ್ಣಾಂಶ ಕಡಿಮೆ ಇರುತ್ತದೆ. ಮತ್ತು ಅದು 35° ಸೆಂಟಿಗ್ರೇಡ್‌ನಿಂದ 19° ಸೆಂಟಿಗ್ರೇಡ್‌ವರೆಗೆ ಬಳ್ಳಾರಿ, ಚಿತ್ರದುರ್ಗ ಮತ್ತು ಗದಗಗಳಲ್ಲಿ ಮತ್ತು 28° ಸೆಂಟಿಗ್ರೇಡ್‌ನಿಂದ 16° ಸೆಂಟಿಗ್ರೇಡ್‌ವರೆಗೆ ಮಡಿಕೇರಿಯಲ್ಲಿ ಹೆಚ್ಚುಕಡಿಮೆಯಾಗುತ್ತಿರುತ್ತದೆ. ಈ ಅವಧಿಯಲ್ಲಿ ಸ್ವಲ್ಪ ಮಳೆಯಾಗುತ್ತದೆ. ಇದು ತೇವವಿಲ್ಲದ ಕಾಲ.

ಮಾರ್ಚ್ ಮತ್ತು ಮೇ ತಿಂಗಳ ನಡುವಿನ ಕಾಲ ಹೆಚ್ಚು ಉಷ್ಣತೆಯಿರದ, ಸ್ವಲ್ಪ ತೇವ ವಿರುವ ಕಾಲ. ಈ ಕಾಲದಲ್ಲಿ ಉಷ್ಣಾಂಶ 39° ಸೆಂಟಿಗ್ರೇಡ್‌ನಿಂದ 23° ಸೆಂಟಿಗ್ರೇಡ್‌ವರೆಗೆ ಬಳ್ಳಾರಿ, ಚಿತ್ರದುರ್ಗ ಮತ್ತು ಗದಗಗಳಲ್ಲಿ ಮತ್ತು 27° ಸೆಂಟಿಗ್ರೇಡ್‌ನಿಂದ 18° ಸೆಂಟಿಗ್ರೇಡ್ ವರೆಗೆ ಮಡಿಕೇರಿಯಲ್ಲಿ ಹೆಚ್ಚುಕಡಿಮೆಯಾಗುತ್ತಿರುತ್ತದೆ ಈ ಕಾಲದಲ್ಲಿ ಕ್ವಚಿತ್ತಾಗಿ ಮಳೆ ಯಾಗುತ್ತದೆ.

ಜೂನ್‌ನಿಂದ ಸೆಪ್ಟೆಂಬರ್ ತಿಂಗಳವರೆಗಿನ ಕಾಲ ಮಳೆಗಾಲ. ಈ ಕಾಲದಲ್ಲಿ ಉಷ್ಣತೆ, ಹವೆಯಲ್ಲಿರುವ ಆರ್ದ್ರತೆಯಿಂದಾಗಿ ಮತ್ತು ಆಕಾಶದಲ್ಲಿ ಮೋಡಗಳು ಆವರಿಸುವದರಿಂದಾಗಿ, ಕಡಿಮೆಯಾಗುತ್ತದೆ. ಉಷ್ಣಾಂಶಗಳು 33° ಸೆಂ. ನಿಂದ 21° ಸೆಂ ವರೆಗೆ ಬಳ್ಳಾರಿ, ಚಿತ್ರದುರ್ಗ ಮತ್ತು ಗದಗಗಳಲ್ಲಿ ಮತ್ತು 2(° ಸೆಂ ನಿಂದ 17° ಸೆಂ. ವರೆಗೆ ಮಡಿಕೇರಿಯಲ್ಲಿ ಬದಲಾಗು ತ್ತಿರುತ್ತದೆ.

ಅಕ್ಟೋಬರ್ ಮತ್ತು ಡಿಸೆಂಬರ್ ತಿಂಗಳುಗಳ ಮಧ್ಯದ ಕಾಲ ಮಾರುತಗಳು ಹಿಮ್ಮೆಟ್ಟುವ ಕಾಲ. ಈ ಕಾಲ ಅಕ್ಟೋಬರ್ ತಿಂಗಳ ಮಧ್ಯದಿಂದ ಪ್ರಾರಂಭವಾಗಿ ಜನವರಿ ತಿಂಗಳ ಮಧ್ಯದ ವರೆಗೆ ಇರುತ್ತದೆ. ಈ ಕಾಲದಲ್ಲಿ ಉಷ್ಣಾಂಶ 30° ಸೆಂ ನಿಂದ 19°ಸೆಂ. ವರೆಗೆ ಬಳ್ಳಾರಿ, ಚಿತ್ರದುರ್ಗ ಮತ್ತು ಗದಗಗಳಲ್ಲಿ ಮತ್ತು ಸೆಂ. 24° ನಿಂದ 17°ಸೆಂ. ವರೆಗೆ ಮಡಿಕೇರಿಯಲ್ಲಿ ಹೆಚ್ಚುಕಡಿಮೆಯಾಗುತ್ತಿರುತ್ತದೆ.[16]

ಆರ್ದ್ರತೆ


ಸಂಬಂಧಕ ಆರ್ದ್ರತೆ (relative humidity) ಜೂನ್‌ನಿಂದ ನವೆಂಬರ್‌ವರೆಗೆ ದಾವಣ ಗೆರೆಯಲ್ಲಿ ಹೆಚ್ಚಿರುತ್ತದೆ. ವರ್ಷದ ಉಳಿದ ತಿಂಗಳುಗಳಲ್ಲಿ, ಅದರಲ್ಲೂ ಬೇಸಿಗೆ ಕಾಲದಲ್ಲಿ, ಸಂಬಂಧಕ ಆರ್ದ್ರತೆ ಕಡಿಮೆಯಿರುತ್ತದೆ ಮತ್ತು ಶೇಕಡಾ 30ಕ್ಕಿಂತ ಕಡಿಮೆಗೆ ಇಳಿಯುತ್ತದೆ. (ಪಟ್ಟಿ 6 ಮತ್ತು ಆಕೃತಿ 4 ಬೆಳಿಗ್ಗೆ ಮತ್ತು ಸಂಜೆಯಲ್ಲಿರುವ ಸಂಬಂಧಕ ಆರ್ದ್ರತೆಯನ್ನು ತೋರಿಸುತ್ತದೆ).

ಜೂನ್‌ನಿಂದ ಅಕ್ಟೋಬರ್ ತಿಂಗಳ ನಡುವಿನ ಕಾಲಾವಧಿಯಲ್ಲಿ ಆಕಾಶವಲ್ಲಿ ಮೋಡ ಗಳಿಂದ ಯಾವಾಗಲೂ ಕತ್ತಲೆ ಕವಿದಿರುತ್ತದೆ. ವರ್ಷದ ಉಳಿದ ತಿಂಗಳುಗಳಲ್ಲಿ ಅದು ನಿರ್ಮಲವಾಗಿರುತ್ತದೆ ಮತ್ತು ಕಡಿಮೆ ಮೋಡಗಳಿಂದ ಕೂಡಿರುತ್ತದೆ.[17]

ಗಾಳಿ

ಗಾಳಿ ಸಾಮಾನ್ಯವಾಗಿ ಸೌಮ್ಯವಾಗಿರುತ್ತದೆ ಮತ್ತು ನೈರುತ್ಯ ಮಾರುತದ ಕಾಲದಲ್ಲಿ ಬಲವಾಗಿ ಬೀಸುತ್ತದೆ. ನೈರುತ್ಯ ಮಾರುತದ ಕಾಲದಲ್ಲಿ ಅದು ನೈರುತ್ಯ ಅಥವಾ ಪಶ್ಚಿಮ ದಿಕ್ಕಿನಿಂದ ಬೀಸುತ್ತದೆ. ವರ್ಷದ ಉಳಿದ ಕಾಲದಲ್ಲಿ ಅದು ಮುಖ್ಯವಾಗಿ ಈಶಾನ್ಯ ಮತ್ತು

ಆಕೃತಿ 4



ಸಂಬಂಧಕ ಆರ್ದ್ರತೆ


ಪಟ್ಟಿ 7

ಪ್ರತಿ ಘಂಟೆಯಲ್ಲಿ ಬೀಸುವ ಗಾಳಿಯ ಮಧ್ಯಸ್ಥ ವೇಗ ಕಿಲೊಮೀಟರುಗಳಲ್ಲಿ

ಜನವರಿ	ಫೆಬ್ರವರಿ	ಮಾರ್ಚ್	ಏಪ್ರಿಲ್	ಮೇ	ಜೂನ್	ಜುಲೈ	ಆಗಸ್ಟ್	ಸೆಪ್ಟೆಂಬರ್	ಅಕ್ಟೋಬರ್	ನವೆಂಬರ್	ಡಿಸೆಂಬರ್	ಸರಾಸರಿ
7.4	6.3	6.6	7.1	10.0	12.9	13.7	12.2	9.8	5.9	6.1	7.4	8.8

ಮೂಲ : Sri Satyan (ed.) : *Mysore State Gazetteer, Chitradurga District*, p. 24

ಆಕೃತಿ 5



ಆಗ್ನೇಯ ದಿಕ್ಕುಗಳಿಂದ ಬೀಸುತ್ತದೆ.[18] (ಪಟ್ಟಿ 7 ಮತ್ತು ಆಕೃತಿ 5 ಪ್ರತಿಘಂಟೆಯಲ್ಲಿ
ಬೀಸುವ ಗಾಳಿಯ ಮಧ್ಯಸ್ಥ ವೇಗವನ್ನು ತೋರಿಸುತ್ತವೆ.)

ವಿಶೇಷ ಹವಾಮಾನ ವಿವರಗಳು

ಸಿಡಿಲು ಗುಡುಗುಗಳು ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಪದೇ ಪದೇ ಉಂಟಾಗುತ್ತವೆ ಮತ್ತು ನೈರುತ್ಯ ಮಾರುತದ ಕಾಲದಲ್ಲಿ ಸ್ವಲ್ಪ ಕಡಿಮೆ ಉಂಟಾಗುತ್ತವೆ. ಮಳೆಗಾಲಕ್ಕಿಂತ ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳುಗಳಲ್ಲಿ ಅವು ಪದೇ ಪದೇ ಉಂಟಾಗುತ್ತವೆ. ಮಳೆಗಾಲದ ನಂತರದ ಕಾಲದಲ್ಲಿ ಬಂಗಾಳಕೊಲ್ಲಿಯಲ್ಲಿ ಉತ್ಪತ್ತಿಯಾದ ಚಂಡಮಾರುತಗಳು ಪೂರ್ವ ಕರಾವಳಿಯನ್ನು ದಾಟಿ, ಹಲವು ಬಾರಿ ವಾಯುಭಾರದ ಇಳಿತಕ್ಕೊಳಗಾಗಿ ದ್ವೀಪಕಲ್ಪದ ಮೇಲೆ ಹಾದುಹೋಗುವಾಗ ವಿಸ್ತಾರವಾದ ಪ್ರದೇಶಗಳಲ್ಲಿ ಮಳೆಯಾಗುತ್ತದೆ.[19] (ಪಟ್ಟಿ 8 ವಿಶೇಷ ಹವಾಮಾನ ವಿವರಗಳನ್ನು ತೋರಿಸುತ್ತದೆ)

ಪಟ್ಟಿ 8

ವಿಶೇಷ ಹವಾಮಾನ ವಿವರಗಳು


ತಿಂಗಳು	ಜನವರಿ	ಫೆಬ್ರವರಿ	ಮಾರ್ಚ್	ಏಪ್ರಿಲ್	ಮೇ	ಜೂನ್	ಜುಲೈ	ಆಗಸ್ಟ್	ಸೆಪ್ಟೆಂಬರ್	ಅಕ್ಟೋಬರ್	ನವೆಂಬರ್	ಡಿಸೆಂಬರ್	ವಾರ್ಷಿಕ
ಸಿಡಿಲು	0 1	0.8	1.8	6.6	10.3	2.4	0.2	1.4	4.3	3.7	1.0	0.0	32.6
ಆಲಿಕಲ್ಲು	0.0	0.0	0.0	0.1	0.0	0 1	0.0	0.0	0.0	0.0	0.0	0.0	0.2
ಬಿರುಗಾಳಿ	0.0	0.0	0.0	0.0	0.1	0.1	0.0	0.0	0.0	0.0	0.0	0.0	0.2
ಮಳೆ ಮಂಜು ಹೋದ ...ಯಿಂದ ಕೂಡಿದ ಬಿರುಗಾಳಿ	0.0	0.0	0.0	0.0	0.0	0.0	0.0	0.0	0 0	0.0	0.0	0.0	0.0
ಮಂಜು	0.1	0.0	0.0	0.0	0.0	0.0	0.0	0.0	0.0	0.2	0 3	0.0	0.6

ಮೂಲ : Sri Satyan (ed) : *Mysore State Gazetteer, Chitradurga District*, p. 24

ವಾಯುಗುಣ ಮತ್ತು ಮನುಷ್ಯನ ಹಿತ


ಟೈಲರ್‌ನ ಹಿತದ ಅಳತೆಗೋಲನ್ನು (Taylor's Comfort Scale) ದಾವಣಗೆರೆಗೆ ಅನ್ವಯಿಸಿದರೆ ಅಲ್ಲಿ ಇಡೀ ವರ್ಷದಲ್ಲಿ ವಾಯುಗುಣ ಹಿತಕರವಾಗಿರುವುದಿಲ್ಲ ಎಂದು

ಆಕೃತಿ 6



ಹೀದರ್ ರೇಖಾಚಿತ್ರ

ಆಕೃತಿ 7



ವಾಯುಗುಣ ರೇಖಾಚಿತ್ರ ಮತ್ತು ಟೈಲರನ ಹಿತದ ಅಳತೆಗೋಲು

ಆಕೃತಿ 8



ವಾಯುಗುಣ ರೇಖಾಚಿತ್ರ

ಗೊತ್ತಾಗುತ್ತದೆ. ಇದಕ್ಕೆ ಮುಖ್ಯ ಕಾರಣ ವರ್ಷಪೂರ್ತಿಯಿರುವ ಹೆಚ್ಚಿನ ಉಷ್ಣಾಂಶ ಮತ್ತು ಕಡಿಮೆ ಆರ್ದ್ರತೆಯಿರುವ ವಾಯುಗುಣ (ಆಕೃತಿಗಳು 6, 7 ಮತ್ತು 8 ಕ್ರಮವಾಗಿ ಹೀಥರ್ ರೇಖಾಚಿತ್ರ, ವಾಯುಗುಣ ರೇಖಾಚಿತ್ರ ಮತ್ತು ಟೈಲರ್‌ನ ಹಿತದ ಅಳತೆಗೋಲು ಮತ್ತು ವಾಯುಗುಣ ರೇಖಾಚಿತ್ರವನ್ನು ತೋರಿಸುತ್ತವೆ.)

ಪ್ರಾಕೃತಿಕ ಪರಿಸರದಿಂದ ನಗರದ ಬೆಳವಣಿಗೆಗೆ ಆದ ಪ್ರಯೋಜನ

ಕಳೆದ ಶತಕದಲ್ಲಿ ಚಿಕ್ಕ ಊರಾಗಿದ್ದ ದಾವಣಗೆರೆ ಇಂದು ರಾಜ್ಯದಲ್ಲಿಯೇ ಪ್ರಮುಖ ಕೈಗಾರಿಕೆಯ ಮತ್ತು ವಾಣಿಜ್ಯ ಕೇಂದ್ರಗಳಲ್ಲೊಂದಾಗಲು ಕಾರಣ ಅದರ ಪ್ರಾಕೃತಿಕ ಪರಿಸರ. ಇಂದು ದಾವಣಗೆರೆ ಹತ್ತಿ, ನೂಲು ಮತ್ತು ಬಟ್ಟೆ, ಎಣ್ಣೆ, ಭತ್ತ ಮತ್ತು ಸಕ್ಕರೆಯ ಕೈಗಾರಿಕೆಗಳ ಕೇಂದ್ರವಾಗಲು ಮತ್ತು ನೆಲಗಡಲೆ, ಹತ್ತಿ, ಭತ್ತ, ರಾಗಿ ಮತ್ತು ಜೋಳದ ಪ್ರಮುಖ

ವ್ಯಾಪಾರ ಕೇಂದ್ರವಾಗಲು ಕಾರಣ ಅದು ಹತ್ತಿ, ನೆಲಗಡಲೆ, ಭತ್ತ, ಕಬ್ಬು, ರಾಗಿ ಮತ್ತು ಜೋಳ ಬೆಳೆಯುವ ಪ್ರದೇಶದಲ್ಲಿ ಇರುವದೇ ಆಗಿದೆ. ಈ ಪ್ರದೇಶದಲ್ಲಿ ಬೆಳೆಯುವ ಬೆಳೆಗಳ ಉಪಯೋಗವನ್ನು, ನಗರದ ಮತ್ತು ಅದರ ಹತ್ತಿರದಲ್ಲಿರುವ ಕೈಗಾರಿಕೆಗಳು ಪಡೆದುಕೊಂಡಿವೆ. ಈ ಸಂಗತಿಯನ್ನು ಅಭ್ಯಸಿಸಿ ಆರ್. ಪಿ. ಮಿಶ್ರಾರವರು ಹೀಗೆ ಬರೆದಿದ್ದಾರೆ. "ಔದ್ಯೋಗೀಕರಣ ಹೇಗೆ ಕೃಷಿಯ ಆಧಾರದಮೇಲೆ ಆಗಲು ಸಾಧ್ಯವಿದೆ ಎನ್ನುವುದಕ್ಕೆ ಮತ್ತು ಅದು ಹೇಗೆ ಯಶಸ್ವಿಯಾಗಬಹುದು ಮತ್ತು ಸ್ವಉತ್ಪಾದನಾಕಾರಿಯಾಗಬಹುದು ಎನ್ನುವುದಕ್ಕೆ ದಾವಣಗೆರೆ ಒಳ್ಳೆಯ ಉದಾಹರಣೆಯಾಗಿದೆ".[20]

ಹತ್ತಿ ಬೆಳೆಯುವ ಪ್ರದೇಶದ ಮಧ್ಯದಲ್ಲಿ ದಾವಣಗೆರೆ ಇರುವದರಿಂದ ಇದು ಹತ್ತಿಯ ನೂಲಿನ ಮತ್ತು ಬಟ್ಟೆಯ ಗಿರಣಿಗಳ ಸ್ಥಾಪನೆಗೆ ಯೋಗ್ಯ ಸ್ಥಳವಾಗಿದೆ. ದಾವಣಗೆರೆಯಲ್ಲಿ ಪ್ರಥಮ ಬಟ್ಟೆಯ ಗಿರಣಿ 1936ರಲ್ಲಿ ಪ್ರಾರಂಭವಾಯಿತು. 1970ರಲ್ಲಿ ದಾವಣಗೆರೆಯಲ್ಲಿ ಮತ್ತು ಅದರಿಂದ ನಾಲ್ಕು ಮೈಲು ತ್ರಿಜ್ಯದೊಳಗಿನ ಪ್ರದೇಶದಲ್ಲಿ ಒಟ್ಟು ಒಂಬತ್ತು ನೂಲಿನ ಮತ್ತು ಬಟ್ಟೆಯ ಗಿರಣಿಗಳಿದ್ದವು. ಆ ವರ್ಷ ಆ ಎಲ್ಲ ಗಿರಣಿಗಳಲ್ಲಿ ಒಟ್ಟು 2,61,45,624 ಕಿ. ಗ್ರಾ. ಹತ್ತಿಯ ನೂಲು ಮತ್ತು ಬಟ್ಟೆಯ ಉತ್ಪಾದನೆಯಾಗಿತ್ತು. ಈ ಗಿರಣಿಗಳು ಅಲ್ಲಿಯೇ ದೊರಕುವ ಮಧ್ಯಮ ಮತ್ತು ಚಿಕ್ಕ ಎಳೆಯಿರುವ ಹತ್ತಿಯಿಂದ ದಾರವನ್ನು ಮತ್ತು ಬಟ್ಟೆಯನ್ನು ಉತ್ಪಾದಿಸುತ್ತವೆ. ಈಗಿರುವ ಗಿರಣಿಗಳು ಹೆಚ್ಚುತ್ತಿರುವ ಬೇಡಿಕೆಯನ್ನು ಪೂರೈಸುವದಕ್ಕೋಸ್ಕರ ತಮ್ಮ ಉತ್ಪಾದನೆಯನ್ನು, ಹೆಚ್ಚಿಸುವ ಯೋಜನೆಯನ್ನಿಟ್ಟುಕೊಂಡಿವೆ.[21] ಇಲ್ಲಿ ದೊರಕುವ ಕಚ್ಚಾಪದಾರ್ಥಗಳು ಕೆಲಸಗಾರರು ಮತ್ತು ಒಳ್ಳೆಯ ಸಂಪರ್ಕ ವ್ಯವಸ್ಥೆಯಿಂದಾಗಿ ಈ ಉದ್ದಿಮೆ ಬೆಳೆಯಲು ಸಾಕಷ್ಟು ಅವಕಾಶವಿದೆ.

ಹತ್ತಿಯ ಕಾಳು ತೆಗೆದು ಚಪ್ಪಟೆಮಾಡುವದು ಮುಂಚಿನಿಂದಲೂ ಇಲ್ಲಿ ಇದ್ದಂಥ ಮುಖ್ಯ ಉದ್ದಿಮೆ. ಯಂತ್ರಗಳ ಸಹಾಯದಿಂದ ಹತ್ತಿಯಕಾಳು ಬೇರ್ಪಡಿಸಿ ಚಪ್ಪಟೆ ಮಾಡುವ ಏಕೈಕ ಕೇಂದ್ರ ದಾವಣಗೆರೆ ಆಗಿತ್ತು. ಹತ್ತೊಂಬತ್ತನೆಯ ಶತಮಾನದ ಕೊನೆಯ ಕಾಲದಲ್ಲಿ ಇಲ್ಲಿ ಪ್ರಥಮವಾಗಿ ಹತ್ತಿಯಕಾಳು ತೆಗೆದು ಚಪ್ಪಟೆಮಾಡುವ ಕೈಗಾರಿಕೆ ಆರಂಭವಾಯಿತು.. 1970ರಲ್ಲಿ ದಾವಣಗೆರೆಯಲ್ಲಿ ಹತ್ತಿಯಕಾಳು ಬೇರ್ಪಡಿಸಿ ಚಪ್ಪಟೆಮಾಡುವ 13 ಕೈಗಾರಿಕೆಗಳಿದ್ದವು. ಆ ವರ್ಷ ಅವುಗಳಲ್ಲಿ ಒಟ್ಟು 87,51, 426 ಕಿ. ಗ್ರಾ. ಹತ್ತಿಯಕಾಳು ಬೇರ್ಪಡಿಸಿ ಚಪ್ಪಟೆಮಾಡಲಾಯಿತು.[22] ಹತ್ತಿಯಕಾಳು ಬೇರ್ಪಡಿಸಿ ಚಪ್ಪಟೆಮಾಡುವ ಕೆಲವು ಕೈಗಾರಿಕೆಗಳು ನೆಲಗಡಲೆಯಕಾಳು ಬೇರ್ಪಡಿಸುವ ಯಂತ್ರಗಳನ್ನು ಸಹ ಇಟ್ಟುಕೊಂಡಿವೆ. ಇದಕ್ಕೆ ಕಾರಣ ವರ್ಷದಲ್ಲಿ ಹತ್ತಿ ದೊರಕುವ ಕಾಲ ಬರೀ ಆರುತಿಂಗಳು ಮಾತ್ರ.

ಈ ಪ್ರದೇಶದಲ್ಲಿ ಬೆಳೆಯುವ ಮತ್ತೊಂದು ಪೈರು ನೆಲಗಡಲೆ. ಸಸ್ಯಗಳ ಎಣ್ಣೆಯ (vegetable oil) ಕೈಗಾರಿಕೆ ಇಲ್ಲಿ ಸಾಕಷ್ಟು ಮುಂಚಿತವಾಗಿಯೇ ಪ್ರಾರಂಭವಾಯಿತು. ನೆಲಗಡಲೆ, ಹತ್ತಿಯಕಾಳು ಮತ್ತು ಎಳ್ಳು ಈ ಕೈಗಾರಿಕೆಗೆ ಬೇಕಾಗುವ ಕಚ್ಚಾಪದಾರ್ಥಗಳು. 1918ರಲ್ಲಿ ದಾವಣಗೆರೆಯಲ್ಲಿ ಪ್ರಥಮ ಎಣ್ಣೆಯ ಮಿಲ್ಲು ಪ್ರಾರಂಭವಾಯಿತು. 1970ರಲ್ಲಿ ನಗರದಲ್ಲಿ 10 ಎಣ್ಣೆಯ ಮಿಲ್ಲುಗಳಿದ್ದವು. ಅವುಗಳಲ್ಲಿ ಎರಡು ಘನೀಭವಿಸಿದ ತುಪ್ಪದ ಮಿಲ್ಲುಗಳು ಇದ್ದವು. ಆ ವರ್ಷ 2.54,000 ಕಿ ಗ್ರಾಂ. ಸೋಪು, 50, 14, 556 ಕಿ.ಗ್ರಾಂ ಹಿಂಡಿ, 57,91,200 ಕಿ.ಗ್ರಾಂ. ಸಸ್ಯದ ಎಣ್ಣೆ ಮತ್ತು 1,00,60,320 ಕಿ. ಗ್ರಾಂ. ಶುದ್ಧೀಕರಿಸಿದ ಮತ್ತು ಶುದ್ಧೀಕರಿಸದ ನೆಲಗಡಲೆಯ ಎಣ್ಣೆಯನ್ನು ಉತ್ಪಾದಿಸಲಾಯಿತು.[23]

ದಾವಣಗೆರೆಯ ಸುತ್ತಲಿನ ಪ್ರದೇಶಕ್ಕೆ ಭದ್ರಾನಾಲೆಯಿಂದ ನೀರೊದಗಿಸಲಾಗಿದೆ. ನೀರೊದಗಿಸಿದ ಭೂಮಿಯಲ್ಲಿ ಬೆಳೆಯುವ ಪೈರುಗಳು ಕಬ್ಬು. ಮತ್ತು ಭತ್ತ ದಾವಣಗೆರೆಯಿಂದ

ಎಂಟು ಮೈಲಿ ತ್ರಿಜ್ಯದ ಪ್ರದೇಶದಲ್ಲಿ ಎರಡು ಸಕ್ಕರೆ ಕಾರ್ಖಾನೆಗಳಿವೆ. 1970ರಲ್ಲಿ ದಾವಣಗೆರೆಯಲ್ಲಿ 13 ಮತ್ತು ಅದರ ಸುತ್ತಲಿನ ಪ್ರದೇಶದಲ್ಲಿ ಅನೇಕ ಅಕ್ಕಿಯ ಮಿಲ್ಲುಗಳಿದ್ದವು. ನಗರದಲ್ಲಿನ ಅಕ್ಕಿಯ ಮಿಲ್ಲುಗಳಲ್ಲಿ 3,83,900 ಕ್ವಿಂಟಾಲ್ ಅಕ್ಕಿಯನ್ನು ಉತ್ಪಾದಿಸಲಾಯಿತು.[24]

ಚಿಕ್ಕಮಗಳೂರು, ಹಾಸನ ಮತ್ತು ಕೊಡಗು ಜಿಲ್ಲೆಗಳಲ್ಲಿ ಕಾಫಿ ಬೀಜಗಳನ್ನು ಬೆಳೆಯಲಾಗುತ್ತದೆ. ದಾವಣಗೆರೆಯಲ್ಲಿರುವ ಕಾಫಿ ಉದ್ದಿಮೆಗಳು ಮುಖ್ಯವಾಗಿ ಈ ಜಿಲ್ಲೆಗಳಿಂದ ಕಾಫಿ ಬೀಜಗಳನ್ನು ಪಡೆಯುತ್ತವೆ. 1969ರಲ್ಲಿ ನಗರದಲ್ಲಿ 8 ಕಾಫಿಯ ಕೈಗಾರಿಕೆಗಳಿದ್ದವು.[25]

ಶಿವಮೊಗ್ಗ ಜಿಲ್ಲೆಯಲ್ಲಿ ಸಿಗುವ ತಂಬಾಕು ಎಲೆಗಳು ದಾವಣಗೆರೆಯಲ್ಲಿ ಬೀಡಿ ಉದ್ಯಮ ಬೆಳೆಯಲು ಮುಖ್ಯಕಾರಣ. ಅಲ್ಲಿಯ ಬೀಡಿ ಕೈಗಾರಿಕೆಗಳು ತಂಬಾಕನ್ನು ಮುಖ್ಯವಾಗಿ ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶಗಳಿಂದ ತರಿಸಿಕೊಳ್ಳುತ್ತವೆ. 1969ರಲ್ಲಿ ದಾವಣಗೆರೆಯಲ್ಲಿ 8 ಬೀಡಿಯ ಕೈಗಾರಿಕೆಗಳಿದ್ದವು. ಆ ವರ್ಷ ಅವುಗಳಲ್ಲಿ ಆದ ಒಟ್ಟು ಉತ್ಪಾದನೆ 3,25,00,000 ಬೀಡಿಗಳು ಮತ್ತು 3,000 ತಂಬಾಕಿನ ತುಂಡುಗಳು.[26]

ಶಿವಮೊಗ್ಗ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಸದಾ ಹಸಿರಾಗಿರುವ ಮತ್ತು ಮಿಶ್ರಿತ ಸದಾ ಹಸಿರಾಗಿರುವ ಕಾಡುಗಳಿವೆ. ಸಾಗುವಾನಿ ಮಂಡಿಗಳು ಮತ್ತು ಮರಕೊಯ್ಯುವ ಮಿಲ್ಲುಗಳು ಈ ಜಿಲ್ಲೆಗಳಿಂದ ಮರಗಳನ್ನು ತರಿಸಿಕೊಳ್ಳುತ್ತವೆ. 1970 ರಲ್ಲಿ ದಾವಣಗೆರೆಯಲ್ಲಿ 10 ಮರ ಕೊಯ್ಯುವ ಮಿಲ್ಲುಗಳು ಮತ್ತು ಪೀಠೋಪಕರಣಗಳ ಉದ್ದಿಮೆಗಳಿದ್ದವು. ಆ ವರ್ಷ ಎಲ್ಲ ಮರಕೊಯ್ಯುವ ಉದ್ದಿಮೆಗಳಲ್ಲಿ ಒಟ್ಟು 3,27,500 ಚದರ ಅಡಿ ಮರ ಕೊಯ್ಯಲಾಯಿತು.[27]

ದಾವಣಗೆರೆ ಪೂನಾ–ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿರುವದರಿಂದ, ಈ ಪ್ರದೇಶದಲ್ಲಿ ತ್ವರಿತಗತಿಯಲ್ಲಿ ಬೆಳೆಯುತ್ತಿರುವ ನಗರವಾದುದರಿಂದ ಮತ್ತು ಸಾಕಷ್ಟು ಪ್ರಮಾಣದಲ್ಲಿ ವಿದ್ಯುಚ್ಛಕ್ತಿಯ ಪೂರೈಕೆಯಾಗುವುದರಿಂದ ಇಲ್ಲಿ ಎಂಜಿನಿಯರಿಂಗ್ ಉದ್ದಿಮೆಗಳು ಬೆಳೆದಿವೆ. ಇವು ಮುಖ್ಯವಾಗಿ ವಾಹನಗಳನ್ನು ದುರಸ್ತುಮಾಡುವ, ಪೀಠೋಪಕರಣಗಳ, ವ್ಯವಸಾಯಕ್ಕೆ ಬೇಕಾಗುವ ಸಲಕರಣೆಗಳನ್ನು ತಯಾರಿಸುವ ಉದ್ದಿಮೆಗಳಾಗಿವೆ. 1969ರಲ್ಲಿ ನಗರದಲ್ಲಿ 32 ಎಂಜಿನಿಯರಿಂಗ್ ಉದ್ದಿಮೆಗಳಿದ್ದವು. ಆ ವರ್ಷ ರೂ 20,00,000 ಬೆಲೆಯ ವಸ್ತುಗಳನ್ನು ಉತ್ಪಾದಿಸಲಾಯಿತು.[28]

ದಾವಣಗೆರೆ ಮತ್ತು ಅದರ ಸುತ್ತಲಿನ ಪ್ರದೇಶದಲ್ಲಿರುವ ಭತ್ತದ ಮಿಲ್ಲುಗಳಲ್ಲಿ ಸಿಗುವ ಭತ್ತದ ಹೊಟ್ಟನ್ನು ಉಪಯೋಗಿಸಿಕೊಂಡು ಭತ್ತದ ಹೊಟ್ಟಿನ ಎಣ್ಣೆಯನ್ನು ತೆಗೆಯುವ ದೊಡ್ಡ ಕೈಗಾರಿಕೆ ನಗರದಲ್ಲಿ ಇಷ್ಟರಲ್ಲಿಯೇ ಪ್ರಾರಂಭವಾಗುತ್ತದೆ. ಇದಕ್ಕೆ ತೊಡಗಿಸುವ ಬಂಡವಾಳ ಅಂದಾಜು ರೂ. 25,00,000. ಅಂದಾಜು ರೂ. 50,00,000 ತೊಡಗಿಸಿ ವಾಹನಗಳಿಗೆ ಬೇಕಾಗುವ ಪಿಸ್ಟನ್‌ಗಳನ್ನು ತಯಾರಿಸುವ ಕೈಗಾರಿಕೆ ಸಹ ಇಷ್ಟರಲ್ಲಿಯೇ ಪ್ರಾರಂಭವಾಗುತ್ತದೆ. ದಾವಣಗೆರೆಯ ಸುತ್ತಲಿನ ಪ್ರದೇಶದಲ್ಲಿ ಲಭ್ಯವಿರುವ ಭತ್ತದ ಒಣಹುಲ್ಲು, ಕಬ್ಬಿನಸಿಪ್ಪೆ ಮತ್ತು ನಿರುಪಯುಕ್ತ ಕಾಗದ ಇವುಗಳನ್ನು ಉಪಯೋಗಿಸಿಕೊಂಡು ರಟ್ಟನ್ನು ತಯಾರಿಸುವ ಕಾರ್ಖಾನೆಯನ್ನು ಇಷ್ಟರಲ್ಲಿಯೇ ಪ್ರಾರಂಭಿಸಲಾಗುತ್ತದೆ. ಇದಕ್ಕೆ ತೊಡಗಿಸುವ ಅಂದಾಜು ಬಂಡವಾಳ ರೂ 3,00,000. ದಾವಣಗೆರೆ ಮತ್ತು ಹರಿಹರಗಳಲ್ಲಿ ಇರುವ ಕೈಗಾರಿಕೆಗಳಿಗೆ ಬಿಡಿಭಾಗಗಳನ್ನು ಒದಗಿಸುವ ಚಿಕ್ಕಯಂತ್ರೋಪಕರಣಗಳ ಕೈಗಾರಿಕೆಗಳ ಸ್ಥಾಪನೆಗೆ ಪ್ರೋತ್ಸಾಹ ಕೊಡುವ ಉದ್ದೇಶದಿಂದ ದಾವಣಗೆರೆ ನಗರದ ಹತ್ತಿರದಲ್ಲಿರುವ ಅವರಗೆರೆ ಮತ್ತು ಶಿರಮಗೊಂಡನಹಳ್ಳಿಗಳ ನಡುವಿನ ಪ್ರದೇಶದಲ್ಲಿ ಸುಮಾರು ಐವತ್ತು ಎಕರೆ ಪ್ರದೇಶದಲ್ಲಿ ಅಂದಾಜು ರೂ 1,50,000 ವೆಚ್ಚದಲ್ಲಿ ಕೈಗಾರಿಕೆಗಳ ಎಸ್ಟೇಟನ್ನು ಪ್ರಾರಂಭಿಸುವ ಯೋಜನೆ ತಯಾರಾಗಿದೆ.[29]

ದಾವಣಗೆರೆಯಲ್ಲಿ ಕೈಗಾರಿಕೆಗಳ ಬೆಳವಣಿಗೆಗೆ ಸಾಕಷ್ಟು ಸೌಲಭ್ಯಗಳಿವೆ. ಕೆಲವೊಂದು ಕಚ್ಚಾಪದಾರ್ಥಗಳ ಉಪಯೋಗವನ್ನು ಕೈಗಾರಿಕೆಗಳು ಇನ್ನೂ ಮಾಡಿಕೊಳ್ಳಬೇಕಾಗಿದೆ. ಈಗಾಗಲೇ ಇರುವ ಹತ್ತಿ, ನೂಲು ಮತ್ತು ಬಟ್ಟೆಯ, ಎಣ್ಣೆಯ, ಹತ್ತಿಯ ಕಾಳು ಬೇರ್ಪಡಿಸಿ ಚಪ್ಪಟೆ ಮಾಡುವ, ಮರಕೊಯ್ಯುವ ಶೀತೋಪಕರಣಗಳನ್ನು ಯಾತರಿಸುವ ಮತ್ತು ಎಂಜಿನಿಯರಿಂಗ್ ಕೈಗಾರಿಕೆಗಳ ಬೆಳವಣಿಗೆಗೆ ಸಾಕಷ್ಟು ಅವಕಾಶವಿದೆ. ಇದಲ್ಲದೆ ಹೊಸ ಉದ್ಯಮಗಳಾದ ಫೆರ್ರೊ–ಮ್ಯಾಂಗನಿಸ್ (Ferro–Manganese). ಸಿಮೆಂಟ್, ತಾಮ್ರದ ಅದಿರನ್ನು ಕರಗಿಸಿ ಲೋಹ ತೆಗೆಯುವ. ಸಲ್ಫ್ಯೂರಿಕ್ ಆಮ್ಲ ತಯಾರಿಸುವ, ಚರ್ಮದ. ಹತ್ತಿಯ ಗಿರಣಿಗಳಿಗೆ ಬೇಕಾಗುವ ಕಾಗದದ ಶಂಕು (paper cone) ಗಳನ್ನು ತಯಾರಿಸುವ, ಕಾಗದದ, ರಟ್ಟಿನ, ವಾಹನಗಳನ್ನು ರಿಪೇರಿ ಮಾಡುವ ಮತ್ತು ಈಗಿರುವ ಕೈಗಾರಿಕೆಗಳಿಗೆ ಬೇಕಾಗುವ ಪದಾರ್ಥಗಳನ್ನು ಅಥವಾ ಬಿಡಿಭಾಗಗಳನ್ನೊದಗಿಸುವ ಕೈಗಾರಿಕೆಗಳ ಸ್ಥಾಪನೆಗೆ ಅವಕಾಶವಿದೆ.[30] ಈ ಕೈಗಾರಿಕೆಗಳಿಗೆ ಬೇಕಾಗುವ ಎಲ್ಲಾ ಕಚ್ಚಾಪದಾರ್ಥಗಳು ಹತ್ತಿರದಲ್ಲಿಯೇ ಸಿಗುತ್ತವೆ. ಶರಾವತಿಯಿಂದ ನಗರದ ಅವಶ್ಯಕತೆಗೆ ಬೇಕಾಗುವಷ್ಟು ವಿದ್ಯುಚ್ಛಕ್ತಿಯ ಪೂರೈಕೆಯಾಗುತ್ತದೆ. 1975ರಲ್ಲಿ 66 ಕಿಲೊವಾಟ್ ಸಬ್ ಸ್ಟೇಷನ್ ಇತ್ತು. ಅದನ್ನು 220 ಕಿಲೋವಾಟ್ ಸಬ್ ಸ್ಟೇಷನ್ ಆಗಿ ಪರಿವರ್ತಿಸುವ ಯೋಜನೆಯನ್ನು ತಯಾರಿಸಲಾಗಿತ್ತು.[31] ತುಂಗಭದ್ರಾ ನದಿ ಮತ್ತು ಭದ್ರಾ ನಾಲೆಗಳಿಂದ ನಗರಕ್ಕೆ ಬೇಕಾಗುವಷ್ಟು ನೀರಿನ ಪೂರೈಕೆಯಾಗುತ್ತದೆ. ಈಗ ಕೊನೆಯ ಹಂತದಲ್ಲಿರುವ ಸಮಗ್ರ ನೀರಿನ ಪೂರೈಕೆಯ ಯೋಜನೆ ಪೂರ್ಣಗೊಂಡಾಗ ನಗರಕ್ಕೆ ಪ್ರತಿದಿನ 4.5 ದಶಲಕ್ಷ ಗ್ಯಾಲನ್ ನೀರಿನ ಪೂರೈಕೆಯಾಗುತ್ತದೆ.[32] ದಾವಣಗೆರೆಯ ಮೂಲಕ ಪೂನಾ - ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ಮತ್ತು ರೈಲುಮಾರ್ಗಗಳು ಹಾದುಹೋಗುತ್ತವೆ. ಎಲ್ಲ ಸ್ಥಳಗಳೊಂದಿಗೆ ದಾವಣಗೆರೆಯಿಂದ ರಸ್ತೆಗಳ ಮೂಲಕ ಸಂಪರ್ಕ ಒದಗಿಸಲಾಗಿದೆ. ಕೈಗಾರಿಕೆಗಳಿಗೆ ಬೇಕಾಗುವ ತರಪೇತಾದ ಮತ್ತು ತರಪೇತಾಗಿಲ್ಲದ ಕೆಲಸಗಾರರು ಸಿಕ್ಕುತ್ತಾರೆ. ಈ ಎಲ್ಲ ಕಾರಣಗಳಿಂದಾಗಿ ಹೊಸ ಕೈಗಾರಿಕೆಗಳ ಸ್ಥಾಪನೆಗೆ ಭವಿಷ್ಯದಲ್ಲಿ ಅವಕಾಶವಿದೆ.

ದಾವಣಗೆರೆ ಹತ್ತಿ, ನೆಲಗಡಲೆ, ಭತ್ತ, ರಾಗಿ, ಜೋಳ, ಬೇಳೆಗಳು, ಉಪಕೃತ ಧಾನ್ಯಗಳು (millets), ಕಬ್ಬು, ಸಜ್ಜೆ, ಮತ್ತು ಗೋಧಿ ಬೆಳೆಯುವ ಪ್ರದೇಶದಲ್ಲಿರುವುದರಿಂದ ಮತ್ತು ರೈಲುಮಾರ್ಗ ಮತ್ತು ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳಿಂದಾಗಿ ಉಳಿದ ಸ್ಥಳಗಳೊಂದಿಗೆ ಸಂಪರ್ಕ ಪಡೆದಿರುವುದರಿಂದ ಇಂದು ಇದು ರಾಜ್ಯದಲ್ಲಿಯೇ ಒಂದು ಪ್ರಮುಖ ವ್ಯಾಪಾರ ಕೇಂದ್ರವಾಗಿ ಬೆಳೆದಿದೆ. ಇಲ್ಲಿ ಹತ್ತಿ. ನೆಲಗಡಲೆ, ಜೋಳ, ಭತ್ತ, ರಾಗಿ. ಎಣ್ಣೆ ಮತ್ತು ಕಂಬಳಿಗಳ ದೊಡ್ಡ ಪ್ರಮಾಣದ ವ್ಯಾಪಾರವಾಗುತ್ತಿದೆ. ದಾವಣಗೆರೆಯಿಂದ ಮುಖ್ಯವಾಗಿ ರಫ್ತಾಗುವ ಪದಾರ್ಥಗಳು ರಾಗಿ, ಜೋಳ, ಹತ್ತಿ, ಎಣ್ಣೆಯ ಬೀಜಗಳು, ಬೇಳೆಗಳು, ಉಪಕೃತ ಧಾನ್ಯಗಳು (millets), ಹೊಟ್ಟು, ಎಣ್ಣೆಯ ಹಿಂಡಿ, ಮೈದಾ, ಹಸುವಿನ ಆಹಾರ ಹೊಟ್ಟು ಮತ್ತು ಕಂಬಳಿ. ದಾವಣಗೆರೆಯಿಂದ ರಫ್ತಾಗುವ ಎಲ್ಲ ಪದಾರ್ಥಗಳ ಬಗ್ಗೆ ವಿವರಗಳು ಸಿಗುವುದಿಲ್ಲ. ಇದಕ್ಕೆ ಕಾರಣ ಹೆಚ್ಚಿನ ಪದಾರ್ಥಗಳನ್ನು ಲಾರಿಗಳ ಮೂಲಕ ಸಾಗಿಸಲಾಗುತ್ತದೆ. ಆದರೆ ರೈಲಿನ ಮೂಲಕ ಸಾಗಿಸಲ್ಪಟ್ಟ ವಸ್ತುಗಳ ಬಗ್ಗೆ ವಿವರಗಳು ಸಿಗುತ್ತವೆ. 1971ರಲ್ಲಿ ರೈಲಿನ ಮೂಲಕ ರಫ್ತಾದ ಬೇಳೆಗಳು ಮತ್ತು ಉಪಕೃತ ಧಾನ್ಯಗಳು, ಹತ್ತಿ, ಎಣ್ಣೆಯ ಬೀಜಗಳು, ಎಣ್ಣೆಯ ಹಿಂಡಿ, ಮೈದಾ, ಹಸುವಿನ ಆಹಾರ ಹೊಟ್ಟು ಮತ್ತು ಸಿಪ್ಪೆ ಕ್ರಮವಾಗಿ 72,803, 9,625, 37,526, 1,76.012, 53,6[illegible]7, 7,065, 39,616 ಮತ್ತು 25,820 ಕ್ವಿಂಟಲ್‌ಗಳಷ್ಟಿತ್ತು.[32] ಇಲ್ಲಿ ನಡೆಯುವ ದೊಡ್ಡ ಪ್ರಮಾಣದ ರಫ್ತು ಮತ್ತು ಆಮದು

ವ್ಯಾಪಾರವನ್ನು ಬೆಂಗಳೂರು ಮತ್ತು ಬಳ್ಳಾರಿಗಳಲ್ಲಿ ನಡೆಯುವ ವ್ಯಾಪಾರಕ್ಕೆ ಹೋಲಿಸಬಹುದು.[34]

ದಾವಣಗೆರೆಯಲ್ಲಿರುವ ವ್ಯವಸಾಯೋತ್ಪನ್ನ ಮಾರಾಟ ಸಂಘ (ರೆಗ್ಯುಲೇಟೆಡ್ ಮಾರ್ಕೆಟ್) ಜಿಲ್ಲೆಯಲ್ಲಿಯೇ ಹಳೆಯದು ಮತ್ತು ರಾಜ್ಯದಲ್ಲಿರುವ ಅತಿ ದೊಡ್ಡ ಮಾರಾಟ ಸಂಘಗಳಲ್ಲೊಂದು. ಅಲ್ಲಿ ನೆಲಗಡಲೆ, ಹತ್ತಿ, ಜೋಳ, ಔಡಲ, ಬೇಳೆಗಳು, ಮೆಣಸು, ರಾಗಿ, ಭತ್ತ ಮತ್ತು ನವಣೆಗಳ ವ್ಯಾಪಾರ ದೊಡ್ಡಪ್ರಮಾಣದಲ್ಲಾಗುತ್ತದೆ. 1973–74ರಲ್ಲಿ ಈ ಮಾರಾಟ ಸಂಘಕ್ಕೆ ಬಂದ ನೆಲಗಡಲೆ, ಹತ್ತಿ, ಭತ್ತ, ರಾಗಿ, ಜೋಳ, ನವಣೆ ಮತ್ತು ಮೆಣಸುಗಳ ತೂಕ ಕ್ರಮವಾಗಿ 3,51,493, 75,258, 2,74,666, 42,559, 2,86,981, 5,391 ಮತ್ತು 2,672 ಕ್ವಿಂಟಾಲ್‌ಗಳಷ್ಟಿತ್ತು.[35]

ಅಡಿ ಟಿಪ್ಪಣಿಗಳು

[1] ಕ್ಷೇತ್ರಕೇಂದ್ರ ಪದ್ಧತಿ (centroid method)ಯ ಪ್ರಕಾರ ಮಧ್ಯಮ ಗಾತ್ರದ, ವ್ಯವಸಾಯ ಪ್ರಧಾನ ಪಟ್ಟಣ ಹರಪನಹಳ್ಳಿ ಹೆಚ್ಚು ಬೆಳೆ ಬೆಳೆಯುವ ವಿಶಾಲವಾದ ಪ್ರದೇಶದಲ್ಲಿದ್ದು, ಕರ್ನಾಟಕ ರಾಜ್ಯದ ಭೌಗೋಳಿಕ ಕೇಂದ್ರವಾಗಿದೆ. ಆದರೆ ಇದಕ್ಕೆ ಸುತ್ತಲಿನ ಪ್ರದೇಶದಿಂದ ಸರಿಯಾದ ಸಂಪರ್ಕ ವ್ಯವಸ್ಥೆಯಿಲ್ಲ ಮತ್ತು ರೈಲು ಸೌಲಭ್ಯವಿಲ್ಲ.

V. L. S. Prakash Rao : *Towns of Mysore State* (Newyork : Asia Publishing Society, 1964), p. 32.

[2] R. P. Misra: *Geography of Mysore* (New Delhi : National Book Trust India, *1973*), pp *14-15* ; D. N. Wadia : *Geology of India* (London : The English Language Society and Macmillan & Co. Ltd., 1966), pp 97-98

[3] I. P. Ekoramaradhya : *A Study of Industrial Development at Davangere – Harihar* (Unpublished Master's Thesis, Indian Institute of Technology, 1967), pp 29–34.

[4] Misra : *op.cit*, pp 36–39; S. P. Rayachaudhuri and others ; *Soils of India* (New Delhi: Indian Council of Agricultural Research, 1963), pp 185–88.

[5] A. T. A. Learmonth : *Mysore State : A Regional Synthesis*, Vol II (Newyork : Asia Publishing House, 1962), pp 110–11

[6] Government of Karnataka, Department of Economics and Statistics ; *Karnataka At a Glance* (Bangalore : Government Printing Press, 1975)

[7] B. N. Sri Satyan (ed.): *Chitradurga District, Mysore State Gazetteer* (Bangalore : Government Printing Press, 1967), pp 18–20 ; C. Hayavadana Rao (ed.) : *Mysore Gazetteer*, Vol V (Bangalore : Government Press, 1930), pp 1208–11 ; K. Abhishankar (ed.) : *Bellary District Mysore Gazetteer* (Bangalore: Government Press, 1972), p. 25. ; M. R, Palande (ed.) : *Dharwar District Gazetteer of Bombay State* (Bombay : Government Printing Press, 1959). pp 34-40.

[8] *Karnataka At a Glance, op. cit.*,

[9] Satyan : *op. cit.*, pp 20–21 ; Hayavadana Rao : *op. cit.*, pp 1213–14 : Abhishankar : *op.cit.*, pp 25–26 ; Palande: *op. cit.*; pp 40–51

[10] *Karnataka at a Glance, op. cit.*,

[11] Sri Satyan : *op. cit.*, p. 26

[12] Sri Satyan: *op. cit.*, p 26 ; Abhishankar: *op.cit.*, pp 26-27 Hayavadana Rao: *op. cit*., pp 1214-16 ; Palande ; *op. cit.*, pp 18-25.

[13] Sri Satyan: *op. cit.*, p. 26

[14] Sri Satyan: *op. cit.*, pp 22-23 : Abhishankar: *op. cit.*, pp. 26–27 ; Hayavadana Rao: *op. cit.*, pp 1214–16 Palande, *op. cit*. pp 18–25.

[15] Sri Satyan: *op. cit.*, pp 22–24

[16] Misra: *op. cit.*, pp 32–34

[17] Sri Satyan: *op. cit.*, p. 23

[18] Ibid., p. 24

[19] Ibid.

[20] Misra: *op. cit.*, p. 121

[21] *A Report of the Industrial Establishments in Davanagere* (Office of the Assistant Director of Town planning, Davanagere) 1970

[22] Ibid.

[23] Ibid.

[24] Ibid.

[25] *Mysore Industrial Directory*, Department of Industries and Commerce, Government of Mysore, (Bangalore: Government Printing Press, 1970): pp 604–05

[26] Ibid.,

[27] Ibid., p. 606

[28] Ibid., p, 606

[29] ಕೈಗಾರಿಕೆಗಳ ಮತ್ತು ವಾಣಿಜ್ಯ ಇಲಾಖೆಯ ಸಹಾಯಕ ನಿರ್ದೇಶಕರ ಹೇಳಿಕೆ, ವೈಯಕ್ತಿಕ ಸಂದರ್ಶನ, ಮೇ 10, 1976

[30] *Report of the Techno-Economic Survey of Mysore*, Department of Mines and Geology, Small – scale Industries Organisation, Government of Mysore.

[31] Grid Map of Mysore State (Office of the Chief Engineer, Mysore State Electricity Board, Bangalore, 1975)

[32] *A Report of the Comprehensive Water Supply Scheme to Davanagere City* (Office of the Assistant Engineer, P. H. E, sub-Division, Davanagere, 1972)

[33] *Annual Report of Davanagere City Railway Station* (Office of the Station Master, Davanagere City Railway station, Davanagere, 1975)

[34] Sri Satyan: *op. cit.*, p. 195.

[35] *A Brief Note on the Working of the Agricultural Produce Market Committee* (Office of the Secretary of Regulated Market, Davanagere, 1975)

ಉದ್ಯಮಗಳ ಸ್ಥಾಪನೆ ಮತ್ತು ಏಳಿಗೆಗೆ ಬೇಕಾದ ಭೂಮಿ, ನೀರು, ವಾಯುಗುಣ, ಕಚ್ಚಾ ಪದಾರ್ಥಗಳು ಮುಂತಾದವು ಭೌಗೋಲಿಕ ಪರಿಸರದಿಂದ ನಿರ್ಧರಿಸಲ್ಪಡುವಂತಹುಗಳು. ಮಾನವನ ವೈಜ್ಞಾನಿಕ ಹಾಗೂ ತಾಂತ್ರಿಕ ಜ್ಞಾನಗಳಲ್ಲಾಗುವ ಯಾವುದೇ ಬೆಳವಣಿಗೆ ಇವನ್ನು ಮೂಲತಃ ಬದಲಾವಣೆ ಮಾಡಲಾಗದು. ಕೈಗಾರಿಕೆಗಳ ಕೇಂದ್ರೀಕರಣಕ್ಕೆ ಸಾಕಷ್ಟು ಶಕ್ತಿಯ ಲಭ್ಯತೆ, ಸನ್ನಿವೇಶ, ಸಾರಿಗೆ ಸಂಪರ್ಕ, ಕಚ್ಚಾ ಪದಾರ್ಥಗಳು ದೊರೆಯುವಿಕೆ, ತಾಂತ್ರಿಕ ತರಬೇತಿ ಹೊಂದಿರುವ ನುರಿತ ಕಾರ್ಮಿಕರ ಅವಶ್ಯಕತೆಗಳೂ ಮಹತ್ವವಾಗಿವೆ. ಇವೆಲ್ಲಕ್ಕಿಂತ ಮಿಗಿಲಾಗಿ ಕೈಗಾರಿಕೆಗಳ ಕೇಂದ್ರೀಕರಣದಿಂದ ಆರ್ಥಿಕ ಸೌಲಭ್ಯಗಳು, ಪರಸ್ಪರ ಸಹಕಾರ ಸುಲಭಸಾಧ್ಯವಾಗುತ್ತವೆ.

ಬಾ ಸಾಮಗ ಮಲ್ಪೆ

ಹೊಯ್ಸಳರು ಮತ್ತು ತುಳುನಾಡು

ಕರ್ನಾಟಕವನ್ನಾಳಿದ ರಾಜಮನೆತನಗಳಲ್ಲಿ ಹೊಯ್ಸಳರಿಗೆ ಪ್ರಮುಖ ಸ್ಥಾನವಿದೆ. ಹೊಯ್ಸಳರ ಆಳ್ವಿಕೆಯಿಂದ ಕರ್ನಾಟಕದ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಮೊದಲಾದ ರಂಗಗಳು ಸಾಕಷ್ಟು ಬದಲಾವಣೆಗಳನ್ನು ಕಂಡವು. ತುಳುನಾಡು, ತುಳುದೇಶ, ತುಳುರಾಜ್ಯ ಆಳ್ವಖೇಡ–ಮೊದಲಾಗಿ ಪ್ರಸಿದ್ಧಿಗೊಂಡ ಇಂದಿನ ದಕ್ಷಿಣ ಕನ್ನಡಜಿಲ್ಲೆ ಹೊಯ್ಸಳರ ಪ್ರಭಾವಕ್ಕೆ ಒಳಗಾಯಿತು. ಆಗಿನ ಕಾಲದ ಹಲವಾರು ಶಾಸನಗಳು ಹೊಯ್ಸಳರು ಮತ್ತು ತುಳುನಾಡಿನ ಸಂಬಂಧದ ಕುರಿತು ಬೆಳಕು ಚೆಲ್ಲಿವೆ.

ತುಳುನಾಡನ್ನಾಳಿದ ಅರಸರಲ್ಲಿ ಆಳುಪರು ಪ್ರಸಿದ್ಧರು. ಕ್ರಿ. ಶ. 3ನೆಯ ಶತಮಾನ ದಿಂದ ಕ್ರಿ. ಶ. 14ನೆಯ ಶತಮಾನದ ಕೊನೆಯವರೆಗೂ ಅಂದರೆ 1,200 ವರ್ಷಗಳಿಗೂ ಹೆಚ್ಚುಕಾಲ ಆಳುಪರು ತಮ್ಮ ಸ್ಥಾನವನ್ನು ಉಳಿಸಿಕೊಂಡು ಬಂದಿದ್ದರೆಂದು ಶಾಸನಗಳು ನಿರೂಪಿಸುತ್ತವೆ.[1] ಹೊಯ್ಸಳರು ತಮ್ಮ ಸಾಮ್ರಾಜ್ಯ ಸ್ಥಾಪಿಸಿದಂದಿನಿಂದ ಪಶ್ಚಿಮ ಕರಾವಳಿ ಯಲ್ಲಿ ಕೆಲವು ಬದಲಾವಣೆಗಳುಂಟಾದವು. ಕ್ರಿ. ಶ. 12, 13, 14ನೆಯ ಶತಮಾನಗಳಲ್ಲಿ ಕೆಲವು ಜೈನ ಅರಸರು ತುಳುನಾಡಲ್ಲಿ ತಲೆ ಎತ್ತಿ ಆಳುಪ ಅರಸರ ಪ್ರಭಾವವನ್ನು ಕುಂಠಿತಗೊಳಿಸ ತೊಡಗಿದರು. ಈ ರೀತಿಯ ಜೈನ ಅರಸರಲ್ಲಿ ಒಂಗವಾಡಿಯ ಬಂಗರು, ಯೇಣೂರಿನ ಅಜಿಲರು, ಕಾರ್ಕಳದ ಸಾಂತರಸರು ಪಶ್ಚಿಮ ಘಟ್ಟದ ಆಚೆ ಪ್ರದೇಶದಿಂದ ತುಳುನಾಡಿಗೆ ಬಂದಿದ್ದರು.[2] ಬಂಗರ ತವರುಮನೆಯನ್ನು ಹೊಯ್ಸಳ ಚಕ್ರವರ್ತಿ ವಿಷ್ಣುವರ್ಧನನೇ ಬಿಡಿಸಿದ್ದನು.[3] ಅಜಿಲರು ಗಂಗವಾಡಿಯ ಚಾವುಂಡರಾಯನ ಸಂಬಂಧಿಗಳಾಗಿದ್ದರು[4]

ತುಳುನಾಡಿಗೆ ಸಂಬಂಧಿಸಿದಂತೆ ಕ್ರಿ. ಶ. 1101ನೆಯ ಬೇಲೂರು ಶಾಸನವು ಒಂದನೆಯ ಬಲ್ಲಾಳನು ಕೊಂಕಣ, ಆಳ್ವಖೇಡ, ಬಯಲುನಾಡು, ತಲಕಾಡು ಮತ್ತು ಸಾವಿಮಲೆ ಪ್ರದೇಶ ಗಳನ್ನು ಆಳುತ್ತಿದ್ದನೆಂದು ತಿಳಿಸುತ್ತದೆ.[5] ಆದರೆ ಆಳುಪರಿಗೂ ಹೊಯ್ಸಳರಿಗೂ ನಡೆದ ಕದನದ ಕುರಿತ ಮೊದಲ ವಿವರ ಸಿಗುವುದು ಕ್ರಿ. ಶ. 1115ರ ಶಾಸನವೊಂದರಲ್ಲಿ.[6] ಅದು ಈ ರೀತಿ ಇದೆ :

ಸ್ವಸ್ತಿ ಶ್ರೀಮನ್ಮಹಾಮಂಡಳೇಶ್ವರಂ ತ್ರಿಭುವನಮಲ್ಲ ವಿಷ್ಣುವರ್ಧನಹೊಯ್ಸಳದೇವರು ಗಂಗವಾಡಿತೊಂಭತಾಱುಸಾಸಿರಮಂ ಸುಖದಿನಾಳುತ್ತಮಿರೆ .... ಸೆಟ್ಟಿಗಾವುಂಡನಾಳುವ ಖೇಡವಱುಸಾಸಿರದಲು ನಿಗಳವಿಕ್ಕಿ ಜಯಸಿಂಗ ಆಳುವರಸ ಮುಂದೆ ಸುರಿಗೆಗಾಳೆಗವಂ ಕಾದಿ ಗೆಲು ಬಂದು ತರಿವಿಡಿಹಿರೂರಲು ಗಾವುಂಡತನಂಗೆಯ್ಯುತಮಿರೆ ಶಕಕಾಲದ ೧೦೩೬ನೆಯ ಜಯ ಸಂವತ್ಸರದ ಚೈತ್ರ ಶುದ್ಧ ಪಾಡಿವ ವಡ್ಡವಾರದಂದು ಸೀರೆನಾಡ ಪಳಿಕಾಜನಾಯಕರು

ಬಂದೂ ತಂವನೂಯ .... ಮರ್ಯಾದೆಯಿಂ ತುಳುವಂ ಪರಿಯಿಸಲು ಭುಜಬಳದಿಂ ತಾನೆ ಕಾದಿ ಪಲಜಿನಿಱಿದು ತುಳುವಂ ಮುಗುಳ್ಚಿ ಸುರಲೋಕ ಪ್ರಾಪ್ತನಾದ ॥[7]

ಈ ಶಾಸನದ ಅಭಿಪ್ರಾಯದಂತೆ ವಿಷ್ಣುವರ್ಧನ ಯುವರಾಜನಾಗಿದ್ದಾಗ ಹೊಯ್ಸಳ ನಾಯಕನಾದ ಸೆಟ್ಟಿಗಾವುಂಡನು ಆಳ್ವಖೇಡ – 6000 (ತುಳುನಾಡು)ಕ್ಕೆ ಸಾಗಿ ಅಲ್ಲಿನ ಆಳುಪ ಅರಸನಾದ ಜಯಸಿಂಗನೊಡನೆ[8] ಯುದ್ಧಮಾಡಿ ಆಳುಪರಸನನ್ನು ಸೋಲಿಸಿದನು. ಈ ಯುದ್ಧವು ಕ್ರಿ. ಶ. 1107ಕ್ಕೆ ಮೊದಲೇ ನಡೆದಿರಬೇಕು. ಏಕೆಂದರೆ ಅದೇ ವರ್ಷದ ಚಾಲುಕ್ಯ ವಿಕ್ರಮಾದಿತ್ಯನ ಹಿರೇಹಡಗಲಿ ಶಾಸನ ವಿಷ್ಣುವರ್ಧನ ತುಳುನಾಡನ್ನು ಜಯಿಸಿದುದನ್ನು ನಮೂದಿಸಿದೆ (ತುಳುದೇಶಂ ಭೂಭಾಗದಿಂ ಕೊಂಡು).[9] ಸೆಟ್ಟಿಗಾವುಂಡನಿಂದ ಆಳುಪರಿಗೆ ಸೋಲಾದರೂ ಇದರಿಂದ ಆಳುಪರು ಯಾವುದೇ ಪ್ರದೇಶವನ್ನು ಕಳೆದುಕೊಳ್ಳಲಿಲ್ಲ.[10] ಆದರೆ ಈ ಕಾಲದ ಹೊಯ್ಸಳ ದಾಖಲೆಗಳು ಹೊಯ್ಸಳ ಸಾಮ್ರಾಜ್ಯ ಆಳ್ವಖೇಡವನ್ನು ಒಳಗೊಂಡಿತ್ತೆಂಬುದಾಗಿ ತಿಳಿಸಿವೆ.[11] ಆದ್ದರಿಂದ ಹೊಯ್ಸಳರು ತುಳುನಾಡಿನ ಮೇಲೆ ಸಂಪೂರ್ಣ ಪ್ರಭುತ್ವವನ್ನು ಸ್ಥಾಪಿಸದಿದ್ದರೂ ಆಳುಪರನ್ನು ಸೋಲಿಸಿ ಕಪ್ಪಕಾಣಿಕೆಗಳನ್ನು ಪಡೆದಿದ್ದರೆಂಬುದಾಗಿ ಊಹಿಸಬಹುದು.

ವಿಷ್ಣುವರ್ಧನ ಹೊಯ್ಸಳ ಪಟ್ಟವೇರಿದ ಬಳಿಕ ತುಳುನಾಡಿನ ಮೇಲೆ ಮತ್ತೊಮ್ಮೆ ದಂಡೆತ್ತಿ ಬಂದನು. ಈ ಸಂದರ್ಭದಲ್ಲಿ ತುಳುನಾಡನ್ನು ಆಳುಪರಸ ಕವಿ ಆಳುಪೇಂದ್ರನು (ಸು. ಕ್ರಿ. ಶ. 1110–60)ಆಳುತ್ತಿದ್ದನು. ವಿಷ್ಣುವರ್ಧನನ ಸೇನೆಯ ತುಳುನಾಡ ಆಕ್ರಮಣದ ಕುರಿತು ಕ್ರಿ. ಶ. 1155ರ ಶಾಸನದಿಂದ[12] ತಿಳಿದು ಬರುವುದಾದರೂ ಈ ಘಟನೆ ಕ್ರಿ. ಶ. 1117 ಕ್ಕಿಂತ ಮೊದಲೆ ನಡೆದಿರಬೇಕು. ಏಕೆಂದರೆ ಕ್ರಿ. ಶ. 1117ರ ಶಾಸನಗಳು ವಿಷ್ಣುವರ್ಧನನನ್ನು 'ಉತ್ಪಾಟಿತ ಘಟ್ಟಕವಾಟನ್' 'ತುಳುನೃಪಾಳಹೃದಯ ವಿದಳನ ರಣಕೇಲಿ' ಎಂದು ಮುಂತಾಗಿ ಹೊಗಳಿವೆ.[13] ಈ ದಾಳಿಯಲ್ಲಿ ಹೊಯ್ಸಳರ ಸೇನೆಯ ನಾಯಕತ್ವವನ್ನು ವಹಿಸಿ ಆಳುಪರನ್ನು ಮುರಿದವನು ವಿಷ್ಣುವರ್ಧನನ ಅನುಯಾಯಿಯಾದ ಮಹಾಪ್ರಧಾನ, ಸೇನಾಧಿಪತಿ, ಹಿರಿಯ ಹಡವಳ ಬೋಕಿಮಯ್ಯನು.[14] ಕವಿ ಆಳುಪೇಂದ್ರನು ಯುದ್ಧದಲ್ಲಿ ಪರಾಭವಗೊಂಡಿದ್ದರೂ ಹೊಯ್ಸಳರು ತುಳುನಾಡನ್ನು ತಮ್ಮದಾಗಿಸಿಕೊಳ್ಳಲಿಲ್ಲವೆಂದೂ ಆಳುಪರು ರಾಜಕೀಯ ರಂಗದಲ್ಲಿ ಸ್ವತಂತ್ರರಾಗಿಯೇ ಉಳಿದಿದ್ದರೆಂದೂ ಹೊಯ್ಸಳರ ಮತ್ತು ಆಳುಪರ ಶಾಸನಗಳಿಂದ ಸ್ಪಷ್ಟವಾಗಿ ತಿಳಿದು ಬರುತ್ತದೆ.[15]

ಮೊದಲನೆಯ ನರಸಿಂಹನಕಾಲದಲ್ಲಿಯೂ ಹೊಯ್ಸಳರು ತುಳುನಾಡಿನ ಮೇಲೆ ಆಕ್ರಮಣ ನಡೆಸಿದ್ದರು. ಶಾಸನಗಳಲ್ಲಿ ನರಸಿಂಹನು 'ತುಳುವಬಳಜಳಧಿಬಡವಾನಳ' ಮುಂತಾಗಿ ಕರೆಯಲ್ಪಟ್ಟಿದ್ದಾನೆ.[16] ಬಂಗವಾಡಿಯ ಬಂಗರಸರ ಇತಿಹಾಸವು ನರಸಿಂಹನು ತುಳುನಾಡಿನ ಮೇಲೆ ದಾಳಿ ಮಾಡಿರುವುದಕ್ಕೆ ಸಾಕ್ಷಿಯಾಗಿದೆ. ವಿಷ್ಣುವರ್ಧನನಿಂದಾಗಿ ಸ್ಥಾನಪಲ್ಲಟಗೊಂಡ ಬಂಗರಸರ ಮೇಲೆ ನರಸಿಂಹನಿಗೆ ಕರುಣೆಯುಂಟಾಗಿ ಅವರನ್ನು ಬಂಗವಾಡಿಯ ಹದಿಮೂರು ಮಾಗಣೆಯ ಅರಸರನ್ನಾಗಿ ಮಾಡಿದನು. ಅಲ್ಲದೆ ರಾಜನಿಗೆ ವೀರನರಸಿಂಹನೆಂತಲೂ ನಾಮಧೇಯವಿತ್ತನು. ಈ ಘಟನೆ ಸುಮಾರು ಕ್ರಿ. ಸ. 1157ಕ್ಕೆ ಸೇರಿದ್ದಾಗಿದೆ.[17] ವೈಷ್ಣವರ ನಾಮಧೇಯವಾದ ವೀರನರಸಿಂಹ ಶೈವ–ಜೈನರಾದ ಬಂಗರ ವಂಶಾವಳಿಯಲ್ಲಿ ಕಾಣಿಸಿಕೊಳ್ಳುವುದಕ್ಕೆ ಹೊಯ್ಸಳರೇ ಕಾರಣರಾಗಿರಬೇಕೆಂಬ ಊಹೆಯಿದೆ.[18] ಬಂಗವಾಡಿ ಸಮೀಪದ ನರಸಿಂಹಅಂಗಡಿ ಎಂಬ ಹೆಸರು ಬರಲು ನರಸಿಂಹನೇ ಮೂಲವಾಗಿರಬೇಕು.[19]

ಎರಡನೆಯ ಬಲ್ಲಾಳನು ತುಳುನಾಡಿಗೆ ಆಗಮಿಸಿರಬೇಕು. 1173ರ ಶಾಸನವೊಂದು ಬಲ್ಲಾಳನೊಂದಿಗೆ ಯುದ್ಧಮಾಡಿ ಜೀವದಾಸೆಗೆ ಓಡಿಹೋದ ತುಳುವನ ಕುರಿತು ತಿಳಿಸುತ್ತದೆ.[20] ಬಹುಶಃ ಈ ಸಂದರ್ಭದಲ್ಲಿಯೇ ಆಳ್ವಖೇಡದ ಪರ್ವತಗಳು ಧೂಮದಿಂದಾವೃತವಾಗಿದ್ದವು.[21]

ಮೂರನೆಯ ನರಸಿಂಹ ತುಳುನಾಡಿಗೆ ಹೆಚ್ಚು ಗಮನ ನೀಡಿದನು. ಈ ಕಾಲದಲ್ಲಿ ತುಳುನಾಡು ಹೊಯ್ಸಳ ಸಾಮ್ರಾಜ್ಯದ ಒಂದು ಭಾಗವಾಯಿತು. ಯುವರಾಜ ಬಲ್ಲಾಳನು ತುಳುನಾಡಿನ ಪ್ರಾಂತಾಧಿಕಾರಿಯಾಗಿದ್ದನು. ಮೂಡಬಿದರೆಯಲ್ಲಿ 1281ರಲ್ಲಿ ಬಲ್ಲಾಳ ಹಿರಿಯರ ಹಾಗೂ ನಾಗರಿಕರ ಸಮಕ್ಷಮದಲ್ಲಿ 'ಧರ್ಮದ ಕಲ್ಲ'ನ್ನು ನೆಡಿಸಿದನು.[22] 1278ರ ಉತ್ತರ ಕನ್ನಡ ಜಿಲ್ಲೆಯ ಶಿರಾಲಿ ಶಾಸನ ಬಲ್ಲಾಳನನ್ನು ಮಹಾಮಂಡಳೇಶ್ವರ ಮತ್ತು ಕುಮಾರ ಎಂದು ಕರೆದಿದೆ.[23]

ಮೂರನೆಯ ಬಲ್ಲಾಳ ಹೊಯ್ಸಳ ಚಕ್ರವರ್ತಿಯಾದ ಬಳಿಕ ತುಳುನಾಡಿನಲ್ಲಿ ಹಿಂದಿಗಿಂತ ಹೆಚ್ಚು ಆಸಕ್ತಿ ವಹಿಸಿದನು. 1318–19ರಲ್ಲಿ ಬಲ್ಲಾಳನು ದಂಡನಾಯಕ ಸಂಕಿಯ ಸಾಹಣಿಯ ನೇತೃತ್ವದಲ್ಲಿ ಕಳುಹಿಸಿದ ಸೇನೆಯು ಈಗಿನ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲೂಕಿನಲ್ಲಿರುವ ಚಂದಾವುರಕ್ಕೆ ಮುತ್ತಿಗೆ ಹಾಕಿತು. ಆಗ ಚಂದಾವುರವನ್ನು ಆಳುಪರ ಸಾಮಂತನಾದ ಬಸವದೇವನು ಆಳುತ್ತಿದ್ದನು. ತನ್ನ ಸಾಮಂತನಿಗೆ ನೆರವಾಗಿ ಆಗಿನ ಆಳುಪ ಅರಸನಾದ ಸೋಯಿದೇವನು ಚಂದಾವುರದತ್ತ ಧಾವಿಸಿದನು. ಇದರ ಪರಿಣಾಮವಾಗಿ ನಡೆದ ಕಾಳಗದಲ್ಲಿ ಸಂಕಿಯ ಸಾಹಣಿ, ಸಂಗಿಯನಾಯಕನು ತುಳುವರ ಬಲವನ್ನು ಕೆಡಿಸಿ ಕೊನೆಗೆ ತಾನೇ ವೀರಸ್ವರ್ಗಸ್ಥನಾದನು.[24] ಆದರೆ ಈ ಸೋಲಿನ ಪರಿಣಾಮವಾಗಿ ಆಳುಪರಿಗೆ ರಾಜ್ಯನಷ್ಟವಾಗಲೀ ರಾಜಕೀಯ ರಂಗದಲ್ಲಿ ಅವರ ಮಾನ್ಯತೆಗೆ ಭಂಗವಾಗಲೀ ಉಂಟಾಗಲಿಲ್ಲವೆಂಬುದನ್ನು ಶಾಸನಗಳು ಸ್ಪಷ್ಟಪಡಿಸುತ್ತವೆ.

ಆದರೆ 1336ರಲ್ಲಿ ವೀರ ಬಲ್ಲಾಳನು ತುಳುನಾಡಿನ ಮೇಲೆ ಸಂಪೂರ್ಣವಾಗಿ ತನ್ನ ಅಧಿಕಾರ ಸ್ಥಾಪಿಸಿದನು. ತನ್ನ ಮೇಲೆದ್ದು ಬಂದ ಹೊಯ್ಸಳ ಸೇನೆಯನ್ನು ಹಿಮ್ಮೆಟ್ಟಿಸುವುದು ಕಷ್ಟಸಾಧ್ಯವೆಂದು ಮನಗಂಡ ಆಳುಪ ಅರಸ ಸೋಯಿದೇವನು ವೀರಬಲ್ಲಾಳನನ್ನು ಸಮಾಧಾನದಿಂದಲೇ ಬರಮಾಡಿಕೊಂಡು ತನ್ನ ಮನೆತನದ ರಾಜಕುಮಾರಿ ಚಿಕ್ಕಾಯಿತಾಯಿಯನ್ನು ಅವನಿಗೆ ಮದುವೆ ಮಾಡಿ ಕೊಟ್ಟನು. ಇವಳು ಬಹುಶಃ ಸೋಯಿದೇವನ ತಂಗಿಯಿದ್ದಿರಬೇಕು. ಚಿಕ್ಕಾಯಿತಾಯಿಗೆ ಮೊದಲು ಮದುವೆಯಾಗಿದ್ದರೂ ಅಳಿಯ ಸಂತಾನದ[25] ಕ್ರಮದಂತೆ ಮತ್ತೊಮ್ಮೆ ಬಲ್ಲಾಳನನ್ನು ಮದುವೆಯಾಗಿರಬೇಕೆಂದೂ ವಿದ್ವಾಂಸರ ಅಭಿಪ್ರಾಯವಿದೆ.[26] ಅಳಿಯ ಸಂತಾನ ಕ್ರಮ ಆಗ ತುಳುನಾಡಿನಲ್ಲಿ ಹೆಚ್ಚು ಪ್ರಚಾರದಲ್ಲಿರಲಿಲ್ಲವೆಂಬ ವಾದವಿದ್ದರೂ[27] ಆ ಕ್ರಮ ಆಚರಣೆಯಲ್ಲಿತ್ತೆಂಬುದಕ್ಕೆ ಸಾಕ್ಷ್ಯಗಳಿವೆ. ಹಾಗಾಗಿಯೇ ಚಿಕ್ಕಾಯಿ ತಾಯಿ ಬಲ್ಲಾಳನನ್ನು ಮದುವೆಯಾದರೂ ತವರು ಮನೆಯಲ್ಲೇ ಉಳಿದಳು.

ಸೋಯಿದೇವನ ಸ್ನೇಹಪೂರ್ವಕವಾದ ನಡತೆಯಿಂದ ವೀರಬಲ್ಲಾಳನು ಸಮಾಧಾನಗೊಂಡರೂ, ತನ್ನ ಸಾಮ್ರಾಜ್ಯವನ್ನು ವಿಸ್ತರಿಸಬೇಕೆಂಬ ಆಸೆ ಅವನಿಗಿದ್ದ ಕಾರಣ, ತುಳುನಾಡಿನ ಮೇಲಿನ ಪ್ರಭುತ್ವವನ್ನು ಪರಿತ್ಯಜಿಸಲು ಆತನಿಗೆ ಮನ ಬರಲಿಲ್ಲ. ಆಳುಪರಿಗೂ ನಷ್ಟವಾಗದಂತಹ, ತನ್ನ ಪ್ರಯತ್ನವೂ ವ್ಯರ್ಥವಾಗದಂತಹ ಒಂದು ಯೋಜನೆಯನ್ನು ಅವನು ನೆರವೇರಿಸಿದನು. ಇದರ ಪರಿಣಾಮವೆಂದರೆ, ತುಳುನಾಡಿನ ಮಟ್ಟಿಗೆ ಆಳುಪರು ಪ್ರಭುಗಳಾಗಿ ಮುಂದುವರಿದರು ; ಅದೇ ಸಮಯದಲ್ಲಿ ಹೊಯ್ಸಳರೂ ತುಳುನಾಡಿನ ಅಧಿಪತಿಗಳಾದರು. ಕ್ರಿ. ಶ. 1333ರಿಂದ 1348ರವರೆಗೆ ತುಳುನಾಡಿನುದ್ದಕ್ಕೂ ಅದರಲ್ಲೂ ಕೆಲವೊಮ್ಮೆ ಒಂದೇ ಗ್ರಾಮದಲ್ಲಿ ಹೊಯ್ಸಳರ ಮತ್ತು ಆಳುಪರ ಶಾಸನಗಳು ದೊರೆಯುತ್ತಿದ್ದು ಒಂದು ಮನೆತನದ ಶಾಸನಗಳಲ್ಲಿ ಮತ್ತೊಂದು ಮನೆತನದ ಪ್ರಸ್ತಾಪವೇ ಕಂಡುಬರುವುದಿಲ್ಲ. ಇನ್ನೊಂದು ವಿಶೇಷವೆಂದರೆ ಆಳುಪರಿಗೂ ಹೊಯ್ಸಳರಿಗೂ ಬಾರಹಕನ್ಯಾಪುರ (ಬಾರಕೂರು)ವೇ ರಾಜಧಾನಿಯಾಗಿತ್ತು.[28]

1333ರಿಂದ 1342ರವರೆಗಿನ ಹೊಯ್ಸಳರ ತುಳುನಾಡಿನ ಶಾಸನಗಳು ಮೂರನೆಯ ಬಲ್ಲಾಳನನ್ನು ಸಮಸ್ತಭುವನ ವಿಖ್ಯಾತ, ಸೋಮಕುಲತಿಲಕ, ಪಾಂಡ್ಯಮಹಾರಾಜಾಧಿರಾಜ, ಪರಮಭಟ್ಟಾರಕ, ಪಾಂಡ್ಯಚಕ್ರವರ್ತಿ, ಅರಿರಾಯ ಬಸವಶಂಕರ, ರಾಯಗಜಾಂಕುಶ ಎಂಬ ಆಳುಪ ಬಿರುದುಗಳಿಂದ ಉಲ್ಲೇಖಿಸಿವೆ. ಸೋಯಿದೇವನ ಮರಣಾನಂತರ ಆತನ ಅಳಿಯನಾದ ಬಂಕಿದೇವನು ಪಟ್ಟಕ್ಕೆ ಬರಲು ಯತ್ನಿಸಿದನು. ಆದರೆ ಆಗ ಚಿಕ್ಕಾಯಿತಾಯಿಗೆ ಕುಲಶೇಖರ ನೆಂಬ ಮಗನಿದ್ದನು. ವೀರಬಲ್ಲಾಳನು 1338ರಲ್ಲಿ ತುಳುನಾಡಿಗೆ ಬಂದು[29] ಬಂಕಿದೇವನನ್ನು ಬದಿಗೊತ್ತಿ ಮಗನಾದ ಕುಲಶೇಖರನನ್ನು ತುಳುನಾಡಿನ ಅರಸನನ್ನಾಗಿ ಮಾಡಿದನು.[30] ಅಲ್ಲದೆ ತನ್ನ ದಂಡನಾಯಕನಾದ ಅಂಕೆಯನಾಯಕನನ್ನು ಸಹಾಯಕ್ಕಾಗಿ ಅಲ್ಲಿ ನಿಲ್ಲಿಸಿದನು. ಕುಲ ಶೇಖರನು 1346ವರೆಗೆ ತುಳುನಾಡನ್ನಾಳುತ್ತಿದ್ದನೆಂಬುದಾಗಿ ಶಾಸನವೊಂದು ತಿಳಿಸಿದೆ.[31]

ಈ ಸಮಯದಲ್ಲಿ ಕಾರ್ಕಳದ ಸುತ್ತಮುತ್ತ ಪ್ರದೇಶವನ್ನು ಬಲ್ಲಾಳನ ಸಾಮಂತನೂ ಸಾಂತರ ಮನೆತನದವನೂ ಆದ ಮಹಾಮಂಡಲೇಶ್ವರ ಲೋಕನಾಥದೇವರಸನು ಆಳುತ್ತಿದ್ದನು.

1342ರಲ್ಲಿ ವೀರಬಲ್ಲಾಳನು ಮಧುರೆಯ ಸುಲ್ತಾನನ ಕೈಗೆ ಸಿಕ್ಕಿ ಘೋರಮರಣ ಕ್ಕೀಡಾದಾಗಿನಿಂದ ಈಚೆಗೆ 1348ರವರೆಗಿನ ಶಾಸನಗಳಲ್ಲಿ ಚಿಕ್ಕಾಯಿ(ಕಿಕ್ಕಾಯಿ)ತಾಯಿಯೊಬ್ಬಳೇ ತನ್ನ ಪತಿಯ ಬಿರುದುಗಳೆಲ್ಲವನ್ನೂ ಹೊತ್ತು ತುಳುನಾಡಿನ ಹೊಯ್ಸಳ ಸಿಂಹಾಸನದ ಒಡೆಯ ಳಾಗಿ ಕಾಣಿಸಿಕೊಳ್ಳುತ್ತಾಳೆ. ಮಗನಾದ ಕುಲಶೇಖರನ ಕುರಿತು ಹೆಚ್ಚು ವಿವರ ಲಭ್ಯವಾಗಿಲ್ಲ. ಆಡಳಿತ ಕ್ಷೇತ್ರದಲ್ಲಿ ಚಿಕ್ಕಾಯಿತಾಯಿಗೆ ಸಹಾಯಕಾಗಿ ಮಹಾಪ್ರಧಾನ ಬೈಚಪ್ಪದಂಡನಾಯಕ ಮತ್ತು ಪ್ರಧಾನಿ ಅಜ್ಜಣ್ಣಸಾಹಣಿ ನೆರವಾಗಿ ನಿಂತಿದ್ದರು.

ಈ ಕಾಲದಲ್ಲಿ ಲಭ್ಯವಾದ ಶಾಸನಗಳನ್ನನುಸರಿಸಿ ಈ ಕೆಳಗಿನ ನಿರ್ಣಯಗಳನ್ನು ಮಾಡ ಬಹುದು.

1. ಉಡುಪಿ ಸುತ್ತಮುತ್ತಲಿನ ಪ್ರದೇಶವು ಹೊಯ್ಸಳರ ಮತ್ತು ಆಳುಪರ ಪ್ರಭಾವಕ್ಕೆ ಒಳಗಾಗಿತ್ತು. 2. ತುಳುನಾಡಿನ ದಕ್ಷಿಣ ಪ್ರದೇಶವು ಆಳುಪರ ಆಳ್ವಿಕೆಯಲ್ಲಿತ್ತು. (ಮಂಗಳೂರಿನ ಸುತ್ತಮುತ್ತಲಿನ ಪ್ರದೇಶದಲ್ಲಿ ವಿರೋಧಿ ಆಳುಪರ ವಂಶವೊಂದು ಆಳುತ್ತಿತ್ತೆಂಬ ವಿದ್ವಾಂಸರ ಅಭಿಪ್ರಾಯಕ್ಕೆ[32] ಇನ್ನಷ್ಟು ಆಧಾರಗಳು ಬೇಕು.) 3. ತುಳುನಾಡಿನ ಉತ್ತರಭಾಗದಲ್ಲಿ ಹೊಯ್ಸಳರ ಅಧಿಕಾರವೇ ಪ್ರಬಲವಾಗಿತ್ತು.

1336ರಲ್ಲಿ ಸ್ಥಾಪಿತವಾದ ವಿಜಯನಗರ ಸಾಮ್ರಾಜ್ಯಕ್ಕೆ ತುಳುನಾಡು 1345ರಲ್ಲಿ ಸೇರಿ ಕೊಂಡಿತು.[33] ಚಿಕ್ಕಾಯಿತಾಯಿಯು ವಿಜಯನಗರ ಮತ್ತು ಹೊಯ್ಸಳ ಸಾಮ್ರಾಜ್ಯವನ್ನು ಒಂದುಗೂಡಿಸಲು ಕಾರಣಳಾದಳು.[34] ಆದರೆ 1345ರಿಂದ1348ರವರೆಗೆ ಆಳುಪರ, ಹೊಯ್ಸಳರ ಮತ್ತು ವಿಜಯನಗರದ ಅರಸರು ಪರಸ್ಪರ ಸಂಬಂಧವಿಲ್ಲದೆ ತುಳುನಾಡನ್ನು ಆಳು ತ್ತಿದ್ದರು. 1348ರಲ್ಲಿ ಚಿಕ್ಕಾಯಿತಾಯಿಯು ತೀರಿಕೊಂಡಾಗ ತುಳುನಾಡಿನಲ್ಲಿ ಹೊಯ್ಸಳರ ಅಧಿಕಾರವೂ ಕೊನೆಗೊಂಡಿತು.

ಹೊಯ್ಸಳರು ತುಳುನಾಡಿನ ಆಡಳಿತ ಪದ್ಧತಿಯಲ್ಲಿ ಗಮನಾರ್ಹವಾದ ಬದಲಾವಣೆಗಳೇ ನನ್ನೂ ಜಾರಿಗೆ ತರಲಿಲ್ಲ. ಹೊಯ್ಸಳರ ಆಡಳಿತವನ್ನು ತುಳುವರು ಪ್ರೀತಿಯಿಂದ ಸ್ವಾಗತಿಸಿದಂತೆ ಕಂಡುಬರುವುದಿಲ್ಲ ಶಾಸನವೊಂದು ಆಡಳಿತವನ್ನು ವಿರೋಧಿಸುವವರನ್ನು ಉಗ್ರವಾಗಿ ಶಿಕ್ಷಿಸ ಲಾಗುವುದೆಂದು ಎಚ್ಚರಿಸಿದೆ.[35] ಬಾರಕೂರು ಹೊಯ್ಸಳರ ರಾಜಧಾನಿಯಾಗಿತ್ತು. ಅಲ್ಲಿ ಮೂರನೆಯ ವೀರಬಲ್ಲಾಳ ತನ್ನ ಸೇನೆಯ ತುಕಡಿಯೊಂದನ್ನು ಇರಿಸಿದ್ದನು. ವಿವಿಧ ರೀತಿಯ ಸ್ಥಳೀಯ ಸಂಘಗಳು ಈ ಕಾಲದಲ್ಲಿ ಆಡಳಿತದಲ್ಲಿ ಪ್ರಮುಖ ಪಾತ್ರ ವಹಿಸಿದ್ದವು. ನಗರ, ನಖರ,

ಹಂಜಮಾನ, ಸೆಟ್ಟಿಕಾರ ಮತ್ತು ಕೋಲಬಳಿಯ ಸಂಘಗಳು ಹೊಯ್ಸಳರ ಆಶ್ರಯದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಪ್ರಧಾನವಾಗಿದ್ದವು. ಮೂರನೆಯ ವೀರಬಲ್ಲಾಳನ ಶಾಸನವೊಂದು ಗ್ರಾಮ ಸಂಸ್ಥೆಗಳಿಗೆ ಸಂಬಂಧಿಸಿದಂತೆ '14 ನೀರುನಾರ' ಎಂದಿದೆ.[36] ಮೊದಲ ಬಾರಿಗೆ ಹೊಯ್ಸಳರ ಶಾಸನಗಳಲ್ಲಿ ವಿವಿಧ ವಾಣಿಜ್ಯಕೇಂದ್ರಗಳ ಸೆಟ್ಟಿಕಾರ ಸಂಘಗಳ ಸಂಖ್ಯಾಬಲವು ತಿಳಿದು ಬರುತ್ತದೆ. ಉದಾ: ಮೂಡಬಿದರೆಯ ಎಂಟುಮಂದಿ ಸೆಟ್ಟಿಕಾರರು, ಬಾರಕೂರಿನ ಮೂರು ಕೇರಿಯ ಮೂವರು ಸೆಟ್ಟಿಕಾರರು ಇತ್ಯಾದಿ.

ಹೊಯ್ಸಳರ ಕಾಲದಲ್ಲಿ ಹೊಸದಾಗಿ ಕಂಡುಬರುವ ಕೆಲವು ಸಂಘಗಳು ಹೀಗಿವೆ.

1. **ನಾಡು** - ಸುಗಮ ಆಡಳಿತದ ದೃಷ್ಟಿಯಿಂದ ತುಳುನಾಡನ್ನು ಹಲವು ನಾಡುಗಳನ್ನಾಗಿ ವಿಂಗಡಿಸಲಾಗಿತ್ತು. ಅಂತಹ ನಾಡುಗಳು ಜನಸಾಮಾನ್ಯರ ಪ್ರತಿನಿಧಿಗಳಿಂದ ಕೂಡಿದ ನಿರ್ವಾಹಕ ಸಂಘಗಳಾಗಿದ್ದವು. ಉದಾ : ಕಾರ್ಕಳದನಾಡು ;[37] ಬಿದುರೆಯ ನಾಡು.[38]

2. **ಉಭಯನಾನಾದೇಶಿಗಳು** – ನಾನಾದೇಶಿಗಳೆಂಬ ವರ್ತಕರ ಸಂಘ ದಕ್ಷಿಣ ಭಾರತದ ಇತಿಹಾಸದಲ್ಲೇ ಪ್ರಸಿದ್ಧವಾದದ್ದು.[39] ಈ ಸಂಘದವರು ದೂರದೂರದ ವಿದೇಶಗಳಲ್ಲಿ ವ್ಯಾಪಾರ ಮಾಡುತ್ತಿದ್ದರು. ಉಭಯ ಎಂಬ ಶಬ್ದವು ಈ ಸಂಘದ ಸದಸ್ಯರಾಗಿದ್ದ ಸ್ವದೇಶಿ ಮತ್ತು ಪರದೇಶಿ ವ್ಯಾಪಾರಿಗಳ ಎರಡು ಶಾಖೆಗಳನ್ನು ಸೂಚಿಸುತ್ತಿದ್ದಿರಬೇಕು.

3. **ಸಾಲಿಕೆಯ ಬಲ್ಲಾಳುಗಳು** – ಸಾಲಿಕೆ ಎಂದರೆ ಅಂಗಡಿ ಎಂದರ್ಥ. ಬಲ್ಲಾಳು ಎಂದರೆ ಬಲ್ಲವನು, ನಿಪುಣ ಎಂದರ್ಥ. ಸಾಲಿಕೆಯ ಬಲ್ಲಾಳುಗಳು ಕೂಡ ವರ್ತಕ ಸಂಘದವರೇ ಆಗಿದ್ದಿರಬೇಕು. ಶಾಸನವೊಂದು ಸಾಲಿಕೆಯ ಬಲ್ಲಾಳುಗಳ ಕುರಿತ ಒಪ್ಪಂದವೊಂದನ್ನು ಉಲ್ಲೇಖಿಸಿದೆ.[40]

4. **ಹೊರಹಿನವರು** – ತುಳುನಾಡಿನ ಹೊರಗಿನಿಂದ ಸಾಮಾನುಗಳನ್ನು ತಂದು ಅಂಗಡಿಗಳಲ್ಲಿ ವ್ಯಾಪಾರ ಮಾಡುತ್ತಿದ್ದ ಹೊರನಾಡಿನ ವರ್ತಕ ಸಂಘದವರು. 'ಐವರು ಹೊರಹಿನವರು' ಮೊದಲಾಗಿ ಶಾಸನಗಳಲ್ಲಿ ಇವರನ್ನು ಸಂಖ್ಯೆಯಿಂದಲೂ ಗುರುತಿಸಲಾಗಿದೆ.

5. **ಉಳಮೆಗಳು ಅಥವಾ ಎಳಮೆಗೊಳಗಾದವರು** – ಇದೂ ಒಂದು ರೀತಿಯ ಸಂಘದ ಹೆಸರು. ಮೂರನೆಯ ವೀರಬಲ್ಲಾಳನ 1436ರ ಬಾರಕೂರು ಶಾಸನದಲ್ಲಿ 150 ಎಳಮೆಗಳು ಮತ್ತು 1342ರ ಮೂಡಬಿದರೆ ಶಾಸನದಲ್ಲಿ ನಾಲ್ವರು ಎಳಮೆಗಳು ಎಂಬ ಎರಡು ಸಂಘಗಳ ಉಲ್ಲೇಖವಿದೆ.[41]

ತುಳುನಾಡಿನ ಜನರ ಸಾಮಾಜಿಕ, ಆರ್ಥಿಕ ಹಾಗೂ ಧಾರ್ಮಿಕ ಜೀವನದಲ್ಲೂ ಹೊಯ್ಸಳರು ಪ್ರಭಾವ ಬೀರದೆ ಇಲ್ಲ. ಈ ಕಾಲದಲ್ಲಿ ಜೈನಧರ್ಮವು ವಿಶೇಷ ಪ್ರಾಮುಖ್ಯ ಪಡೆಯತೊಡಗಿತು. ಚಿಕ್ಕಾಯಿತಾಯಿಯು ಶೈವ ಧರ್ಮದವಳಾಗಿದ್ದು ಹಲವು ದೇವಸ್ಥಾನಗಳಿಗೆ ದಾನನೀಡಿದ್ದಳು. ಹೊಯ್ಸಳ ಸಾಮಂತನಾದ ಕಾರಕಳದ ಲೋಕನಾಥದೇವರಸನು ಜೈನಧರ್ಮೀಯನಾಗಿದ್ದನು. 1334ರ ಈತನ ಹಿರಿಯಂಗಡಿ ಶಾಸನ ಕಾರಕಳದ ಶಾಂತಿನಾಥ ಬಸದಿಗೆ ಲೋಕನಾಥದೇವರಸ ಹಾಗೂ ಸಹೋದರಿಯರಾದ ಬೊಮ್ಮಲದೇವಿ ಮತ್ತು ಸೋಮಲದೇವಿಯರು ಭೂಮಿದಾನ ನೀಡಿರುವುದನ್ನು ಉಲ್ಲೇಖಿಸಿದೆ.[42] ಕಾರ್ಕಳ, ವೇಣೂರು, ಮೂಡಬಿದರೆ ಮತ್ತು ಕೆರವಸೆ ನಗರಗಳು ಜೈನಧರ್ಮದ ಕೇಂದ್ರಗಳಾಗಿ ಮೆರೆಯತೊಡಗಿದವು.

ವಾಸ್ತುಶಿಲ್ಪ ದೃಷ್ಟಿಯಿಂದಲೂ ಹೊಯ್ಸಳರು ತುಳುನಾಡಮೇಲೆ ಪ್ರಭಾವ ಬೀರಿದರು.[43] ತುಳುನಾಡಿನ ದಕ್ಷಿಣ ಭಾಗಕ್ಕಿಂತಲೂ ಹೆಚ್ಚಿಗೆ ಉತ್ತರಭಾಗದಲ್ಲೇ ಹೊಯ್ಸಳ ವಾಸ್ತುಶಿಲ್ಪ ಲಕ್ಷಣಗಳನ್ನು ಕಾಣಬಹುದು. ತುಳುನಾಡಿನ ಈ ಕೆಳಗಿನ ದೇವಾಲಯಗಳಲ್ಲಿ ಹೊಯ್ಸಳ ವಾಸ್ತುಶಿಲ್ಪ ಲಕ್ಷಣಗಳನ್ನು ಗಮನಿಸಬಹುದು :

1. ಬೈಂದೂರಿನ ಸೋಮೇಶ್ವರ ದೇವಾಲಯ; 2. ಶಂಕರನಾರಾಯಣದ ಶಂಕರನಾರಾಯಣ ದೇವಾಲಯ; 3. ಕಾರ್ಕಳದ ಅನಂತಪದ್ಮನಾಭ ದೇವಾಲಯ:

ಹೊಯ್ಸಳ ಶಿಲ್ಪ ದೃಷ್ಟಿಯಿಂದ ತುಳುನಾಡಿನ ಈ ಕೆಳಗಿನ ಶಿಲ್ಪಕೃತಿಗಳು ಮುಖ್ಯವಾಗಿವೆ.

ಬಾರಕೂರಿನ ಕೋಟೆಕೇರಿಯ ಮತ್ತು ಮೂಡಕೇರಿಯ ವೇಣುಗೋಪಾಲಕೃಷ್ಣ ವಿಗ್ರಹಗಳು; ಬಾರಕೂರಿನ ಮೂಡುಕೇರಿಯ ಸರಸ್ವತಿ, ಗಣೇಶ; ಬಾರಕೂರಿನ ಜೈನಬ್ರಹ್ಮ: ಕೋಟೇಶ್ವರ ದೇವಾಲಯದ ವೇಣುಗೋಪಾಲಕೃಷ್ಣ: ಕೋಟ ಬಳಿಯ ಕಾರ್ಕಡದ ವಿಷ್ಣುಮೂರ್ತಿ ದೇವಾಲಯದ ಜನಾರ್ದನ; ಕೋಟ ಬಳಿಯ ಗಿಳಿಯಾರಿನ ವಿಷ್ಣುಮೂರ್ತಿ ದೇವಾಲಯದ ವಿಷ್ಣು; ಕೋಟದ ವಿಷ್ಣುಮೂರ್ತಿ ದೇವಾಲಯದ ನಾರಾಯಣ; ಮಂಗಳೂರಿನ ಅತ್ತಾವರದ ವೇಣುಗೋಪಾಲಕೃಷ್ಣ ಮತ್ತು ಕಾರ್ಕಳದ ವೇಣುಗೋಪಾಲಕೃಷ್ಣ.

ಈ ಕೆಳಗಿನ ಜೈನಶಿಲ್ಪಗಳು ಹೊಯ್ಸಳ ಕಲೆಯನ್ನು ಪ್ರತಿಬಿಂಬಿಸುತ್ತವೆ.

ಕಾರ್ಕಳದ ಹಿರಿಯಂಗಡಿಯ ಬಸದಿಯ 24 ತೀರ್ಥಂಕರರು, ಮೂಡಬಿದರೆಯ ನೇಮಿನಾಥ ಬಸದಿಯ ಯಕ್ಷಿಣಿ ಮತ್ತು ವರಾಂಗದ ನೇಮಿನಾಥ ಬಸದಿಯ ಚಂದ್ರನಾಥ.

ಅಡಿ ಟಿಪ್ಪಣಿಗಳು

[1] ಡಾ. ಕೆ. ವಿ. ರಮೇಶ: ತುಳುನಾಡಿನ ಇತಿಹಾಸ. (ಗೋವಿಂದ ಪೈ ಸ್ಮಾರಕ ಸಂಶೋಧನ ಕೇಂದ್ರ, ಉಡುಪಿ, 1969) ಪು. 25.

[2] ಗಣಪತಿರಾವ್ ಐಗಳ್ : ದಕ್ಷಿಣಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ. (ಮಂಗಳೂರು, 1923) ಪು 263–64.

[3] ಅದೇ.

[4] ಎಂ. ಗೋವಿಂದಪೈ : ಅಂತರಂಗ (ಕನ್ನಡ ವಾರಪತ್ರಿಕೆ, ಉಡುಪಿ) 29–1–1937.

[5] *E.C.*, V. Bl. 199.

[6] *EC.*, XII. TP. 81.

[7] ಈ ಶಾಸನವನ್ನು ಬಿ. ಎಲ್. ರೈಸರು ತಪ್ಪಾಗಿ ಓದಿದ್ದರಿಂದ ಸಾಲೆತೊರೆ, ಕೊಯಿಲ್ಹೊ ಡೆರೆಟ್ ಮುಂತಾದವರು ಆಳುಪರೇ ಹೊಯ್ಸಳ ರಾಜ್ಯವನ್ನು ಆಕ್ರಮಿಸಿದರು ಎಂದಿದ್ದಾರೆ. ನೋಡಿ :

EC., XII. TP. 81; B. A. Saletore : *History of Tuluva*. p. 270 ; William Coelho ; *Hoysala Vamsa*, p. 80 ; Derrett: *The Hoysalas*, p. 46.

[8] ಈತನಿಗೆ ಪಾಂಡ್ಯ ಪಟ್ಟಿಯೊಡೆಯ, ಕುಮಾರಪಾಂಡ್ಯ, ಆರನೆಯ ಆಳುವರಸ ಎಂಬುದಾಗಿಯೂ ಹೆಸರಿದೆ. ಈತನ ಕಾಲ. ಸು. ಕ್ರಿ. ಶ. 1080–1110.

[9] *SII.*, IX, pt. I, No. 118.

[10] Dr. K. V. Ramesh: *A History of South Kanara* (Karnataka University, Dharwar, 1970) p. 110.

[11] *EC.*, V, Bl. 199.

[12] *EC.*, V, Hn. 69.

[13] Ibid., Bl. 58, 71.

[14] Ibid., Hn. 69.

[15] ಡಾ॥ ರಮೇಶ ಅವರ ಗ್ರಂಥ ಪು. 56.

[16] *EC.*, V, AK. 172, 138 ; II, 137 A ; XII, TP. 66.

[17] ಜಿ. ಐಗಳ್ ಅವರ ಗ್ರಂಥ. ಪು. 263-64

[18] Dr. Suryanath U. Kamath. The Hoysalas and S. K., District, carticle, in *The Hoysala Dynasty* ed: Dr. B. Sheik Al University of Mysore, 1972.) p. 94. i

[19] Francis Buchanan : *A Journey from Madras Through the Countries of Mysore Canara and Malbar* Vol, III. (London, 1807) p. 68.

[20] *EC.*, V, Cn. 220.

[21] Ibid., IV, Ng. 30.

[22] *ARSIE.*, 43 of 1901 ; *SII, VII.* No. 213

[23] *Karnataka Inscriptions, II.* 31 of 1940–1941.

[24] *EC.*, VII, Hl.117.

[25] ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಆಸ್ತಿಯ ಒಡೆತನದಲ್ಲಿ ಸ್ತ್ರೀಗೆ ಪ್ರಾಧಾನ್ಯ ನೀಡುವ ಒಂದು ಸಾಮಾಜಿಕ ಏರ್ಪಾಡು 'ಅಳಿಯ ಸಂತಾನ ಕಟ್ಟು'. ವಿವರಗಳಿಗೆ ನೋಡಿ: P Gururaja Bhatt : *Studies in Tuluva History and Culture*(1975) p., 256-67

[26] Derrett *op. cit.*, p. 165–66.

[27] Dr. Ramesh: *op. cit.*, p. 139.

[28] ಡಾ. ರಮೇಶ ಅವರ ಗ್ರಂಥ ಪು. 62.

[29] *ARSIE.*, 574 of 1901 ; *SII.*, VII, No. 232.

[30] *EC.*, V, AK. 183.

[31] *KI.*, III, pt. I. 47 of 1940-41.

[32] Dr. S. U. Kamath : *op. cit.*, p. 96.

[33] *SII.*, VII, Nó. 179

[34] *EC.*, VI, Sg. 1.

[35] *SII*, VII, No. 213.

[36] *ARSIE.*, 492 of 1928–29.

[37] *SII.*, VII, No. 247

[38] *Ibid.*, 213.

[39] K. A. Nilakanta Sastry : *The Colas* (Madras, 1937) p. 597.

[40] *ARSIE.*, 336 of 1930–31

[41] Dr. Ramesh ; *op.cit.,* p. 257.

[42] *SII.*, VII, No. 247.

[43] Dr. P. Gururaja Bhatt : The Influence of Hoysala Style of Architecture on South Kanara. (article in *The Hoysala Dynasty.*) p. 226-35.

ಕೆ. ಸಿ. ಬಸವರಾಜ

ಭಾರತದ ಅಭಿವೃದ್ಧಿಯಲ್ಲಿ ಶಿಕ್ಷಣ

ಶಿಕ್ಷಣ ಒಂದು ರಾಷ್ಟ್ರದ ಆರ್ಥಿಕ ಜೀವನದಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಅದು ಕೇವಲ ಜನರನ್ನು ವಿದ್ಯಾವಂತರನ್ನಾಗಿ ಮಾಡುವುದಲ್ಲದೆ, ಸಾಮಾಜಿಕ,ಆರ್ಥಿಕ ಮತ್ತು ಸಾಂಸ್ಕೃತಿಕ ಕ್ರಾಂತಿಗೆ ನಾಂದಿಯಾಗುತ್ತದೆ. ಆದುದರಿಂದ ಅಭಿವೃದ್ಧಿಶೀಲ ರಾಷ್ಟ್ರಗಳು ತಮ್ಮ ಅರ್ಥವ್ಯವಸ್ಥೆಯಲ್ಲಿ ಶಿಕ್ಷಣಕ್ಕೆ ಒಂದು ಉತ್ತಮ ಸ್ಥಾನ ಕೊಟ್ಟು, ಅಭಿವೃದ್ಧಿ ಪಥದಲ್ಲಿ ಶಿಕ್ಷಣವನ್ನು ಮಹತ್ವಪೂರ್ಣವನ್ನಾಗಿಸಲು ಸಾಕಷ್ಟು ನೀತಿ ನಿಯಮಗಳನ್ನು ನಿರೂಪಿಸುತ್ತವೆ.

ಭಾರತ ಒಂದು ಪ್ರಗತಿಶೀಲ ರಾಷ್ಟ್ರ. ಪ್ರಗತಿಯಲ್ಲಿ ಶಿಕ್ಷಣದ ಮಹತ್ವವನ್ನು ಕಂಡುಕೊಂಡು ಬಹಳ ಹಿಂದಿನಿಂದಲೂ ಶಿಕ್ಷಣವನ್ನು ಪ್ರೋತ್ಸಾಹಿಸುತ್ತ ಬಂದಿದ್ದೇವೆ. ಹಾಗೆ ಅದಕ್ಕೆ ಪೂರಕವಾಗಿ ನೀತಿ ನಿಯಮಗಳ್ನು ನಿರೂಪಿಸುತ್ತ ಬಂದಿದ್ದೇವೆ. ಈ ನೀತಿ ನಿಯಮಗಳ ಸಾಕುಬೇಕುಗಳ ಬಗ್ಗೆ ಇಲ್ಲಿ ಒಂದು ವಿವೇಚನೆಯಿದೆ.

ಸ್ವಾತಂತ್ರ್ಯಾನಂತರ ಆರ್ಥಿಕ ದಾರಿದ್ರ್ಯವನ್ನು ಹೊಡೆದೋಡಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅನೇಕ ಕ್ರಮಗಳನ್ನು ಕೈಗೊಂಡಿವೆ. ಅವುಗಳಲ್ಲಿ ಶಿಕ್ಷಣಕ್ರಮ ಒಂದು ಮಹತ್ತರ ಸ್ಥಾನ ಆಕ್ರಮಿಸಿದೆ. ಏಕೆಂದರೆ ತುಂಬಿ ತುಳುಕುತ್ತಿದ್ದ ಅನಕ್ಷರತೆಯನ್ನು ನಿವಾರಿಸದೆ ಪ್ರಗತಿ ಸಾಧ್ಯವಿಲ್ಲ ಎಂಬುದನ್ನು ಕಂಡುಕೊಂಡಿದ್ದರಿಂದ ಮತ್ತು ಒಂದು ರಾಷ್ಟ್ರದ ಪ್ರಗತಿಯಲ್ಲಿ ವಿದ್ಯಾವಂತ ಜನಾಂಗ ಮತ್ತು ಜ್ಞಾನದ ನಾನಾ ಪ್ರಕಾರಗಳು ಮಹತ್ತರ ಪ್ರಗತಿಪರ ಬದಲಾವಣೆ ತರಬಲ್ಲದು ಎಂಬುದರಿಂದ ನಮ್ಮ ಅಭಿವೃದ್ಧಿ ಯೋಜನೆಗಳಲ್ಲಿ ಶಿಕ್ಷಣಕ್ಕೆ ಒಂದು ಗೌರವಾನ್ವಿತ ಸ್ಥಾನ. ಆದರೂ ನಾವು ನಮ್ಮ ಯೋಜನೆಗಳಲ್ಲಿ ಶಿಕ್ಷಣಕ್ಕೆ ಮೀಸಲಿಟ್ಟ ಹಣ ಹಾಗೂ ಆದ್ಯತೆ, ಸಮಸ್ಯೆಯ ತೀವ್ರತೆಯ ದೃಷ್ಟಿಯಿಂದ ನೋಡಿದಾಗ ಏನೂ ಸಾಲದು. ಉದಾಹರಣೆಗೆ: ಮೊದಲನೆಯ ಯೋಜನೆಯ ಅವಧಿಯಲ್ಲಿ ಒಟ್ಟು ಅಭಿವೃದ್ಧಿ ಬಂಡವಾಳದ ಹೂಡುವಿಕೆಯಲ್ಲಿ ಶೇಕಡ 7.9ರಷ್ಟನ್ನು, ಎರಡನೆಯ ಯೋಜನೆಯಲ್ಲಿ ಒಟ್ಟು ಬಂಡವಾಳದ ಶೇಕಡ 5.8 ರಷ್ಟನ್ನು ಮೂರನೆ ಯೋಜನೆಯಲ್ಲಿ ಶೇಕಡ 5.3 ರಷ್ಟನ್ನು ಹಾಗೂ ಐದನೆ ಯೋಜನೆಯ ಅವಧಿಯಲ್ಲಿ ಶೇಕಡ 3.3ರಷ್ಟನ್ನು ಮಾತ್ರ ತೊಡಗಿಸಲಾಯಿತು.

ಸಮಸ್ಯೆಯ ಪ್ರಮಾಣದ ದೃಷ್ಟಿಯಿಂದ ನಾವು ಶಿಕ್ಷಣ ವ್ಯವಸ್ಥೆಯಲ್ಲಿ ಬಂಡವಾಳ ಹೂಡುವಿಕೆಯನ್ನು ವಿಶ್ಲೇಷಿಸಿದರೆ ನಮಗೆ ತೀರ ನಿರಾಸೆಯಾಗದಿರದು. ಏಕೆಂದರೆ, ಭಾರತ ಹಳ್ಳಿಗಳ ದೇಶ; ಒಟ್ಟು ಜನಸಂಖ್ಯೆಯಲ್ಲಿ ಶೇಕಡ 80ರಷ್ಟು ಜನರು ಹಳ್ಳಿಯಲ್ಲಿ ವಾಸಿಸುತ್ತಾರೆ. ಇವರಲ್ಲಿ ಅನಕ್ಷರತೆ, ದಟ್ಟದಾರಿದ್ರ್ಯ ತುಂಬಿ ತುಳುಕುತ್ತಿದೆ. ಈ ಸಮಸ್ಯೆಗಳ ತೀವ್ರತೆಯನ್ನು ಕಡಿಮೆ ಮಾಡಲು, ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯನ್ನು ಉಂಟುಮಾಡಲು ಶಿಕ್ಷಣ ವ್ಯವಸ್ಥೆಗೆ ಯೋಜನಾ ವೆಚ್ಚಗಳಲ್ಲಿ ಸಾಕಷ್ಟು ಆದ್ಯತೆ ಅನಿವಾರ್ಯವಾಗಿ ಕೊಡಬೇಕಾಗುತ್ತದೆ.

ಹೀಗಾದಾಗ ಮಾತ್ರ ಶಿಕ್ಷಣ ಸಾಮಾಜಿಕ ಮತ್ತು ಆರ್ಥಿಕ ಆಂದೋಲನದಲ್ಲಿ ತನ್ನ ಪಾತ್ರದ ಸಾರ್ಥಕ್ಯ ಗಳಿಸಿಕೊಂಡಂತಾಗುತ್ತದೆ.

ಸಾಮಾಜಿಕ ಮತ್ತು ಆರ್ಥಿಕ ಆಂದೋಲನಕ್ಕೆ ಶಿಕ್ಷಣವನ್ನು ಒಂದು ಸಾಧನವಾಗಿ ಬಳಸಿಕೊಳ್ಳಬೇಕಾದರೆ ಈ ಕೆಳಗಿನ ಕೆಲವು ಅಂಶಗಳನ್ನು, ನಮ್ಮ ಸರ್ಕಾರಗಳು ಶಿಕ್ಷಣ ಸಂಬಂಧದ ನೀತಿ ಸಂಹಿತೆಗಳನ್ನು ರಚಿಸುವಾಗ ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ.

ಪ್ರಾಥಮಿಕ ಶಿಕ್ಷಣ ವ್ಯವಸ್ಥೆಯನ್ನು ಪೂರ್ಣ ಪುನರ್ ರಚಿಸಬೇಕು. ಈ ಶಿಕ್ಷಣ ಕ್ರಮ ಮೂಲತಃ ಒಂದು ಸಮಾಜದ ಆರ್ಥಿಕ, ಸಾಮಾಜಿಕ ಮತ್ತು ನೈಸರ್ಗಿಕ ಅಂಶಗಳ ಮೇಲೆ ರಚಿತವಾಗಬೇಕು. ಹೀಗೆ ರಚಿತವಾದ ಶಿಕ್ಷಣಕ್ರಮ ಮಕ್ಕಳ ಮನಸ್ಸು ತಮ್ಮ ಹತ್ತಿರದ, ಅಕ್ಕಪಕ್ಕದ ಸಮಸ್ಯೆಗಳಿಗೆ ಸ್ಪಂದಿಸುವಂತೆ ಮಾಡುವಲ್ಲಿ ಸಹಾಯಕವಾಗುವುದಲ್ಲದೆ, ಮಕ್ಕಳ ಮನಸ್ಸನ್ನು ಸ್ಪಂದಿಸಲು ಯಶಸ್ವಿಯಾದ ಶಿಕ್ಷಣ ಕ್ರಮ, ಅವರಲ್ಲಿ ಅದು ಹೇಗೆ? ಅದು ಏಕೆ? ಎಂಬ ಪ್ರಶ್ನೆಗಳನ್ನು ಎಬ್ಬಿಸಿ ಅದಕ್ಕೆ ಉತ್ತರ ಹುಡುಕುವಂತೆ ಅವರನ್ನು ಪ್ರಚೋದಿಸಬಹುದು. ಈ ಪ್ರಚೋದನೆ ಮಕ್ಕಳ ಮನೋವಿಕಾಸಕ್ಕೆ ಅವಕಾಶ ಮಾಡಿಕೊಟ್ಟು ಒಂದು ಶಿಕ್ಷಣ ವ್ಯವಸ್ಥೆಗೆ ಸಾರ್ಥಕತೆಯನ್ನು ಗಳಿಸಿಕೊಡುತ್ತದೆ. ಹೀಗೆ ಮಾಡುವಲ್ಲಿ ಅಧ್ಯಾಪಕರು ಮತ್ತು ಶಿಕ್ಷಣ ತಜ್ಞರು ತಮ್ಮ ಜವಾಬ್ದಾರಿಯನ್ನು ನೆನಪಿಟ್ಟುಕೊಳ್ಳಬೇಕು. ಇದರಲ್ಲಿ ಸರ್ಕಾರಗಳು ಹಣದ ಕೊರತೆಯನ್ನೇ ಮುಂದುಮಾಡಿ, ತಮ್ಮ ಜವಾಬ್ದಾರಿಯಿಂದ ನುಣುಚಿಕೊಳ್ಳಬಾರದು. ಸಾಧ್ಯವಾದಷ್ಟು ಹಳ್ಳಿಗಳಲ್ಲಿ ಶಾಲೆಗಳನ್ನು ತೆರೆದು ಈಗಿರುವ ಕಡ್ಡಾಯ ಶಿಕ್ಷಣ, ಅಂದರೆ 5 ವರ್ಷಕ್ಕೆ ಮೇಲ್ಪಟ್ಟ ಮಕ್ಕಳೆಲ್ಲ ಶಾಲೆಗೆ ಹೋಗಬೇಕು, ಎಂಬ ನೀತಿಯನ್ನು ಆದಷ್ಟು ಕಟ್ಟುನಿಟ್ಟಾಗಿ ಕಾರ್ಯರೂಪಕ್ಕೆ ತರಬೇಕು. ಆರ್ಥಿಕವಾಗಿ ತೀರ ದುರ್ಬಲ ಕುಟುಂಬಗಳಲ್ಲಿ ಈ ಕಾರ್ಯಕ್ರಮವನ್ನು ಅನುಸರಿಸುವಂತೆ ಮಾಡಲು ಸರ್ಕಾರ ಆರ್ಥಿಕವಾಗಿ ಪರಿಹಾರೋಪಾಯವನ್ನು ಕಂಡುಹಿಡಿಯಬೇಕು. ಇಲ್ಲದಿದ್ದರೆ ಒಂದು ರಾಷ್ಟ್ರದ ಸಾಕ್ಷರತೆಗೆ ಮೂಲವಾದ ಪ್ರಾಥಮಿಕ ಶಿಕ್ಷಣವೇ ಸೋತು, ಪೂರ್ಣ ಶಿಕ್ಷಣ ವ್ಯವಸ್ಥೆಯು ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಳ್ಳುತ್ತದೆ.

ಮೂಲ ಶಿಕ್ಷಣದ ಯಶಸ್ಸಿನ ಮೇಲೆ ಪ್ರೌಢ ಶಿಕ್ಷಣದ ರೂಪರೇಖೆಗಳನ್ನು ಮಾಡಬೇಕಾಗುತ್ತದೆ. ಈ ಶಿಕ್ಷಣ ಒಬ್ಬ ಯುವಕನ ಜೀವನದಾರಿಯನ್ನು ರೂಪಿಸುವಲ್ಲಿ ಮೂಲವಾಗುವಂತಾಗಬೇಕು. ಆದುದರಿಂದ ಈ ಶಿಕ್ಷಣ ಪ್ರಕಾರದಲ್ಲಿ ಹೆಚ್ಚು ನೈಪುಣ್ಯ ಒದಗಿಸುವ ಕ್ರಮಗಳನ್ನು ಅನುಸರಿಸಬೇಕು. ಈ ವ್ಯವಸ್ಥೆಯನ್ನು ಗಾಂಧಿಯವರ ಜೀವಿತ ಕಾಲದಲ್ಲಿಯೇ ಅನುಷ್ಠಾನಕ್ಕೆ ತರಲು ಪ್ರಯತ್ನಿಸಲಾಗಿತ್ತು. ಆದರೆ ಕಾರಣಾಂತರಗಳಿಂದ ಅದು ಯಶಸ್ವಿಯಾಗಲಿಲ್ಲ. ಈ ಶಿಕ್ಷಣ ಕ್ರಮದಲ್ಲಿ ಒಂದು ಸಮಾಜದ ಆರ್ಥಿಕ ಮತ್ತು ನೈಸರ್ಗಿಕ ಸಂಪತ್ತನ್ನಾಧರಿಸಿ ಅದರ ಬಳಕೆಗೆ ಪೂರಕವಾಗುವ ನೈಪುಣ್ಯತಾ ಶಿಕ್ಷಣಕ್ರಮವನ್ನು ಶಿಕ್ಷಣ ವೇತ್ತರು, ತಜ್ಞರು ರೂಪಿಸಬೇಕು. ಹೀಗೆ ರೂಪಿಸಿದ ಶಿಕ್ಷಣ ಕ್ರಮ ಶಿಕ್ಷಣಾರ್ಥಿಯಲ್ಲಿ ನೈಪುಣ್ಯತೆಯನ್ನು ಹೆಚ್ಚಿಸುವುದಲ್ಲದೆ ಅವನಲ್ಲಿ ಹೆಚ್ಚು ಶೈಕ್ಷಣಿಕ ತಿಳುವಳಿಕೆಗೆ ಪ್ರಚೋದನೆಯನ್ನುಂಟುಮಾಡುವಂತಿರಬೇಕು. ಹೀಗಾದಾಗ ನೈಪುಣ್ಯ ಪಡೆದ ಕೆಲವರು ಆ ಪರಿಸರದ ಸಂಪತ್ತನ್ನು ಅಭಿವೃದ್ಧಿ ಕಾರ್ಯದಲ್ಲಿ ತೊಡಗಿಸಲು ನೆರವಾದರೆ, ಕೆಲವರು ಇನ್ನೂ ಹೆಚ್ಚಿನ ನೈಪುಣ್ಯದ ಬಯಕೆಯಿಂದ ಹೆಚ್ಚು ಅಧ್ಯಯನ (ಉಚ್ಚಶಿಕ್ಷಣ) ಮತ್ತು ಸಂಶೋಧನೆಯಲ್ಲಿ ತೊಡಗಿ ರಾಷ್ಟ್ರದ ನೈಪುಣ್ಯದ ಆಗರವನ್ನು ದೊಡ್ಡದು ಮಾಡುವಲ್ಲಿ ಸಹಾಯಕರಾಗುತ್ತಾರೆ. ಹೀಗಾದಾಗ ಪ್ರಾಥಮಿಕ ಶಿಕ್ಷಣದ ನಂತರ ಪ್ರೌಢ ಶಿಕ್ಷಣ ಒಬ್ಬ ವ್ಯಕ್ತಿಯ ಜೀವನೋಪಾಯಕ್ಕೆ ಮೂಲವಾಗುವುದಲ್ಲದೆ ಒಂದು ರಾಷ್ಟ್ರದ ಪ್ರಗತಿಯಲ್ಲಿಯೂ ಮುಖ್ಯಪಾತ್ರ ವಹಿಸಿದಂತಾಗುತ್ತದೆ.

ಇನ್ನು ಉಚ್ಚ ಶಿಕ್ಷಣಕ್ಕೆ ಬಂದರೆ, ವಿಶ್ವವಿದ್ಯಾನಿಲಯಗಳು ಈ ವಿದ್ಯಾಭ್ಯಾಸ ಕ್ರಮದಲ್ಲಿ ಮಹತ್ತರ ಪಾತ್ರ ವಹಿಸುತ್ತವೆ. ಸ್ವಾತಂತ್ರ್ಯ ಪೂರ್ವದಲ್ಲಿ ಭಾರತದಲ್ಲಿದ್ದ ಕೇವಲ ಕೆಲವೇ ವಿಶ್ವವಿದ್ಯಾನಿಲಯಗಳು ಉಚ್ಚ ಶಿಕ್ಷಣ ನೀಡಲೆಂದೇ ಸ್ಥಾಪಿಸಲ್ಪಟ್ಟರೂ ಅವು ಆಂಗ್ಲ ಸರ್ಕಾರದ ಸೇವೆಗೆ ಬೇಕಾಗುವ ಕಾರಕೂನ ಮತ್ತು ಕೆಲವು ಕೆಳಮಟ್ಟದ ಅಧಿಕಾರಿಗಳನ್ನು ಉತ್ಪಾದಿಸುವ ಕಾರ್ಯದಲ್ಲಿ ತೊಡಗಿದ್ದವು. ಸ್ವಾತಂತ್ರ್ಯಾನಂತರ ನೂರಾರು ವಿಶ್ವವಿದ್ಯಾನಿಲಯಗಳು ಭಾರತದಲ್ಲಿ ಬೆಳೆದುಬಂದವು. ಅವುಗಳ ಮುಖ್ಯ ಉದ್ದೇಶ ಉಚ್ಚಶಿಕ್ಷಣ ಅಧಿಕ ಪ್ರಮಾಣದಲ್ಲಿ ದೊರೆಯುವಂತೆ ಮಾಡುವುದೇ ಅಲ್ಲದೆ ಹೆಚ್ಚಿನ ತಾಂತ್ರಿಕ ಮತ್ತು ವೈಜ್ಞಾನಿಕ ಶಕ್ತಿಯನ್ನು ಬೆಳೆಯುವಂತೆ ಮಾಡುವುದು, ಪೋಷಿಸುವುದು ಹಾಗು ಜ್ಞಾನದ ನಾನಾ ಪ್ರಕಾರಗಳ ಬೆಳವಣಿಗೆಗೆ ಮೂಲಸಂಸ್ಥೆಯಾಗಿ ಮಾರ್ಗದರ್ಶನ ಮತ್ತು ಪ್ರೋತ್ಸಾಹ ಕೊಡುವುದು. ಆದರೆ ಸ್ವಾತಂತ್ರ್ಯಾನಂತರದ ವಿಶವಿದ್ಯಾನಿಲಯಗಳ ಬೆಳವಣಿಗೆ ಮತ್ತು ಕಾರ್ಯವಿಧಾನಗಳನ್ನು ಕೂಲಂಕಷವಾಗಿ ವಿಶ್ಲೇಷಿಸಿದ್ದೇ ಆದರೆ ನಮಗೆ ಒಂದು ಅಂಶ ಸ್ಪಷ್ಟವಾಗುತ್ತದೆ. ಅದೇನೆಂದರೆ ಈ ಮೇಲಿನ ಉದ್ದೇಶವನ್ನು ಸಾಧಿಸುವಲ್ಲಿ ನಮ್ಮ ವಿಶ್ವವಿದ್ಯಾನಿಲಯಗಳು ಪೂರ್ಣ ಪ್ರಮಾಣದ ಯಶಸ್ಸನ್ನು ಗಳಿಸದಿರುವುದು. ಉದಾಹರಣೆಗೆ : ತಾಂತ್ರಿಕ ಜ್ಞಾನದ ಬೆಳವಣಿಗೆಯನ್ನು ನೋಡಿದ್ದೇ ಆದರೆ ನಮ್ಮ ಸಾಮಾಜಿಕ ಆರ್ಥಿಕ ಪರಿಸರ ಯಾವುದೇ ಪಾಶ್ಚಿಮಾತ್ಯ ದೇಶಗಳ ಮಾದರಿಯ ತಾಂತ್ರಿಕ ಜ್ಞಾನದ ಬಳಕೆಗೆ ಪೂರ್ಣ ಸಜ್ಜಾಗಿಲ್ಲ. ಆದರೆ ನಮ್ಮ ಈ ಮಹಾ ಸಂಸ್ಥೆಗಳಲ್ಲಿನ ತಾಂತ್ರಿಕ ಮತ್ತು ವೈಜ್ಞಾನಿಕ ಬೆಳವಣಿಗೆ ಪೂರ್ಣ ಪಾಶ್ಚಿಮಾತ್ಯ ದೇಶಗಳ ತಾಂತ್ರಿಕ ಜ್ಞಾನದ ಅಚ್ಚಿನಂತಿದ್ದು ನಮ್ಮ ಪರಿಸರದ ಹೊಸ್ತಿಲನ್ನು ದಾಟಿ ಒಳ ಹೋಗಲು ಸೋಲುತ್ತದೆ. ಹೀಗಾದಾಗ ನಮ್ಮ ಉಚ್ಚ ಶಿಕ್ಷಣದ ಮೂಲ ಉದ್ದೇಶವೇ ಸೋತು ತನ್ನ ಸಾರ್ಥಕತೆಯನ್ನು ಕಳೆದುಕೊಳ್ಳುತ್ತದೆ. ಅಲ್ಲದೆ ನಮ್ಮ ಉಚ್ಚ ಶಿಕ್ಷಣ ಕೇಂದ್ರಗಳು ಪಟ್ಟಣಗಳಲ್ಲೇ ಕೇಂದ್ರೀಕೃತವಾಗಿದ್ದು, ಬಹುಪ್ರಮಾಣ ಗ್ರಾಮೀಣ ಭಾರತದ ಮೂಲ ಲಕ್ಷಣಗಳನ್ನೇ ಕಳೆದುಕೊಂಡು ಪರದೇಶಿಯಂತಾಗಿ ಈ ವ್ಯವಸ್ಥೆಯಲ್ಲಿ ತನ್ನ ಅಸ್ತಿತ್ವವನ್ನು ಬಹಳ ಮಟ್ಟಿಗೆ ಸಾರ್ಥಕಗೊಳಿಸಿಕೊಳ್ಳಲು ಸೋಲುತ್ತದೆ. ಹೀಗಾದಾಗ ಆ ಶಿಕ್ಷಣ ವ್ಯವಸ್ಥೆ ಒಂದು ರಾಷ್ಟ್ರದ ದೃಷ್ಟಿಯಿಂದ ಬೊಕ್ಕಸಕ್ಕೆ ಹೊರೆಯಾಗಿ ಪ್ರತಿಫಲವಿಲ್ಲದ ಸ್ವತ್ತಾಗುತ್ತದೆ. ಆದುದರಿಂದ ಉಚ್ಚ ಶಿಕ್ಷಣವನ್ನು ವ್ಯವಸ್ಥೆಗೊಳಿಸುವಾಗಲು ಒಂದು ರಾಷ್ಟ್ರ ತನ್ನ ಮೂಲ ಮತ್ತು ಪ್ರೌಢ ಶಿಕ್ಷಣದ ರೂಪುರೇಖೆಯ ಮೇಲೆ ರಚಿಸಿ, ಬೆಳೆಸಿ ರಾಷ್ಟ್ರದ ಪ್ರಗತಿಯ ಹಾದಿಯಲ್ಲಿ ಅದನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳಬೇಕಾಗುತ್ತದೆ. ಹೀಗಾದಾಗ ಒಂದು ರಾಷ್ಟ್ರದ ಆರ್ಥಿಕ ಜೀವನದಲ್ಲಿ ಉಚ್ಚ ಶಿಕ್ಷಣ ಅಧಿಕ ಪ್ರಮಾಣದಲ್ಲಿ ತನ್ನ ಉಪಯೋಗವನ್ನು ಕಂಡುಕೊಂಡು ರಾಷ್ಟ್ರದ ಬೆಳವಣಿಗೆಗೆ ತೀವ್ರತೆಯನ್ನುಂಟುಮಾಡುತ್ತದೆ.

ಈ ಮೇಲೆ ಹೇಳಿದ ಶಿಕ್ಷಣ ಕ್ರಮಗಳು ಸುಧಾರಿತ ಶಿಕ್ಷಣ ಕ್ರಮಗಳಾದರೆ, ಇವುಗಳಿಂದಲೇ ಒಂದು ರಾಷ್ಟ್ರ ಪೂರ್ಣ ಅಕ್ಷರತೆಯನ್ನು ಸಾಧಿಸುತ್ತದೆ ಎಂದು ಹೇಳಲಾಗದು. ಏಕೆಂದರೆ ಈ ವ್ಯವಸ್ಥಿತ ಶಿಕ್ಷಣ ಕ್ರಮದಿಂದ ಹೊರಗೆ ಅದೆಷ್ಟೋ ಜನ ಅನಿವಾರ್ಯ ಕಾರಣಗಳಿಂದಾಗಿ ಉಳಿಯುತ್ತಾರೆ. ಅಂತಹವರನ್ನು ಅಕ್ಷರಸ್ಥರನ್ನಾಗಿಸಲು ಒಂದು ರಾಷ್ಟ್ರ ಮೇಲೆ ಹೇಳಿದ ಶಿಕ್ಷಣ ಕ್ರಮಕ್ಕಿಂತ ಬೇರೆಯಾದ ಶಿಕ್ಷಣವನ್ನು ರೂಪಿಸಬೇಕು. ಇಂತಹ ವ್ಯವಸ್ಥೆ ಭಾರತದಂತಹ ರಾಷ್ಟ್ರಗಳಲ್ಲಿ ಅನಿವಾರ್ಯ ಸಹಾಯಕಾರಿಯಾದದ್ದು. ಈ ಶಿಕ್ಷಣ ಕ್ರಮವನ್ನು ಸಾಂಪ್ರದಾಯಿಕವಲ್ಲದ (non-formal) ಶಿಕ್ಷಣ ಕ್ರಮವೆನ್ನಬಹುದು. ಈ ಶಿಕ್ಷಣ ಕ್ರಮವನ್ನು ರೂಪಿಸುವಾಗಲೂ ಸರ್ಕಾರ ಈ ಶಿಕ್ಷಣ ಕ್ರಮದ ಗಾತ್ರ, ರೀತಿ, ನೀತಿಗಳ ಬಗ್ಗೆ ಮಹತ್ತರ ತೀರ್ಪನ್ನು ಕೈಗೊಳ್ಳಬೇಕಾಗುತ್ತದೆ. ಇಂತಹ ಶಿಕ್ಷಣವನ್ನು ರೂಪಿಸುವಲ್ಲಿ ಶಿಕ್ಷಣ ತಜ್ಞರು

ಸರ್ಕಾರಕ್ಕೆ ಸಹಾಯ ಮಾಡಬಲ್ಲರು. ಈ ದಿಶೆಯಲ್ಲಿ ಭಾರತಸರ್ಕಾರ ರೂಪಿಸಿರುವ ವಯಸ್ಕರ ಶಿಕ್ಷಣಕ್ರಮ ಸ್ತುತ್ಯರ್ಹವಾದದ್ದು. ಈ ಶಿಕ್ಷಣ ಕ್ರಮದಲ್ಲಿ 15ವರ್ಷ ವಯಸ್ಸಿನಿಂದ 35ವರ್ಷ ವಯೋಮಿತಿಗೊಳಪಟ್ಟ ಅವಿದ್ಯಾವಂತ ಜನರು ಪ್ರಯೋಜನ ಪಡೆಯಬಹುದು. ಈ ಶಿಕ್ಷಣ ಕ್ರಮವನ್ನು ಕಾರ್ಯರೂಪಕ್ಕೆ ತರುವಾಗ ಸರ್ಕಾರ ಶಿಕ್ಷಣದ ಅವಧಿಯನ್ನು ನಿರ್ಧರಿಸುವುದು ಮಾತ್ರವಲ್ಲದೆ, ಆ ಅವಧಿಯನ್ನು ಪ್ರಾಥಮಿಕ, ಮಾಧ್ಯಮಿಕ ಎಂದು ವಿಂಗಡಿಸಬೇಕಾಗುತ್ತದೆ. ಈ ಶಿಕ್ಷಣ ಕ್ರಮದ ಮುಖ್ಯ ಉದ್ದೇಶ ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿಸುವುದೇ ಹೊರತು ಬೇರಾವುದೂ ಆಗಿರುವುದಿಲ್ಲವಾದ್ದರಿಂದ ಒಬ್ಬ ವ್ಯಕ್ತಿಗೆ ಒಂದು ರಾಷ್ಟ್ರ ಜೀವನದಲ್ಲಿ ತನ್ನ ದಿನ ನಿತ್ಯದ ವ್ಯಾಪಾರ ವ್ಯವಹಾರಕ್ಕೆ ಬೇಕಾದ ಶಿಕ್ಷಣವನ್ನು ಮಾತ್ರ ಕೊಡುವುದಾಗಿರುತ್ತದೆ. ಹೀಗಿರುವಾಗ ಸರ್ಕಾರ ಈ ಶಿಕ್ಷಣವನ್ನು ಪ್ರಸಾರ ಮಾಡುವಲ್ಲಿ ಸಾಕಷ್ಟು ಅನಾನುಕೂಲಗಳನ್ನು ಅನುಭವಿಸಬೇಕಾಗುತ್ತದೆ. ಅವರೆ ಅದು ಅನಿವಾರ್ಯ. ಆದುದರಿಂದ ಈ ಕಾರ್ಯಕ್ರಮದ ಯಶಸ್ಸಿಗೆ ಸರ್ಕಾರ ತನ್ನ ಅಂಗಸಂಸ್ಥೆಗಳ ಮೂಲಕವೇ ಅಲ್ಲದೆ ಸೇವಾ ಸಂಘಗಳು, ಸಂಸ್ಥೆಗಳು ಮತ್ತು ಸಾಂಸ್ಕೃತಿಕ ಸಂಘಗಳು ಹಾಗೂ ವಿಶ್ವವಿದ್ಯಾನಿಲಯಗಳನ್ನು ಬಳಸಿಕೊಂಡಿದ್ದೇ ಆದರೆ ಈ ಶಿಕ್ಷಣ ಕ್ರಮ ಪೂರ್ಣವಲ್ಲದಿದ್ದರೂ ಸಾಕಷ್ಟು ಯಶಸ್ಸು ಗಳಿಸಬಲ್ಲುದು. ಇವುಗಳೊಟ್ಟಿಗೆ ಪ್ರಸಾರ ಮತ್ತು ಸಂಪರ್ಕ ಮಾಧ್ಯಮಗಳನ್ನು ಸರ್ಕಾರ ಈ ಕಾರ್ಯಕ್ರಮಕ್ಕೆ ಬಳಸಿಕೊಳ್ಳಬಹುದು. ಹೀಗೆ ಪ್ರಸಾರಮಾಧ್ಯಮಗಳನ್ನು ಬಳಸಿಕೊಳ್ಳುವುದರಿಂದ ಈ ಮಾಧ್ಯಮಗಳು ತಮ್ಮ ಸಾರ್ಥಕತೆಯನ್ನು ಹೆಚ್ಚಿಸಿಕೊಳ್ಳುವುದಲ್ಲದೆ ಒಂದು ರಾಷ್ಟ್ರದ ಅಭಿವೃದ್ಧಿಯಲ್ಲಿ ತಮ್ಮ ಪಾಲಿನ ಸೇವೆಯನ್ನು ಸಲ್ಲಿಸಿದಂತಾಗುತ್ತದೆ.

ಆದರೆ ನಮ್ಮ ದೇಶದಲ್ಲಿ ಸಂಪ್ರದಾಯವಲ್ಲದ ಶಿಕ್ಷಣಕ್ರಮ ಬಹಳ ವರ್ಷಗಳಿಂದ ಅಸ್ತಿತ್ವದಲ್ಲಿದ್ದರೂ ಅಂತಹ ಪ್ರಭಾವಪೂರ್ಣ ಕೆಲಸಮಾಡದೆ ಜಡ ವ್ಯವಸ್ಥೆಯಾಗಿಯೇ ಉಳಿದಿದೆ. ಅದಕ್ಕೆ ಕೇಂದ್ರ ಸರ್ಕಾರ 1978 ಅಕ್ಟೋಬರ್ 2ರಂದು ಈ ವಯಸ್ಕರ ಶಿಕ್ಷಣ ಕ್ರಮವನ್ನು ರಾಷ್ಟ್ರೀಯ ಕಾರ್ಯಕ್ರಮವಾಗಿ ಅಂಗೀಕರಿಸಿದೆ. ಅತ್ಯುತ್ಸಾಹದಿಂದ ಪ್ರಾರಂಭವಾದ ಈ ಕಾರ್ಯಕ್ರಮ ಕೇವಲ ಕೆಲವೇ ತಿಂಗಳುಗಳಲ್ಲಿ ತನ್ನ ಭರವನ್ನು ಕಳೆದುಕೊಂಡು ಮಂದಗತಿಯಲ್ಲಿ ಸಾಗುತ್ತಿದೆ. ಇದು ರಾಷ್ಟ್ರೀಯ ದುರಂತ. ಇಂತಹ ಕಾರ್ಯಕ್ರಮಗಳನ್ನು ಸರ್ಕಾರ ಆಗಿಂದಾಗ್ಗೆ ಪರಿಶೀಲಿಸುತ್ತಿರಬೇಕು. ಈ ಪರಿಶೀಲನೆಯಿಂದ ಕಂಡುಬರುವ ನ್ಯೂನತೆಗಳನ್ನು ಸರಿಪಡಿಸಲು ಕ್ರಮಗಳನ್ನು ಕೈಗೊಳ್ಳಬೇಕು ಹೀಗಾಗದಿದ್ದರೆ ಇಂತಹ ಕಾರ್ಯಕ್ರಮಗಳು ಕೇವಲ ಸರ್ಕಾರದ ಬಾಯಿ ಬಡಾಯಿ ಕಾರ್ಯಕ್ರಮಗಳಾಗಿ ರಾಷ್ಟ್ರಕ್ಕೆ ಯಾವ ರೀತಿಯಲ್ಲಿಯೂ ಸಹಕಾರಿಯಾಗದೆ ಕೇವಲ ಪ್ರತಿಷ್ಠೆಯ ಕ್ರಮಗಳಾಗಿ ಉಳಿಯುತ್ತವೆ. ಇಂತಹ ಕಾರ್ಯಕ್ರಮಗಳು ಕಾಲಾನಂತರ ರಾಷ್ಟ್ರದ ಮೇಲೆ ತಮ್ಮದೇ ಆದ ರೀತಿಯಲ್ಲಿ ಕರಾಳಛಾಯೆ ಬೀರಿ ಅಭಿವೃದ್ಧಿ ಪಥದಲ್ಲಿ ಮುಳ್ಳುಗಳಾಗಿ ನಿಲ್ಲಲೂಬಹುದು. ಹೀಗಾಗದಂತೆ ನೋಡಿಕೊಳ್ಳುವುದು ಸರ್ಕಾರದ ಪೂರ್ಣ ಜವಾಬ್ದಾರಿಯಾಗಿರುತ್ತದೆ.

ಹೀಗೆ ಮೇಲೆ ಹೇಳಿದ ಶಿಕ್ಷಣಕ್ರಮಗಳು ಒಂದು ರಾಷ್ಟ್ರದ ಮುಖ್ಯ ಸಂಪತ್ತಾದ ಮಾನವನ ಮೌಲ್ಯವನ್ನು ಹೆಚ್ಚಿಸಿ ಪ್ರಗತಿಪಥದಲ್ಲಿ ಮಾನವನನ್ನು ಒಂದು ಮುಖ್ಯ ಸಾಧನವನ್ನಾಗಿಸುತ್ತದೆ. ಹೀಗಾಗಿಸಲು ಸರ್ಕಾರಗಳು ಮಾತ್ರ ನಿಷ್ಠೆಯಿಂದ ಕೆಲಸಮಾಡಿದರೆ ಸಾಲದು; ಶಿಕ್ಷಣವೇತ್ತರು, ತಜ್ಞರು ಮತ್ತು ಜವಾಬ್ದಾರಿಯುತ ಪ್ರಜೆಗಳೆಲ್ಲ ತಮ್ಮ ತಮ್ಮ ಪಾಲಿನ ಕೆಲಸ ನಿರ್ವಹಿಸಬೇಕಾಗುತ್ತದೆ. ಆದುದರಿಂದ ಇವರುಗಳ ನಿಷ್ಠೆ, ಸಾಮಾಜಿಕ, ಆರ್ಥಿಕ ಕಳಕಳಿ ಆಗಾಗ್ಗೆ ಇವರುಗಳನ್ನು ತಟ್ಟುತ್ತ ಎಚ್ಚರಿಸುತ್ತ ಕಾರ್ಯೋನ್ಮುಖರನ್ನಾಗಿ ಮಾಡಿದರೆ ಶಿಕ್ಷಣ ವ್ಯವಸ್ಥೆ ಭಾರತದ ಅಭಿವೃದ್ಧಿಯಲ್ಲಿ ತನ್ನದೇ ಆದ ವಿಶಿಷ್ಟ ಸ್ಥಾನ ಪಡೆದು ಅಭಿವೃದ್ಧಿಗೆ ಪೂರಕವಾಗುತ್ತದೆ.

ಎ. ಎಸ್. ಭಟ್ಟ

ಹಾಲಕ್ಕಿ ಗೌಡರು (ಒಕ್ಕಲಿಗರು)

ನಮ್ಮ ಕರ್ನಾಟಕದ ಮಲೆನಾಡ ಅದರಲ್ಲೂ ಮುಖ್ಯವಾಗಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಕಾಣಸಿಗುವ ಜನಾಂಗದಲ್ಲಿ ಹಾಲಕ್ಕಿಗೌಡರದೂ ಒಂದು ಮಹತ್ವವಾದ ಪಾತ್ರವಾಗಿದೆ.

ಜನಜೀವನ – ಈ ಗೌಡ ಜನಾಂಗದವರು ತಗ್ಗು ಪ್ರದೇಶಗಳಲ್ಲಿ ವಿಶೇಷವಾಗಿ ಬ್ರಾಹ್ಮಣರ ನೆರೆಯಲ್ಲಿ ವಾಸಿಸುತ್ತಾರೆ ಮತ್ತು ನೀರು ದೊರೆಯುವ ಸ್ಥಳವನ್ನೇ ಆರಿಸಿಕೊಂಡು ತಮ್ಮ ಗುಡಿಸಿಲುಗಳನ್ನು ಒಂದೆಡೆಗೇ ಕಟ್ಟಿಕೊಳ್ಳುತ್ತಾರೆ. ಕೆಲವು ವಿಷಯಗಳಲ್ಲಿ ಬ್ರಾಹ್ಮಣರಿಗೂ (ಅದರಲ್ಲೂ ಹವ್ಯಕರಿಗೆ) ಇವರಿಗೂ ಹೊಂದಾಣಿಕೆ ಇದೆ. ಏಕೆಂದರೆ ಇವರು ದಿನನಿತ್ಯ ಬಳಸುವ ಮಣ್ಣಿನ ಪಾತ್ರೆಗಳನ್ನು ಬ್ರಾಹ್ಮಣರೂ ನಿತ್ಯ ಮನೆಯಲ್ಲಿ ಬಳಸುತ್ತಾರೆ. ಅವರಂತೇ ಉದ್ದ ಬಾಲಗಚ್ಚೆಯನ್ನು ಧರಿಸುತ್ತಾರೆ. ಕೈಗೆ ಮಣ್ಣಿನ ಬಳೆಗಳನ್ನು ಹಾಕುವಲ್ಲಿ ವಿಶೇಷವಾಗಿ ಲಗ್ನದ ವೇಳೆಯಲ್ಲಿ ಗಂಡಹೆಂಡಿರು ಕೂಡಿ ಹಿಟ್ಟುಕುಟ್ಟುವ ಪದ್ಧತಿಯಲ್ಲೂ ನಿತ್ಯದಲ್ಲೂ ಭತ್ತ 'ಮೆರಿಯುವ' (ಕುಟ್ಟುವ) ಪದ್ಧತಿಯಲ್ಲೂ ಅವರನ್ನು ಇವರು ಅನುಸರಿಸಿದ್ದಾರೋ ಅಥವಾ ಒಕ್ಕಲಿಗರಿಂದಲೇ ಇವನ್ನು ಕಲಿತರೋ ತಿಳಿಯುವಂತಿಲ್ಲ. ಅಂತೂ ಹೊಂದಾಣಿಕೆ ಇರುವುದು ಸತ್ಯ.

ಇವರ ಬಣ್ಣ ಹಸುಗೆಂಪು. ಸಾಧಾರಣವಾಗಿ ದ್ರಾವಿಡ ಬುಡಕಟ್ಟಿಗೆ ಸೇರಿದ ಜನಾಂಗವಿರಬಹುದು. ವಿದ್ಯೆಯಲ್ಲಿ ತೀರ ಹಿಂದುಳಿದ ಜನಾಂಗ. ಏಕೆಂದರೆ ವಿದ್ಯೆಯಲ್ಲಿ ಆಸಕ್ತಿ ಕಡಿಮೆ. ಕಾರಣ ಬಡತನವೇ ಇರಬಹುದು. ಇವರ ಆಹಾರ ಮುಖ್ಯವಾಗಿ ಅನ್ನ, ರಾಗಿ, ಮೀನು, ಮಾಂಸಗಳು. ಈ ಜನರೆಲ್ಲ ಹಿಂದೆ ದೃಢಕಾಯರಾಗಿದ್ದು ಎತ್ತರದ ಆಳುಗಳಾಗಿದ್ದು ನಿರೋಗಿಗಳೂ ದೀರ್ಘಾಯುಷಿಗಳೂ ಆಗಿದ್ದರು.

ರಾಗಿರೊಟ್ಟಿ ಅದರ ಅಂಬಲಿ (ಗಂಜಿ)ಗಳನ್ನು ಆಗಾಗ ತಿನ್ನುವದರಿಂದ ಇವರ ಹೊಟ್ಟೆ ದೊಡ್ಡದಾಗಿದೆ.

ಉದ್ಯೋಗ – ಹೊಲದಲ್ಲಿ ದುಡಿಯುವದು, ದನಗಾವಲು, ಕೂಲಿಕೆಲಸ ಹಾಗೂ ಬೇಟೆಯಾಡುವುದು; ಇನ್ನಿತರ ಚಿಕ್ಕ ಪುಟ್ಟ ಕೈಕಸೂತಿ ಕೆಲಸಗಳನ್ನು ಮಾಡುವುದರಲ್ಲೂ ಪ್ರವೀಣರು. ಮೊದಲೆಲ್ಲ ಬಹುತೇಕ ಈ ವರ್ಗದವರು ಒಡೆಯರ ಜಮೀನುಗಳನ್ನು ಗೇಣಿಯ ಮೇಲೆ ಸಾಗುವಳಿ ಮಾಡಿ ಬೆಳೆಬಂದೊಡನೆ ಒಡೆಯನಿಗೆ ತೊಂಡಿಯಲ್ಲಿ ಮಾತಾಡಿದಂತೆ ಅವರಿಗೆ ಸಲ್ಲತಕ್ಕ ದವಸ, ಧಾನ್ಯ, ಹುಲ್ಲುಗಳನ್ನು ಅತಿ ಪ್ರಾಮಾಣಿಕತೆಯಿಂದ ಕೊಡುತ್ತಿದ್ದರು ; ಕರಾರು ಸಹ ಬೇಕಿದ್ದಿಲ್ಲ. ಅಲ್ಲದೇ ಒಡೆಯನ ಮನೆಯ ಆಳಾಗಿ ತೋಟಗಳಲ್ಲಿಯೂ ಇನ್ನಿತರ ಕೆಲಸಗಳಲ್ಲಿಯೂ ನೆರವಾಗುತಿದ್ದು ಒಡೆಯ ಒಕ್ಕಲಿಗರ ಸಂಬಂಧ ಪ್ರೀತಿವಿಶ್ವಾಸಗಳಲ್ಲಿ ಬೇರೂರಿತ್ತು. ಒಡೆಯರು ಸಹ ಇವರಿಗೆ ಬೇಕಾದ ಸೌಕರ್ಯವನ್ನು ಒದಗಿಸುತ್ತಿದ್ದರು.

ಗುಂಪುಜೀವನ – ಎಂದರೆ ಈ ಜನಾಂಗವೆಲ್ಲ ಒಂದೆಡೆ ಒಟ್ಟಾಗಿ ಮನೆಕಟ್ಟಿಕೊಂಡಿರುತ್ತಾರೆ. ಇದಕ್ಕೆ ಕೊಪ್ಪ ಎಂದು ಹೆಸರು ಇದಕ್ಕೂ ಕಾರಣ ಇಲ್ಲದಿಲ್ಲ. ಜನಾಂಗದ ಒಕ್ಕಟ್ಟನ್ನೂ ಕಾದುಕೊಂಡು ಸಹಕಾರದಿಂದ ಸಾಮೂಹಿಕ ಜೀವನವನ್ನು ನಡೆಸುವುದು. ತಮ್ಮತಮ್ಮಲ್ಲಿಯೇ ಕೊಡಕೊಳ್ಳುವ ವ್ಯವಹಾರ ಮಾಡಿಕೊಂಡು ಎಂತಹ ಸನ್ನಿವೇಶದಲ್ಲೂ ಒಂದಾಗಿ ಬಾಳುವುದರಲ್ಲಿ ಜೀವನವ ಸುಸೂತ್ರತೆಗೆ ಒಳಿತಾಗುತ್ತದೆ. "ಒಗ್ಗಟ್ಟೇಬಲ" ಎಂಬ ಆಧಾರದ ಮೇಲೆ ನಿಂತ ಜನಾಂಗದವರು ಇವರು. ಹಗಲೆಲ್ಲ ದುಡಿದು ದಣಿದ ಈ ಜನರು ತಮ್ಮ ನೆಮ್ಮದಿಗೋಸ್ಕರ ಸಂಜೆಯ ವೇಳೆಯಲ್ಲಿ ಮನರಂಜನೆಗಳನ್ನೂ ಏರ್ಪಡಿಸುತ್ತಾರೆ. ಜೊತೆಗೆ ತಮ್ಮ ಕಲಾಭಿವೃದ್ಧಿಯನ್ನೂ ಮಾಡಿದಂತಾಗುತ್ತದೆ. ಕಿರಿಯರಿಗೆ ಅದರಲ್ಲಿ ತರಬೇತು ಕೊಟ್ಟಂತಾಗುತ್ತದೆ. ಉದಾಹರಣೆಗೆ ಕೋಲಾಟ, ಗುಮ್ಮಟಿಪಾಗ, ಸುಗ್ಗಿಕುಣಿತ, ಸಿಂಗೀಬಾಳ್ಯನ ಕಥೆಯನ್ನು ಆಡುವುದು– ಇವೆಲ್ಲ ಜಾನಪದ ವಿಶೇಷ ಕಲೆಗಳು.

ಆಡಳಿತ ವ್ಯವಸ್ಥೆ – ಈ ಸಮಾಜಕ್ಕೆ ಕೆಲವು ಕಟ್ಟಳೆಗಳಿದ್ದು ಅಧಿಕಾರಿಗಳೂ ಇರುತ್ತಾರೆ. ಊರಿಗೆ ಒಬ್ಬ 'ಗೌಡ' ಎಂದರೆ ಮುಖಂಡನಿರುತ್ತಾನೆ. ಈತನ ಸಲಹೆಯ ಮೇರೆಗೆ ಊರಿನಲ್ಲಿ ಕಾರ್ಯಕಲಾಪಗಳು ನಡೆಯುತ್ತವೆ. ಆತನು ನಿಷ್ಠಾವಂತನೂ, ನಿಸ್ಪೃಹ ವ್ಯಕ್ತಿಯೂ ಆಗಿರಬೇಕಾಗುತ್ತದೆ. ಅವನನ್ನು ಮನೆತನದಿಂದಲೋ (ಪರಂಪರಾಗತವಾಗಿ) ಅಥವಾ ವ್ಯಕ್ತಿಯನ್ನು ನೋಡಿಯೋ ನೇಮಿಸುತ್ತಾರೆ. ಇತರರು ಏನೇ ತಪ್ಪುಮಾಡಿದಲ್ಲಿ ಅವರಿಗೆ ಶಿಕ್ಷೆ ವಿಧಿಸಲು ಅಧಿಕಾರ ಹೊಂದಿರುತ್ತಾನೆ. ಊರಲ್ಲಿ ಶಾಂತಿ, ಶಿಸ್ತು, ನ್ಯಾಯಗಳನ್ನೆಲ್ಲ ಈತ ಕಾದುಕೊಳ್ಳತಕ್ಕದ್ದು. ಇದೊಂದು ಗೌರವಯುತ ಹುದ್ದೆ ಅಷ್ಟೇ. ಇವನ ಮೇಲಧಿಕಾರಿಗಳಾಗಿ ಇಡೀ ಸಮಾಜಕ್ಕೇ ಕೋಲಕಾರ, ಬುದ್ಧಿವಂತ ಎಂಬುವರೂ ಪಂಚರೂ ಇರುತ್ತಾರೆ. ಇವರು ಗೌಡ ಮಾಡಿದ ತಪ್ಪಿಗಾಗಿ ಶಿಕ್ಷೆ ವಿಧಿಸಬಲ್ಲರು. ಅಲ್ಲದೇ ಗೌಡನಿಂದ ಬಗೆಹರಿಸಲಾರದ ಸಮಸ್ಯೆಗಳನ್ನು ಬಗೆಹರಿಸಿ ನ್ಯಾಯ ಹೇಳುವುದು, ಆಗಾಗ ಸಾಂಸ್ಕೃತಿಕ ಚಟುವಟಿಕೆಗಳನ್ನು ಎಸಗುವುದು, ಕಲ್ಯಾಣ (ಮದುವೆ) ಮಾಡಿಸುವುದು, ಆ ಜನಾಂಗದ ಒಗ್ಗಟ್ಟು ಕಾದುಕೊಂಡು ಹೋಗುವದು, ಹಬ್ಬಹುಣ್ಣಿಮೆಗಳನ್ನು ಸರಿಯಾಗಿ ಆಚರಿಸುವದು, ಆಗಾಗ ಸರಿಯಾಗಿ ಗೌಡನಿಗೂ ಜನರಿಗೂ ಸಲಹೆ ನೀಡುವುದೇ ಮೊದಲಾದವು ಇವರ ಹೊಣೆ. ಅವರಲ್ಲಿ ವ್ಯಭಿಚಾರದಿಂದ ವಿವಾಹಕ್ಕೆ ಮೊದಲೇ ಹುಟ್ಟಿದ ಮಗುವನ್ನು, ತಾಯಿಯನ್ನು ಆ ಜಾತಿಯಿಂದ ಹೊರಗೆ ಹಾಕಿ ಆ ಪೀಳಿಗೆಗೆ ಯಾವ ರೀತಿಯಲ್ಲೂ ಸಹಕಾರ ಕೊಡದೆ ಜಾತಿಗೆಟ್ಟವ ಎಂದು ಬಹಿಷ್ಕರಿಸಿ ಸಮಾಜ ಬಾಹಿರನೆಂದು ತೀರ್ಪಿತ್ತು ಜಾತಿಕಟ್ಟುವ ರೂಢಿ ಇದೆ. ಇದರಿಂದ ವ್ಯಭಿಚಾರ ಮಾಡಲು ಎಡೆಯಿರುವುದಿಲ್ಲ ಮತ್ತು ಮೆಟ್ಟಿನಿಂದ (ಕೆರ) ಹೊಡೆದವನಿಗೂ ? ಅವನಿಗೆ ಇಂತಿಷ್ಟು ದಂಡವೆಂದು ಜುಲುಮೆಯಿಂದ ವಿಧಿಸುತ್ತಾರೆ. ಆತ ಈ ತಪ್ಪನ್ನು ಒಪ್ಪಿಕೊಂಡು ತಪ್ಪುದಂಡ ಒಪ್ಪಿಸಿ ತಾನೂ ಶುದ್ಧನಾಗಬೇಕಾಗುತ್ತದೆ. ಪೆಟ್ಟು ತಿಂದವನೂ ಹೊಡೆದವನೂ ಇಬ್ಬರೂ ಹೋಗಿ ಗೋಕರ್ಣದ ತೀರ್ಥವಲ್ಲಿ ಮಿಂದು ಶುದ್ಧನಾಗಬೇಕಾಗುತ್ತದೆ. ಅದರಂತೆ ಯಾವ ತರದ ಅಪರಾಧ ಮಾಡಿದರೂ ಶಿಕ್ಷೆಯಿದೆ. ಆತ ಅದನ್ನು ಒಪ್ಪಲೇಬೇಕು. ಇಲ್ಲದಿದ್ದರೆ ಆತ ಸಮಾಜದಿಂದ ಹೊರಗುಳಿಯಬೇಕಾಗುತ್ತದೆ. ಅಂತೆಯೇ ಸುಗ್ಗಿ ಕಾಲದಲ್ಲಾಗುವ ಸುಗ್ಗಿ ಹಬ್ಬದಲ್ಲೂ ಅಷ್ಟೇ; ಯಾರಾದರೂ ಕುಣಿಯುವಾಗ ಹೆಜ್ಜೆ ತಪ್ಪಿದಲ್ಲಿ ಆ ಊರಿನ ಗೌಡ ವಿಧಿಸಿದಷ್ಟು ದಂಡ ನೀಡಬೇಕಾಗುತ್ತದೆ. ಈ ರೀತಿಯ ಗ್ರಾಮಕಟ್ಟಳೆ ಈ ಜನಾಂಗದಲ್ಲಿದೆ.

ಹಾಲಕ್ಕಿ ಒಕ್ಕಲಿಗರಲ್ಲಿ ಗುರುಗೌಡ ಅರಸಗೌಡನೆಂದು ಇರುತ್ತಾನೆ. ಆತ 70 ಹಳ್ಳಿಗೆ ಮೇಲಧಿಕಾರಿ. 18 ಹಳ್ಳಿಗೆ ಮೇಲಧಿಕಾರಿಯಾಗಿ ಬಾರ್ಕ ಎಂಬ ಅಧಿಕಾರಿ ಇರುತ್ತಾನೆ. ಇವರಲ್ಲಿ ಚಪ್ಪರ ಕೂಡ 5 ವರ್ಷಗಳಿಗೊಮ್ಮೆ ಜರುಗುತ್ತದೆ. ಆಗ ಅಲ್ಲಿ ಎಲ್ಲ ಹಳ್ಳಿಗಳ ಗೌಡ, ಬುದ್ಧಿ

ವಂತ, ಕೋಲಕಾರರೊಡನೆ ವಿಚಾರಗೋಷ್ಠಿ ನಡೆಯುತ್ತದೆ. ಲೋಪದೋಷಗಳಿದ್ದರೆ, ತಿದ್ದುಪಡಿಯಾಗುತ್ತ ಹೊಸ ವಿಚಾರಗಳನ್ನು ತಿಳಿಸಲಾಗುತ್ತದೆ. ಪ್ರತಿಯೊಬ್ಬರೂ ತಪ್ಪದೇ ಹೋಗಬೇಕು. ಊರಿನ ಗೌಡರೆಲ್ಲ ತಪ್ಪಿದಲ್ಲಿ 24 ತಾಸುಗಳ ಕಾಲ ಒಕ್ಕಾಲಿನಲ್ಲಿ ನಿಲ್ಲುವ ಶಿಕ್ಷೆ ವಿಧಿಸಲಾಗುತ್ತದೆ. ಅಲ್ಲದೆ ನೀರು ಅನ್ನಗಳನ್ನು ಸಹ ಕೊಡದಂತೆ ಆಜ್ಞೆ ವಿಧಿಸಲಾಗುತ್ತದೆ. ನಂತರ ಸಮಾಜದಿಂದ ಬಹಿಷ್ಕಾರ ನಡೆಯುತ್ತದೆ.

ಈ ಜನರು ಊರ ದೇವರಿಗೆ ನವರಾತ್ರಿಯಲ್ಲೊಂದು ದಿನ ಸೇವೆ ಸಲ್ಲಿಸಿ, ಊರಲ್ಲಿರುವ ಬ್ರಾಹ್ಮಣರ ಮನೆಯ ದುರ್ಗೆಗಳನ್ನು ಕರೆದು ಯೋಗ್ಯ ರೀತಿಯಲ್ಲಿ ದಕ್ಷಿಣೆ ಕೊಟ್ಟು ಊಟೋಪಚಾರಗಳನ್ನು ಏರ್ಪಡಿಸುತ್ತಾರೆ.

ಕಾರ್ತಿಕ ಮಾಸದಲ್ಲೂ ಅಷ್ಟೇ; ಒಂದು ದಿನ ಊರಿನ ದೇವರಿಗೆ ದೀಪದ ಆರಾಧನೆ ಮಾಡಿಸುತ್ತಾರೆ.

ಇವರು ಲಗ್ನವಾಗುವಾಗ ಹೆಣ್ಣಿಗೆ ಇಂತಿಷ್ಟು ತೆರ ಕೊಟ್ಟು ಲಗ್ನವಾಗುತ್ತಾರೆ. ಕಾರಣ ಈ ಜಾತಿಯಲ್ಲಿ ಸ್ತ್ರೀಯರಿಗಿಂತ ಪುರುಷರೇ ಜಾಸ್ತಿ. ಹೆಣ್ಣುಗಳ ಅಭಾವದಿಂದ ಹೆಣ್ಣಿಗೇ ತೆರ (ಹಣ) ವಧುದಕ್ಷಿಣೆ ಕೊಡಲೇಬೇಕು. ಇಲ್ಲದಿದ್ದಲ್ಲಿ ಅವನಿಗೆ ಹೆಣ್ಣು ಕೊಡುವುದಿಲ್ಲ. ಹಣ ತೆರಲು ಶಕ್ತನಲ್ಲದವನು ಗೃಹಸ್ತನಾಗದೇ ಹಾಗೇ ಉಳಿಯಬೇಕು.

ಇವರು ಮಳೆಗಾಲದಲ್ಲಿ ಇಳಿಜಾರಾದ ಗುಡ್ಡಗಳಲ್ಲಿ ಹಿಂಡುಗಳನ್ನೆಲ್ಲ ಸ್ವಚ್ಛಮಾಡಿ ರಾಗಿ, ಕುಂಬಿ ಬೇಸಾಯವನ್ನು ಮಾಡುವರು. ಅಲ್ಲದೆ ಕಾಯಿಪಲ್ಲೆ, ಭತ್ತ, ಕಬ್ಬುಗಳನ್ನು ಬೆಳೆಯುವರು. ತೋಟಗಾರಿಕೆಯಲ್ಲೂ ಪಳಗಿದವರು. ಇವರು ಕಠಿಣವಾದ ಕೆಲಸಗಳನ್ನು ಅಚ್ಚುಕಟ್ಟಾಗಿ ಮಾಡುವುದರಲ್ಲಿ ನಿಪುಣರು. ಇವರು ಮನೆ ಕಟ್ಟುವುದರಲ್ಲೂ, ಹುಲ್ಲಿನ ಹಾಸಿಗೆ (ಚಾಪೆ) ನೇಯುವುದರಲ್ಲೂ, ಬೆತ್ತದ ಬುಟ್ಟಿಗಳನ್ನು ತಯಾರಿಸುವುದರಲ್ಲೂ, ನಾರಿನ ಹಗ್ಗಗಳನ್ನು ತಯಾರಿಸುವುದರಲ್ಲೂ ನಿಸ್ಸೀಮರು. ಇದು ಇವರ ಗ್ರಾಮೋದ್ಯೋಗದ ಹೆಗ್ಗುರುತಾಗಿದೆ. ಕೃಷಿಯಲ್ಲೂ ತುಂಬಾ ನಿಪುಣರು. ಮರ ಹತ್ತುವ ಉದ್ಯೋಗದಲ್ಲೂ ಅಷ್ಟೇ.

ಇವರು ಆಗಾಗ ಬೇಟೆಯಾಡಿ ದೊರೆತ ಮಾಂಸ ಚರ್ಮಗಳನ್ನೆಲ್ಲ ಎಲ್ಲರೂ ಹಂಚಿ ಔತಣಮಾಡಿ ಕುಣಿಯುತ್ತಾರೆ. ಚರ್ಮಗಳಿಂದ ತಮಗೆ ಬೇಕಾದಂತಹ ಗುಮ್ಮಟೆ ಡೋಲುಗಳನ್ನು ತಯಾರಿಸಿಕೊಳ್ಳುತ್ತಾರೆ. ಬೇಟೆಗೆ ಇವರು ಹೊಲ ಎಂದು ಹೇಳುತ್ತಾರೆ. ಅಲ್ಲದೇ ಕೆಲವು ವನೌಷಧ್ಯಗಳನ್ನು ಸಂಗ್ರಹಿಸಿ ಮಾರುತ್ತಾರೆ. ಉದಾ : ಪುನುಗು, ದಂತ, ಎಲುಬು ಇತ್ಯಾದಿ. ಪುನಗೆಂದರೆ ಅಡವಿಯ ಬೆಕ್ಕಿನ ಮಲ. ಇದು ಸಿಡುಬು ಮೊದಲಾದ ರೋಗಗಳಿಗೆ ರಾಮಬಾಣ. ಕೆಲವು ಪ್ರಾಣಿಗಳ ದಂತ, ಎಲುಬುಗಳು ಕೆಲವು ರೋಗಗಳಿಗೆ ದಿವ್ಯೌಷಧ.

ಇವರು ಹಲವು ರೋಗಗಳಿಗೆ ಔಷಧಗಳನ್ನೂ ಕೊಡಬಲ್ಲ ವೈದ್ಯರೂ ಹೌದು. ದನ (ಪಶು)ಗಳಿಗೂ ಮನುಷ್ಯರಿಗೂ ಕೆಲವು ರೋಗಗಳಿಗೆ ಔಷಧ ಕೊಡುತ್ತಾರೆ.

ಪಶುಗಳಿಗೆ ವಿಶೇಷ ಕಾಯಿಲೆಯಾದರೆ ಇವರು ಗಿಡಮೂಲಿಕೆ ಔಷಧಗಳಿಂದಲೇ ಗುಣಪಡಿಸುತ್ತಾರೆ. ವಾತ (ಗಾಳಿ) ರೋಗ ಬಂದ ಮನುಷ್ಯರಿಗೆ ಹಾಗೂ ವಿಷ ಬಿದ್ದವರಿಗೆ (ಮದ್ದು) ಕೊಡುವ ಔಷಧವು ಸೋಜಿಗವು ತೀವ್ರ ಫಲಕಾರಿಯೂ ಆದುದು. ಆಧುನಿಕ ಪದವಿಗಳಿಸಿದ ವೈದ್ಯರಿಗಿಂತ ಈ ವಿಷಯಗಳಲ್ಲಿ ಈ ಗೌಡರೇ ಮೇಲು.

ಉಡುಪು ಆಭರಣ – ಗಂಡಸರು ಉದ್ದವಾದ ಚಾಲಗಚ್ಚೆಯನ್ನು ಹಾಕುತ್ತಾರೆ. ಕೆಲವು ಸಲ ಮುಂಗಚ್ಚೆಯನ್ನೂ ಧರಿಸುತ್ತಾರೆ. ತಲೆಗೆ ರುಮಾಲು ತೊಟ್ಟು ಹೆಗಲಿಗೆ ಕಂಬಳಿ, ಟೊಂಕದಲ್ಲಿ ಒಂದು ಕತ್ತಿ ಹಾಗೂ ಕವಳದ ಸಂಚಿ (ತಾಂಬೂಲದ ಚೀಲ) ಇದ್ದೇ ಇರುತ್ತವೆ. ಇವ

ರಿಗೆ ವೀಳ್ಯ (ಕವಳ) ಹಾಗೂ ಚಹ ಎಂದರೆ ಪಂಚಪ್ರಾಣ. ಊಟ ಬಿಟ್ಟಾದರೂ ಇರಬಲ್ಲರು. ಆದರೆ ಈ ಚಹ, ವೀಳ್ಯಗಳು ಬೇಕೆ ಬೇಕು. ಗಂಡಸರು ಉದ್ದ ತೋಳಿನ ಅಂಗಿ (ಶರ್ಟ್) ಯನ್ನು ತೊಡುತ್ತಾರೆ. ಕಿವಿಗೆ ಬಂಗಾರದ ಕೊಪ್ಪು (ಅವರು ಮುರವೆಂದೆನ್ನುತ್ತಾರೆ) ಬಲಗೈಗೆ ಬೆಳ್ಳಿಯ ಕರಗವನ್ನು ತೊಡುತ್ತಾರೆ.

ಹೆಂಗಸರು ಕೊರಳ ತುಂಬ (ಕೆಂಪು–ಕಪ್ಪು) ಮಣಿಯ ಸರಗಳನ್ನು ಧರಿಸುತ್ತಾರೆ. ಅವರಿಗೆ ಇದರಲ್ಲಿ ಪ್ರೀತಿ ಜಾಸ್ತಿ. ಬೆಳ್ಳಿಯ ಹಾರಗಳನ್ನು ವಿಶೇಷ ದಿನಗಳಲ್ಲಿ ಧರಿಸುತ್ತಾರೆ. ಮಣ್ಣಿನ ಬಳೆಗಳನ್ನೋ ಕರ್ಪೂರದ ಬಳೆಗಳನ್ನೋ ಬೆಳ್ಳಿಯ ದೊಡ್ಡ ಬಳೆಗಳನ್ನೋ ಧರಿಸಿ ಕಾಲಿಗೆ ಉಂಗುರ (ಬೆರಳಿಗೆ) ಧರಿಸುತ್ತಾರೆ. ಇವರು ಹಣೆಗೆ ಕುಂಕುಮವಿಟ್ಟು ಮುಡಿ ಕಟ್ಟುವುದು ವಿಶೇಷ. ಇವರು ಸಹ ತಮ್ಮ ಜನಾಂಗದ ಗಂಡಸರಿಗೆ ಎಲ್ಲ ರಂಗದಲ್ಲೂ ನೆರವಾಗುತ್ತಾರೆ. ಆದರೆ ವಿವಾಹ ವಿಚ್ಛೇದನ, ವ್ಯಭಿಚಾರ ಇವರಲ್ಲಿ ಜಾಸ್ತಿ. ಇವರು ಒನಕೆ ಹಾಡನ್ನು (ಭತ್ತ ಕುಟ್ಟುವ), ಮದುವೆ ದಿಬ್ಬಣದ ಹಾಡನ್ನು ಸೊಗಸಾಗಿ ಹಾಡುತ್ತಾರೆ. ಇವರು ಹುಲ್ಲಿನ ಹಾಸಿಗೆಯನ್ನು ನೇಯುವುದರಲ್ಲಿ ನಿಪುಣರು. ಇವರಿಗೆ ಗಾಡತಿಯರು ಎನ್ನುತ್ತಾರೆ. ಇವರು ಯಾವಾಗಲೂ ಕುಪ್ಪಸ ತೊಡುವುದಿಲ್ಲ. ಸೀರೆಯನ್ನೇ ಹೆಗಲ ಹಿಂಭಾಗಕ್ಕೆ ಜೋಲುವಂತೆ ಕಟ್ಟುತ್ತಾರೆ. ಇದಕ್ಕೆ ನಮ್ಮ ಕಡೆ ಕತ್ತರಿ ಉಡುಗೆ ಎಂದು ಹೇಳುವ ವಾಡಿಕೆ. ಇವರ ಉಡಿಗೆಯು ಸಿನೇಮಾಗಳಲ್ಲಿ ರೂಢಿಯಲ್ಲಿ ಬಂದಿದ್ದು ನವಯುಗದ (ಫೆಶನ್) ಉಡುಪುಗಳಲ್ಲೊಂದಾಗಲಿದೆ. ಹಬ್ಬದ ದಿನಗಳಲ್ಲಿ ಹಾಡುವ ಲಾವಣಿಗಳು ಸೊಗಸಾಗಿದ್ದು ಕೇಳಲು ಇಂಪಾಗಿರುತ್ತವೆ.

ಧಾರ್ಮಿಕ ಜೀವನ–ಇವರು ಮೂಢ ನಂಬಿಕೆಯಲ್ಲಿ ತುಂಬಾ ಶ್ರದ್ಧೆಯುಳ್ಳವರು. ಈ ನಂಬಿಕೆಯಿಂದಲೇ ಸಮಾಜದಲ್ಲಿ ದಯೆ, ಭಯಗಳೊಡಗೂಡಿದ ಸಮ್ಮಿಶ್ರ ಬಾಳನ್ನು ಬಾಳಲು ನೆರವಾದದ್ದು. ಗುರು ಹಿರಿಯರಲ್ಲಿ ಸುಶಿಕ್ಷಿತರಲ್ಲಿ ಭಕ್ತಿ ಭಾವಗಳು ಒಡಮೂಡಿ ಸಮಾಜದಲ್ಲಿ ಮಾನವನಂತೇ ಬಾಳುವಲ್ಲಿ ಈ ನಂಬಿಕೆಯ ಪಾತ್ರ ಮುಖ್ಯವಾದದ್ದು. ಅತ ಅಶಿಕ್ಷಿತನಾಗಿದ್ದರೂ ದಯಾ, ದಾಕ್ಷಿಣ್ಯಪರ, ತನ್ನಂತೇ ಪರರೆಂಬ ಭಾವನೆ; ಜಗತ್ತಿನಲ್ಲಿ ಮಾನವನೇ ಸರ್ವ ಶ್ರೇಷ್ಠ (ಶಕ್ತ) ನಲ್ಲವೆಂದೂ ದೇವರೇ ಶಕ್ತಿಯುತ (ಬಲಶಾಲಿ)–ಎಂಬೀ ನಂಬಿಕೆಗಳು ಮುಖ್ಯವಾದದ್ದು.

ಉಚ್ಚಿಷ್ಟ ದೇವತೆಗಳಾದ ದೈವ, ಭೂತ, ಪಿಶಾಚಿ, ಮಾಸ್ತಿ (ಮಹಾಸತಿ), ಜಟಗ (ಜಟ್ಟಿಗ), ಚೌಡಿ (ಚಾಮುಂಡಿ) ಗಳೇ ಇವರ ಆರಾಧ್ಯ ದೇವತೆಗಳು. ಆದರೆ ತುಳಸಿಯನ್ನೂ ವಿಶೇಷವಾಗಿ ನಂಬುತ್ತಾರೆ. ಅದಕ್ಕೆಂದೇ ವಿಶೇಷ ಪೂಜಾರಿ ಇರುತ್ತಾನೆ. ಪ್ರತಿ ಮನೆಯಲ್ಲೂ ತುಳಸಿಕಟ್ಟೆ ಇದ್ದು ಅದನ್ನು ಚೆನ್ನಾಗಿ ಸಿಂಗರಿಸಿ ಪೂಜಿಸುತ್ತಾರೆ. ವಿಶೇಷ ಹಬ್ಬದಿನಗಳಲ್ಲಿ ಆ ಪೂಜಾರಿಯೇ ತುಳಸಿ ಪೂಜೆ ಮಾಡುತ್ತಾನೆ. ಗೋಪೂಜೆಗಳಲ್ಲಿ ವಿಶೇಷ ಆಸಕ್ತಿ ಇದ್ದು ಆ ದಿನ ಎಲ್ಲ ಪಶುಗಳನ್ನು ಬಣ್ಣದಿಂದ ಸಿಂಗರಿಸಿ, ಕೊರಳಿಗೆ ಹೂಹಾರ, ಅಡಿಕೆ, ಎಲೆಗಳನ್ನೂ ಜೊತೆಗೆ ರೊಟ್ಟಿಯ ಹಾರಗಳನ್ನೂ ತೊಡಿಸಿ, ಅವಕ್ಕೆಲ್ಲಾ ಅನ್ನ, ದೋಸೆಗಳನ್ನು ತಿನ್ನಿಸಿ, ಪೂಜಿಸಿ ವಾದ್ಯಗಳೊಡನೆ ಗೋವುಗಳನ್ನು ಬಿಡುತ್ತಾರೆ. ಇದೂ ಒಂದು ಹಿಂದೂ ಸಂಸ್ಕೃತಿಯ ಮಹತ್ವದ ಘಟ್ಟ.

ಇವರು ದೆವ್ವ, ಭೂತಗಳಿಗೆ ಕೋಳಿ, ಕುರಿಗಳನ್ನು ಅದರ ತೃಪ್ತಿಗೋಸ್ಕರ ಬಲಿಕೊಡುತ್ತಾರೆ. ಏನಾದರೂ ರೋಗ ತಗಲಿದರೆ ಅದು ದೆವ್ವಗಳ ಪವಾಡವೆಂದು ತಿಳಿದು ದೇವತೆಗಳನ್ನು ಸ್ತುತಿಸುವುದು, ರಕ್ತಬಲಿಕೊಡುವದು, ಮೋಡಿ ಮಾಟಗಳನ್ನು ಮಾಡಿಸುವುದು ರೂಢಿ. ಇಂಥ ಸಮಯಗಳಲ್ಲಿ ಔಷಧೋಪಚಾರ ಮಾಡಿಸದೇ ಅನೇಕ ಜನರನ್ನು ಬಲಿಕೊಡುವುದೂ ಉಂಟು. ಸಿಡುಬು, ಜ್ವರಗಳು ಬಂದಾಗಲೂ ಮಾರಿಯಮ್ಮನಿಗೆ ಹರಿಕೆ ಹೊರುತ್ತಾರಲ್ಲದೆ 'ನೋಟ' ನೋಡಿಸುವದು ವಿಶೇಷ. ಮಾಟಗಾರನಿಂದ ಪ್ರಶ್ನೆ ಉಪಪ್ರಶ್ನೆಗಳಾಗಿ ತೀರ್ಮಾನಕ್ಕೆ

ಬರುತ್ತಾರೆ. ಅವನು ಹೇಳಿದಂತೆ ದೆವ್ವಗಳಿಗೆ ಸಂತೃಪ್ತಿ ಮಾಡುತ್ತಾನೆ ಮನೆಯ ಯಜಮಾನ. ಆಗ ಅಂಬರದೇವತೆ, ಜಲದೇವತೆ, ಬಾಳ್ಯದೇವತೆ, ಹೆಣ್ಣಗೋತಿದೆವ್ವ, ರಾಹು, ಮುರ್ಚು (ಮೃತ್ಯು) ಗಳಿಗೆಲ್ಲ ಕಂಬದ ಬಲಿಯೋ ವಗ್ಯೆರೆ ನಡೆಯುತ್ತದೆ. ಕೆಮ್ಮು ಬಂದರೂ ಸಹ ನೋಟ ಚಿಕಿತ್ಸೆ ನಡೆಯುತ್ತದೆ. ಅಲ್ಲದೆ ಅನ್ನದ ಬಲಿಯಲ್ಲಿ ದೊಡ್ಡ ದೊಡ್ಡ ಜುಂಜಿ (ಹಿಲಾಲು) ಗಳನ್ನು ಉರಿಸುತ್ತಾರೆ.

ಇವರು ವಿಶೇಷವಾಗಿ ಪಾತ್ರೆಗಳಲ್ಲಿ ಮಣ್ಣಿನ ಪಾತ್ರೆಗಳನ್ನೇ ಉಪಯೋಗಿಸುತ್ತಾರೆ. ಇದು ಆರೋಗ್ಯದ ದೃಷ್ಟಿಯಿಂದ ಒಳ್ಳೆಯದು. ಹುಲ್ಲಿನ ಮನೆಗಳಲ್ಲಿ ವಾಸಿಸುತ್ತಾರೆ. ತುಂಡು ಪಂಚೆಯಲ್ಲೇ ಇರುತ್ತಾರೆ. ಇದರಿಂದ ಶರೀರಕ್ಕೆ ಚೆನ್ನಾಗಿ ಗಾಳಿ ತೆಗೆದುಕೊಂಡು ಶರೀರ ಸ್ವಾಸ್ಥ್ಯವ ಕಾದುಕೊಳ್ಳುತ್ತಾರೆ.

ಈ ಜನಾಂಗದ ಪ್ರತಿಯೊಬ್ಬರೂ ಮಕ್ಕಳಾದ ಮೇಲೆ ಒಂದು ವರ್ಷದೊಳಗೇ ಅವರ ಜನರನ್ನೆಲ್ಲ ಕರೆದು ಊಟಹಾಕುತ್ತಾರೆ. ಇದಕ್ಕೆ ಅಮೆ ಪಾಯಸ (ಪಾಚ) ಎಂದು ಅವರು ಹೇಳುತ್ತಾರೆ. ಇದನ್ನು ಕಡ್ಡಾಯವಾಗಿ ಮಾಡಲೇ ಬೇಕು. ತಪ್ಪಿದಲ್ಲಿ ದಂಡವನ್ನು ವಿಧಿಸಲಾಗುತ್ತದೆ.

ಅಲ್ಲದೆ ಶ್ರಾವಣ ಮಾಸದಲ್ಲಿ ಪ್ರತಿ ಶನಿವಾರ (ಸೋಣೆ ಶನಿವಾರ ಎಂದೂ) ಆ ಮಾಸದ ಇನ್ನಿತರ ದಿನಗಳಲ್ಲೂ ಕನ್ನೆ ಮಕ್ಕಳ ಊಟ ಎಂದು ಎಲ್ಲ ಸ್ತ್ರೀಯರನ್ನು, ಹೆಣ್ಣು ಹುಡುಗರನ್ನು ಕರೆಯುತ್ತಾರೆ. ಅವರಿಗೆಲ್ಲಾ ದುಡ್ಡು, ಹೂ, ಹಣ್ಣುಗಳನ್ನು ಕೊಡುತ್ತಾರೆ. ಕುಂಕುಮ ವಿಟ್ಟು ಹೂ ಕೊಡುವ ರೂಢಿಯಿದೆ.

ಆಗ ಹಾಡುವ ಹಾಡು ಸೊಗಸಾಗಿರುತ್ತದೆ.

ಉದಾ : – ಹಾಡೇ ಲಾಡೇಲಿ
ಬಾಯೆಲ್ಲ ಸಪೆ ಬಂತು,
ತಾರೊ ಮದುವಣ್ಣ
ಎಲೇ ಅಡುಕೆ !

ಅಲ್ಲದೆ – ಅಂಗಳ ಸಾಸಿರಿ,
ರಂಗೋಲಿ ಎಳೆಹೊಯ್ಯ,
ಅಂಬೆ ನಿನ್ನ ಮುಗುಳೇ ಹೋಯ್ !

ಎಂಬವುಗಳನ್ನು ಹಾಡಿನಲಿಯುತ್ತಾರೆ.

ದೀಪಾವಳಿಯಲ್ಲಿ ಮನೆಯನ್ನೆಲ್ಲ ಸಿಂಗರಿಸಿ ಮಣ್ಣಿನ ಪಾತ್ರೆಗಳನ್ನೂ ಸಿಂಗರಿಸಿ, ಬಲೀಂದ್ರನನ್ನು ಪೂಜಿಸುತ್ತಾರೆ. ತುಳಸಿ ಹುಣ್ಣಿಮೆಯಲ್ಲಿ ವಿಶೇಷ ವೆಚ್ಚ ಮಾಡಿ ಪಟಾಕಿಗಳನ್ನೋ ಮದ್ದುಗಳನ್ನೋ ಸುಟ್ಟು ಆನಂದದಿಂದ ತುಳಸಿ ಪ್ರದಕ್ಷಿಣೆ ಹಾಕುತ್ತ ಪೂಜೆಮಾಡಿ "ಲಕ್ಷ್ಮಿ ರಾಮರಾಮ ಗೋವಿಂದಾ ಗೋವಿಂದಾ" ಎಂತಲೂ "ಸ್ವಾಮೀರಾಮರಾಮಗೋವಿಂದಾ ಗೋವಿಂದಾ" ಎಂತಲೂ ಹರ್ಷದಿಂದ ಆಬಾಲವೃದ್ಧರೆಲ್ಲ ಸೇರಿ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ.

ಪ್ರತಿ ವರ್ಷಕ್ಕೊಮ್ಮೆ ಬ್ರಹ್ಮನ ಪೂಜೆಯನ್ನು ವಿಶೇಷ ವಾದ್ಯಗಳೊಡನೆ ನೆರವೇರಿಸುತ್ತಾರೆ. ಆಗ ಆ ದೇವರಿಗೆ ಕುರಿ, ಕೋಳಿಗಳನ್ನು ಬಲಿಕೊಡುತ್ತಾರೆ. ಇದಕ್ಕೆಂದೇ ವಿಶೇಷ ಪೂಜಾರಿ (ಗುನಗರು ಎಂತ ಹೇಳುತ್ತಾರೆ) ಇರುತ್ತಾರೆ. ನಂತರ ಊರ ಹಾಗೂ ಬೆಳೆಗಳ ರಕ್ಷಣೆ

ಗೋಸ್ಕರ ಕೀಳಿಪೂಜೆ ಎಂತ ಮಾಡುತ್ತಾರೆ. ಅನ್ನ ಹಾಗೂ ಇನ್ನಿತರ ಬಲಿಕೊಡುತ್ತಾರೆ. ಇದರಿಂದ ನಿಜಕ್ಕೂ ಬೆಳೆಗೆ ತಗುಲಿದ ಕ್ರಿಮಿ ಕೀಟವೆಲ್ಲ ಸಾಯುತ್ತವೆ. ಇದು ಒಂದು ಆಶ್ಚರ್ಯ ವಿಷಯ.

ಈ ಜನಾಂಗದಲ್ಲಿ ಕೆಟ್ಟಚಾಳಿ ಎಂದರೆ ಮದ್ದು ಹಾಕುವುದು. ಯಾರಾದರೂ ಒಳ್ಳೆಯ ಸ್ತ್ರೀ ಅಥವಾ ಪುರುಷರಿದ್ದರೆ ಎಂದರೆ ದೃಢಕಾಯರಿದ್ದು ಸಮಾಜದಲ್ಲಿ ಪ್ರತಿಷ್ಠಿತ ವ್ಯಕ್ತಿಗಳಿದ್ದರೆ ಅವರಿಗೆ ತಿಳಿಯದಂತೆ ಚಹಾದಲ್ಲೊ, ತಿಂಡಿಯಲ್ಲೋ, ಅನ್ನದಲ್ಲೋ ಹಾಕುತ್ತಾರೆ ಆದರದಿಂದ ಮನೆಗೆ ಕರೆದು. ನಂತರ ಎರಡು ಮೂರು ತಿಂಗಳುಗಳಲ್ಲೇ ಮದ್ದು ಬಿದ್ದ ವ್ಯಕ್ತಿ ನಿಸ್ತೇಜನಾಗಿ ಮೂಲ ವ್ಯಕ್ತಿತ್ವ, ಶರೀರದ ದಾರ್ಢ್ಯತೆ ಕಳೆದುಕೊಂಡು ಕ್ಷೀಣನಾಗುತ್ತಾನೆ. ಅದಕ್ಕೆ ಕೂಡಲೇ ಚಿಕಿತ್ಸೆ ಮಾಡದಿದ್ದಲ್ಲಿ ನರಳುತ್ತ 5-6 ತಿಂಗಳುಗಳಲ್ಲೇ ಸಾಯುತ್ತಾನೆ. ಈ ಔಷಧಕ್ಕೆ ಇದೇ ಜನಾಂಗದ ವ್ಯಕ್ತಿಗಳು ಪ್ರತಿ ಮದ್ದು ಕೊಟ್ಟು ಕಾರಿಸುವವರೂ ಇದ್ದಾರೆ. ಮದ್ದು ಬಿದ್ದ ವ್ಯಕ್ತಿಗೆ ಹೊಟ್ಟೆಯಲ್ಲಿ ಒಂದು ತರದ ಪ್ರಾಣಿ ಬೆಳೆಯುತ್ತದೆಯಂತೆ. ಅದಕ್ಕೆ ಕೂದಲುಗಳಿದ್ದು ಓತಿಕಾಟದಂತಿರುತ್ತದೆ. ಈ ಮದ್ದು ಹಾಕುವದರಿಂದ ಅವರ (ವಿಷ ಹಾಕುವವರ) ಸಂತಾನ ಅಭಿವೃದ್ಧಿಯಾಗುತ್ತದೆಂಬ ಮೂಢನಂಬಿಕೆ ಇಂದಿಗೂ ಕೆಲವೆಡೆ ಉಳಿದಿದೆ. ಈ ಕೆಲಸವನ್ನು ಕೆಲವೇ ಹೆಂಗಸರು ಮಾಡುತ್ತಾರಂತೆ. ಬತ್ತಲೆಯಲ್ಲಿ ರಾತ್ರಿಯಲ್ಲಿ ಹೋಗಿ ಯಾರಿಗೂ ಕಾಣದಂತೆ ಆ ಪ್ರಾಣಿ (ಓತಿಕಾಟದಂತಹ) ಯನ್ನು ಹಿಡಿದು ಪಾತ್ರೆಯಲ್ಲಿ ಬೇಯಿಸಿ ಅದರಿಂದ ದೊರಕುವ ವಿಷವನ್ನು ಸಂಗ್ರಹಿಸಿ ಒಣಗಿಸುತ್ತಾರಂತೆ. ಅದನ್ನೇ ಸಂದರ್ಭ ಬಂದಾಗ ಬಳಸುತ್ತಾರಂತೆ. ಈ ಮದ್ದು ಬಿದ್ದವರಿಗೆ ಕೆಲವೊಂದು ಲಕ್ಷಣ ಕಂಡುಬರುತ್ತದೆಯಂತೆ. ಆಗ ಖಾತ್ರಿಯಾಗಲು ನುಗ್ಗಿ ಗಿಡದ ಎಲೆಯನ್ನು ಅಂಗೈಮೇಲೆ ಹಿಂಡಿದರೆ ಅದರ ರಸವು ಗಟ್ಟಿಯಾಗಿ ಗುಳಿಗೆಯಾಗುತ್ತದಂತೆ. ಆಗ ಖಂಡಿತ ವಿಷ ಬಿದ್ದಿದೆ. ಎಂತ ತಿಳಿಯಲಡ್ಡಿಯಿಲ್ಲವಂತೆ. ಈ ವಿಷವನ್ನು ವಾಂತಿಯಾಗಿಸಿಯೋ ಅಥವಾ ಶಸ್ತ್ರಚಿಕಿತ್ಸೆಯಿಂದಲೋ ಮಾತ್ರ ಹೊರಗೆ ತೆಗೆಯಬಹುದು. ಈ ಜನಾಂಗದಿಂದಲೇ ಇನ್ನಿತರ ಜನಾಂಗವು ವಿಷ ಹಾಕುವ ಪದ್ಧತಿಯನ್ನು ಕಲಿತಂತಿದೆ. ಇದು ಮಾತ್ರ ಮಹಾ ಮೋಸ ಕೃತ್ಯ, ಅತಿಹೇಯವಾದುದು.

ಇವರು ಸತ್ತ ಜನರನ್ನು ಹೂಳುವದು ಜಾಸ್ತಿ. ಈ ಜನಾಂಗದ ಜನರೆಲ್ಲ ಒಟ್ಟಾಗಿ ಒಂದು ಪ್ರತ್ಯೇಕ ಸ್ಥಳದಲ್ಲಿ ಊರ ಹೊರಗೆ ಒಯ್ದು ಹೂಳುತ್ತಾರೆ. ಮನೆಗೆ ಸಂಬಂಧಪಟ್ಟವರು ಕೆಲದಿನ ಸೂತಕ ಇದ್ದು ಅವರ ಸಂಸ್ಕಾರ ಮಾಡುತ್ತಾರೆ. ಸತ್ತವರ ಆತ್ಮಕ್ಕೆ ತೃಪ್ತಿಗಾಗಿ ವಾರ್ಷಿಕವನ್ನು ಆಚರಿಸಲಾಗುತ್ತದೆ.

ಇವರಿಗೆ ಭಾರ ಬರುವುದರಲ್ಲಿ ವಿಶೇಷ ಆಸಕ್ತಿ; ಇದಕ್ಕೆ ಮೈಮೇಲೆ ಬಂದವ ಎನ್ನುತ್ತಾರೆ. ಪೂಜಾರಿಗೋ ಇನ್ನಿತರ ಪ್ರತಿಷ್ಠಿತ ವ್ಯಕ್ತಿಗೋ ಕೆಲವೊಂದು ಹಬ್ಬ ದಿನಗಳಲ್ಲಿ ಬರುತ್ತದೆ ಭಾರ. ಆಗ ಅವನು ನುಡಿದದ್ದೇ ದೈವವಾಣಿ ಎಂದು ಆ ಜನರು ನಂಬುತ್ತಾರೆ. ಅವನು ಹೇಳಿದಂತೆ ನಡೆದುಕೊಳ್ಳುತ್ತಾರೆ. ಆಗ ಅವನಲ್ಲಿ ಪ್ರಶ್ನೋತ್ತರಗಳು ನಡೆಯುತ್ತದೆ. ಅವನಲ್ಲಿ ಸಂಸಾರಕ್ಕೆ ಸಂಬಂಧಪಟ್ಟ ವಿಷಯವನ್ನೋ ವೈಯಕ್ತಿಕವಾಗಿಯೋ ಏನಾದರೂ ಪ್ರಶ್ನೆ ಕೇಳಬಹುದು. ಆ ಸಮಯದಲ್ಲಿ ಅವರು ತಲೆಯ ಮೇಲೆ ಕಳಸವನ್ನೋ ಒಂದು ತರದ ಮುಖವಾಡವನ್ನೋ, ಹೂವಿನ ಹಾರಗಳನ್ನೋ ಧರಿಸಿ ದೇವರ ಮನೆ ಸುತ್ತ ಓಡುತ್ತಾರೆ. ಅವರ ರಕ್ಷಣೆಗೆ 2-3 ಜನರಿರುತ್ತಾರೆ. ಈ ಕಳಸ ಹೊರುವವನು ಆ ದಿನ ಉಪೋಷಯದಲ್ಲಿದ್ದು ಸ್ನಾನ ಮಾಡಿ ಪಟ್ಟೆಗಚ್ಚೆ ತೊಟ್ಟು ತಲೆಗೆ ರುಮಾಲು ಸುತ್ತಿ ಅದನ್ನು ತಲೆಯಮೇಲೆ ಕಿರೀಟದಂತೆ ಧರಿಸುತ್ತಾನೆ.

ಕಳಸವು ಭಾರವಾದ ಕಟ್ಟಿಗೆಯಿಂದ ಮಾಡಿದ್ದು ಅದು ಕಮಾನಿನ ಆಕಾರದಲ್ಲಿರುತ್ತದೆ. ಬುಡದಲ್ಲಿ ಬೆಳ್ಳಿಯ ತಂಬಿಗೆ ಇರುತ್ತದೆ. ಅದರ ಮೇಲೆ ದೇವರ ವಿಗ್ರಹಗಳು ಇರುತ್ತವೆ.

ಅದನ್ನು ಹೂವಿನಿಂದ ಸಿಂಗರಿಸುತ್ತಾರೆ. ಮೊದಲು ಅದನ್ನು ಪೂಜಿಸುತ್ತಾರೆ. ನಂತರ ತಲೆಯಲ್ಲಿ ಧರಿಸುತ್ತಾರೆ. ಅದನ್ನು ಹೊರುವ ವ್ಯಕ್ತಿಯು ಪರಂಪರಾಗತವಾಗಿ ಬಂದವನಿರಬೇಕು. ಎಲ್ಲರಿಗೂ ಈ ಅವಕಾಶವಿಲ್ಲ. ಅವನ ಮುಂದೆ ಕೈಗಳಲ್ಲಿ ಬೆತ್ತ ಹಿಡಿದ ವ್ಯಕ್ತಿ, ಮುಖವಾಡ ಧರಿಸಿದ ವ್ಯಕ್ತಿಗಳು ಇರುತ್ತಿದ್ದು ಅವರೂ ಉಪವಾಸವಿದ್ದು ಪ್ರಶ್ನೆ ಹೇಳುತ್ತಾರೆ. ಇವರೆಲ್ಲಾ ವಿಶೇಷವಾಗಿ ಹಬ್ಬದ ದಿನಗಳಲ್ಲಿ ಅವರ ಇಷ್ಟ ದೇವತೆಯ ಮುಂದೆ ಪ್ರಾಣಿ ಬಲಿ ಕೊಟ್ಟು ಅದರ ತೃಪ್ತಿ ಮಾಡುತ್ತಾರೆ. ಆಗ ಕೆಂಡ ಹಾಯುವ ಆಶ್ಚರ್ಯ ಪದ್ಧತಿಯನ್ನು ನೋಡಬಹುದು. ಕೆಂಡಗಳನ್ನು ಕಟ್ಟಿಗೆಯಿಂದಲೂ ಒಣಗಿದ ಸಗಣಿಯಿಂದಲೂ ತಯಾರಿಸಿ 8–10 ಅಡಿ ಉದ್ದ 4–5 ಅಡಿ ಅಗಲದ ವರೆಗೆ ಹಾಸಿ ಅದರ ಮೇಲೆ ಮೂರು ಪ್ರದಕ್ಷಿಣೆ ಹಾಕುತ್ತ ನಡೆಯುತ್ತಾರೆ. ಇದು ನಿಜವಾಗಿಯೂ ರಸಿಕರಿಗೆ ರಸದೂಟ. ಕಣ್ಣುಗಳಿಗೆ ಹಬ್ಬ. ಊರಿನ ಜನರ ಹಿತಕ್ಕೋಸ್ಕರ ಇಂಥ ಹಬ್ಬಗಳನ್ನು ಆಚರಿಸುತ್ತಾರೆ. ಆ ಜಾತ್ರೆಗೆ ಪರಸ್ಥಳದವರೆಲ್ಲಾ ಬಂದು ನೋಡಿ ಸಂತೋಷ ಪಡುತ್ತಾರೆ. ಆಗ ಅವರ ಆರಾಧ್ಯ ದೈವಗಳಿಗೆಲ್ಲ ಪೂಜೆ, ಬಲಿ, ಹರಕೆಗಳಿಂದ ತೃಪ್ತಿ ಮಾಡುತ್ತಾರೆ. ಇದೊಂದು ಈ ಜನಾಂಗದ ಸಂಸ್ಕೃತಿಯ ವೈಶಿಷ್ಟ್ಯ.

ಕಲೆಯ ಕೊಡುಗೆ – ಈ ಹಾಲಕ್ಕಿಗೌಡ ಜನಾಂಗದವರ ಜಾನಪದ ಕೊಡುಗೆಯು ತುಂಬಾ ಪ್ರಸಿದ್ಧವಾದುದು. ಸುಗ್ಗಿ ಕುಣಿತ, ಕೋಲಾಟ, ಹಗಣ (ಹಗರಣ) ಸಿಂಗೀಬಾಳ್ಯನ ಕಥೆ ಇವೆಲ್ಲ ತುಂಬ ಪ್ರಸಿದ್ಧವಾದವು. ಇದು ಯಕ್ಷಗಾನದಂತೆ ಪ್ರಸಿದ್ಧಿ ಪಡೆದುದು.

ಸುಗ್ಗಿ ಕುಣಿತವನ್ನು ಮೂರು ನಾಲ್ಕು ತಿಂಗಳುಗಳಿಂದಲೇ ತರಬೇತು ಪಡೆದು ಕುಣಿಯುತ್ತಾರೆ. ಇದನ್ನು ಹೋಳಿಹುಣ್ಣಿಮೆಗೆ ಐದು ದಿನಗಳಿರುವಾಗ ಪ್ರಾರಂಭಿಸಿ ಹುಣ್ಣಿಮೆಗೆ ಸರಿಯಾಗಿ ಮುಗಿಸುತ್ತಾರೆ. ಊರಿನ ಗೌಡನಿಂದ ನಿರ್ಧರಿಸಲ್ಪಟ್ಟ ನಂತರ ಹಿರೇ ಹಾಗೂ ಕಿರಿಯ ಸುಗ್ಗಿ ಒಡ್ಡು (ತಂಡ) ಗಳನ್ನು ಮಾಡುವರು. ಗೌಡ, ಕೋಲಕಾರ, ಬುದ್ಧಿವಂತರೆಲ್ಲ ಸೇರಿ ಆಯಾ ವರ್ಷಗಳಲ್ಲಿ ಹಿರೇ ಅಥವಾ ಕಿರೇ ಸುಗ್ಗಿ ಒಡ್ಡನ್ನು ಮಾಡಲು ನಿರ್ಣಯಿಸುತ್ತಾರೆ. ಹಿರೇ ಸುಗ್ಗಿ ಒಡ್ಡನ್ನು ವರ್ಷ ಬಿಟ್ಟು ವರ್ಷ ಮಾಡುತ್ತಾರೆ. ಕಾರಣ ಇದಕ್ಕೆ ಬಹಳ ಖರ್ಚು ತಗಲುತ್ತದೆ. ಈ ಜನರು ತಾವೇ ವರ್ಗಣಿ ಎತ್ತಿ ಎಲ್ಲ ಖರ್ಚುಗಳನ್ನು ವಹಿಸಿಕೊಳ್ಳುತ್ತಾರೆ. ಬಣ್ಣ ಆಭರಣಗಳು, ಸಲಕರಣೆಗಳು, ಇನ್ನಿತರ ವಸ್ತ್ರ, ಪೊಗಡೆಗಳು, ಕಿರೀಟ, ತುರಾಯಿ ಮುಂತಾದವು (ತುರಾಯಿ ಚಿಂದಿಯಿಂದ ಮಾಡಲ್ಪಟ್ಟ ಹೂಕಡ್ಡಿಗಳಿಂದ ಕೂಡಿದ್ದು ಕಮಾನಾಕೃತಿಯಲ್ಲಿರುತ್ತದೆ. ಬುಡಕ್ಕೆ ಬೆತ್ತದಿಂದ ಮಾಡಲ್ಪಟ್ಟ ಪೀಠ ಇರುತ್ತದೆ. ಜರಿ, ಬಣ್ಣದ ತಗಡುಗಳಿಂದಲೂ ಸಿಂಗರಿಸುತ್ತಾರೆ). ಈ ತುರಾಯಿಗಳನ್ನು ತಲೆಗೆ ರುಮಾಲು ಸುತ್ತಿ ಒಂದೆಡೆ ಉದ್ದ ಜಡೆಯಂತೆ ಇಳಿಬಿಟ್ಟು ಬಿಗಿಯಾಗಿ ಕಟ್ಟಿಕೊಳ್ಳುತ್ತಾರೆ. ಕೊರಳಲ್ಲಿ ಉದ್ದುದ್ದ ಬೆಂಡಿನಹೂಮಾಲೆ ಧರಿಸುತ್ತಾರೆ. ಕೆಲಜನರು ಕಿರೀಟ ಪೊಗಡೆಗಳನ್ನೆಲ್ಲ ಕಟ್ಟಿ ರಾಜರಂತೆ ಆಭರಣ, ಭುಜಹಾರ, ಗಳನ್ನೆಲ್ಲಾ ಧರಿಸಿ ಮುಖಕ್ಕೆಲ್ಲ ಬಣ್ಣದಿಂದ ಸಿಂಗಾರ ಮಾಡಿಕೊಳ್ಳುತ್ತಾರೆ. ಇನ್ನಿತರರು ಚಾರಕ, ಹನುಮಂತ, ಕರಡಿ, ಕಳ್ಳ, ಸೆರೆಗುಡುಕ, ಸ್ತ್ರೀ, ರಾಕ್ಷಸಿಯರ ಪಾತ್ರಗಳನ್ನೆಲ್ಲ ಹಾಕುತ್ತಾರೆ.

ಇವರೆಲ್ಲ ಹೆಜ್ಜೆ ತಪ್ಪದೆ ತಾಳಕ್ಕೆ ತಕ್ಕಂತೆ ಕುಣಿಯುತ್ತಾರೆ. ಹೆಜ್ಜೆ ತಪ್ಪಿದಲ್ಲಿ ದಂಡ ವಿಧಿಸಲಾಗುತ್ತದೆ. ಇದಕ್ಕೆ ಹಿನ್ನೆಲೆಯಾಗಿ ಕವಿ (ಹಾಡುಗಾರ) ಇರುತ್ತಾನೆ. ಅವನು ಹೇಳಿಕೊಟ್ಟ ಭಜನೆಯನ್ನೋ ಹಾಡನ್ನೋ ಈ ಒಡ್ಡಿನವರೆಲ್ಲ ಹೇಳುತ್ತಾ ಕುಣಿಯುತ್ತಾರೆ. ಮೃದಂಗ, ಡೋಲು, ಗುಮ್ಮಟೆ, ಜಾಗಟೆ ತಾಳಗಳನ್ನೆಲ್ಲ ಮಟ್ಟದಂತೆ ಬಾರಿಸುತ್ತಾರೆ. ತುರಾಯಿ ಕಟ್ಟಿದವರೆಲ್ಲ ಒಂದು ಕೈಯಲ್ಲಿ (ಎಡಗೈಯಲ್ಲಿ) ನವಿಲುಗರಿಯಿಂದ ಮಾಡಿದ ಕುಂಚವನ್ನು ಹಿಡಿದು ಇನ್ನೊಂದು (ಬಲಗೈ) ಕೈಲಿ ಸಣ್ಣ ಕೋಲನ್ನು ಹಿಡಿದು ಕುಂಚದ ಬುಡಕ್ಕೆ ಹೆಜ್ಜೆಗೆ ಸಮನಾಗಿ ಬಡಿಯು

ತ್ತಾರೆ. ಆ ಕುಂಚದ ಬುಡವು ಬತ್ತಳಿಕೆಯ ಹಾಗೆ ಇರುತ್ತದೆ. ಇದನ್ನು ಬಿದಿರಿನಿಂದ ತಯಾರಿಸುತ್ತಾರೆ. ಆಗ ಅವರೆಲ್ಲ ಕಮಾನಾಕೃತಿಯಲ್ಲಿ ತಿರುಗು ಮುರುಗಾಗಿಯೂ ಜೋರಾಗಿ ಕುಣಿಯುತ್ತಾರೆ. ಆಗ ನಿಜಕ್ಕೂ ಇದು ಸೊಗಸಾಗಿ ಕಾಣುತ್ತದೆ.

ಗುಮ್ಮಟೆ ಎಂದರೆ ಮೃದಂಗದಂತೆ ಇರುವ ಉದ್ದನೆಯ ಪಾತ್ರಕ್ಕೆ ಒಂದೆಡೆ ಮಾತ್ರ ಪ್ರಾಣಿಗಳ ಚರ್ಮದಿಂದ ಹೊದಿಕೆ ಮಾಡಿ ಇನ್ನೊಂದೆಡೆ ಎಡಗೈ ಇಟ್ಟು ಬಾರಿಸುತ್ತಾರೆ. ಅದು ಒಂದು ತರದ ಒಳ್ಳೆಯ ಸ್ವರವನ್ನು ಕೊಡುತ್ತದೆ. ಇವರೆಲ್ಲ ಅನುಭವಿಕರಿರುತ್ತಾರೆ.

"ವ್ಹೋ ಹೋ ಸೋ ಸೋ ಹೋಯ್" ಎಂದು ಹಾಡುತ್ತ ಹೆಜ್ಜೆ ತಪ್ಪದೇ ಕುಣಿಯುತ್ತಾರೆ. ಕಾಲಿಗೆ ಗೆಜ್ಜೆ ಇರುತ್ತದೆ. ಮೊದಲಿನ ಕುಣಿತವನ್ನು ಗ್ರಾಮ ದೇವಸ್ಥಾನದಲ್ಲಿ ಕುಣಿದು ಅವರವರ ಮನೆಗಳ ತುಳಸಿ ಕಟ್ಟೆಯ ಮುಂದೆ ಕುಣಿದು ಪರ ಊರುಗಳಿಗೆ ಹೋಗುತ್ತಾರೆ. ಪರ ಊರಿಗೆ ಹೋದಾಗಲೆಲ್ಲ ಆಯಾ ಊರಿನವರು ಅವರ ಊಟ ತಿಂಡಿಗಳಿಗೆ ಖರ್ಚನ್ನು ವಹಿಸುತ್ತಾರೆ. ಆದರ ಉಪಚಾರ ದೊರೆಯುವುದು. ಈ ಸುಗ್ಗಿ ಕುಣಿತಗಳನ್ನು ಸಿಡಿಬು ಮೈಲಿಗಳು ಬಂದಾಗ ಮಾಡುವುದಿಲ್ಲ.

ಕಿರಿಸುಗ್ಗಿ ಒಡ್ಡಿನವರು ಬೆಂಡಿನ ಹಾರಗಳನ್ನು ಕೊರಳಲ್ಲಿ ಧರಿಸಿ ಹಿಂದುಗಡೆ ರುಮಾಲವನ್ನು ಬಾಲದಂತೆ ಇಳಿಬಿಟ್ಟು ಹಿಮ್ಮೇಳದೊಂದಿಗೆ (ಕವಿ, ಗುಮ್ಮಟೆ, ಜಾಗಟೆ, ಬೆತ್ತ) "ಕೋಗಿನ ಕೋಗಿನ ಕೋಲ ಕೋಗಿನ ಕೋ" ಎಂದು ಹಾಡು ಹೇಳುತ್ತ ಆ ಜನಾಂಗದ ಎಲ್ಲಮನೆಗಳಿಗೂ ಹೋಗುತ್ತಾರೆ. ನಂತರ ತೆಂಗಿನಕಾಯಿ, ದುಡ್ಡು, ಅಕ್ಕಿ ಗಳನ್ನು ಸಂಗ್ರಹಿಸುತ್ತಾರೆ.

ಹೋಳಿ ಹುಣ್ಣಿಮೆದಿನ ಇವರೆಲ್ಲ ತಮ್ಮ ತಮ್ಮ ಊರುಗಳಿಗೆ ಮರಳಿ ಆ ದಿನ ತುಳಸಿ ಮನೆಯಲ್ಲಿ ಅವರ ಕೂಟವಾಗುತ್ತದೆ. ನಂತರ ಊರ ಹೊರಗಿರುವ ಜಟ್ಟಿಗ ಅಥವಾ ಮಾಸ್ತಿ (ಮಹಾಸತಿ) ಮನೆಯ ಮುಂದುಗಡೆ ಕೆಂಡ ಹಾಯುತ್ತಾರೆ. ನಂತರ ಕೆಲವರಿಗೆ ಭಾರ ಬರುತ್ತದೆ. ಪ್ರಶ್ನೋತ್ತರಗಳು ನಡೆದು ಮಹಾಪೂಜೆ ಆಗುತ್ತದೆ. ನಂತರ ಅವರೆಲ್ಲಾ ತಮ್ಮ ತಮ್ಮ ತುರಾಯಿಗಳನ್ನು ಅಲ್ಲಿಯೇ ವಿಸರ್ಜಿಸಿ ಬೆಳದಿಂಗಳ ಸ್ನಾನಕ್ಕೆ ಹೊಳೆಗೆ ಹೋಗುತ್ತಾರೆ. ಇದಕ್ಕೆ ಕರಿನೀರ ಸ್ನಾನ ಎನ್ನುತ್ತಾರೆ. ಹೋಗುವಾಗ "ಹೋ ಕಾಮ ಜೆಯ್" ಎಂದು ಕೂಗುತ್ತಾರೆ.

ಮರುದಿನ ಮತ್ತೊಮ್ಮೆ ಕೂಟಮಾಡಿ ಆದ ಖರ್ಚು ವೆಚ್ಚಗಳನ್ನು ತೆಗೆದು ಉಳಿದ ಲಾಭವನ್ನು ಎಲ್ಲರೂ ಹಂಚಿಕೊಳ್ಳುತ್ತಾರೆ. ಹಣ, ತೆಂಗಿನಕಾಯಿ, ದವಸಧಾನ್ಯಗಳನ್ನು ಅಷ್ಟೇ ಸರಿಯಾಗಿ ಹಂಚಿಕೊಳ್ಳುತ್ತಾರೆ. ಸ್ವಲ್ಪ ಹಣ ಧಾರ್ಮಿಕ ಕೆಲಸಗಳಿಗೋ ದೇವಸ್ಥಾನಗಳಿಗೋ ಕಾಣಿಕೆಯ ರೂಪದಲ್ಲಿ ಅರ್ಪಿತವಾಗುತ್ತದೆ.

ಇವರ ಹಗಣ (ಹಗರಣ)ವೂ ಬಹಳೇ ಸೊಗಸಾಗಿರುತ್ತದೆ. ದೇವರ ಉತ್ಸವಗಳ ಕಾಲದಲ್ಲಿ ತಮ್ಮ ಸ್ವಂತ ಖರ್ಚಿನಿಂದ ಬೇರೆ ಬೇರೆ ವೇಷಗಳನ್ನು ಧರಿಸಿ, ತಮ್ಮ ಸೇವೆಯೆಂದು ಕಲಾಕಾಣಿಕೆ ನೀಡುತ್ತಾರೆ. ಆಗ ಇವರ ನಿಜವಾದ ಕಲೆ ಪ್ರದರ್ಶಿಸಲ್ಪಡುತ್ತದೆ. ಆ ವೇಳೆಯಲ್ಲಿ ತುರಾಯಿ ಒಂದನ್ನು ಬಿಟ್ಟು ಉಳಿದೆಲ್ಲ ವೇಷಗಳು ಇರುತ್ತವೆ. ಆಗ ಮರಕಾಲನ್ನು ಕಟ್ಟಿ ಕುಣಿಯುತ್ತಾರೆ. ಇದು ತುಂಬಾ ಅಪಾಯವಾದದ್ದು. ಅವರೆಲ್ಲ ದೇವರಿಗೆ ಪ್ರಾರ್ಥನೆ ಸಲ್ಲಿಸುತ್ತಾರೆ. ಮರದಕಾಲು ಐದಾರು ಅಡಿ ಎತ್ತರವಿರುತ್ತದೆ. ಇದನ್ನು ಎರಡು ಕಾಲಿಗೆಕಟ್ಟಿ ಭಜನೆ ಹೇಳುತ್ತ ಕುಣಿಯುತ್ತಾರೆ. ಇದಕ್ಕೂ ಮೊದಲೇ ತರಬೇತು ನೀಡಲಾಗುತ್ತದೆ. ರಾಜಮಹಾರಾಜರ ಉಡುಪು ಧರಿಸಿ ಬಿಲ್ಲು,

ಬಾಣ, ಖಡ್ಗ, ಕತ್ತಿಗಳನ್ನೆಲ್ಲ ಧರಿಸಿ ಬಣ್ಣ ಬಳಿದು ಎರಡು ಪಂಗಡಗಳಾಗಿ ಕುಣಿಯುತ್ತಾರೆ. ಮರಕಾಲು ಕಟ್ಟಿದವರು ಒಂದು ಕಡೆ ಅವರ ಎದುರಿಗೆ ಇನ್ನಿತರರು ವೇಷ ಹಾಕಿ "ದೇವ ಬಂದ ದೇವರ ದೇವ ಬಂದ" ಎಂಬ ಹಾಡನ್ನೂ "ನೋಡೆ ನೋಡೆ ಗೋಪಿ ನಿನ್ನ ಮಗನ ಚೇಷ್ಟೆಯಾ" ಮುಂತಾದ ಹಾಡುಗಳನ್ನೂ ಹೇಳುತ್ತ ತಾಳಕ್ಕೆ ತಕ್ಕಂತೆ ಹೆಜ್ಜೆ ತಪ್ಪದೇ ಕುಣಿದು ನಲಿಯುತ್ತಾರೆ. ಆಗ ಅವರೆಲ್ಲ ಸ್ಪರ್ಧಿಗಳಾಗಿ ನಿಜವಾದ ಕಲೆಯನ್ನು ಹೊರಗೆಡಹುತ್ತಾರೆ. ಇದಕ್ಕೂ ಹಿಮ್ಮೇಳವಿರುತ್ತದೆ. ಈ ಹಗರಣವನ್ನು ನೋಡಿದಾಗ ಯಕ್ಷಗಾನದ ನೆನಪು ಮರುಕಳಿಸುತ್ತದೆ.

ಇನ್ನು ಕೋಲಾಟವೂ ಅಷ್ಟೇ; ಹತ್ತು ಹನ್ನೆರಡು ಜನರು ಗುಂಪು ಗುಂಪಾಗಿ ಹಿಮ್ಮೇಳ ದೊಡನೆ ಕಿರೀಟ, ಪೊಗಡೆ ಕಟ್ಟಿ ಕೈಯಲ್ಲಿ ಎರಡು ಸಣ್ಣ ಕೋಲುಗಳನ್ನು ಹಿಡಿದು ಹೆಜ್ಜೆ ತಪ್ಪದಂತೆ "ಹೇ ಹೇ ಹೇ ಹಾದ ಹಾದ" ಎನ್ನುತ್ತ ಇನ್ನಿತರ ಭಜನೆಗಳನ್ನು ಹಾಡುತ್ತಾರೆ. "ಕೋಲು ಕೋಲೆನ್ನ ಕೋಲೆ" ಎಂದು ಹೇಳುವದೂ ಉಂಟು. ಇದರಲ್ಲಿ ಕಲೆ, ಭಕ್ತಿಗಳೆರಡೂ ಪ್ರದರ್ಶಿತವಾಗುತ್ತವೆ. ಮನಸ್ಸಿಗೆ ನೆಮ್ಮದಿಯೂ ದೊರೆಯುತ್ತದೆ.

ಇವರ ಎಲ್ಲ ಕಲೆಗಳಿಗಿಂತಲೂ ಮಿಗಿಲಾಗಿದ್ದೆಂದರೆ ಸಿಂಗಿಬಾಳ್ಯನ ಕಥೆ. ಇದು ಜಾನಪದ ಕಥೆ ಯಾಗಿದ್ದು ಸಿಂಗಿ ಹಾಗೂ ಬಾಳ್ಯ ಎಂಬ ಇಬ್ಬರು ಮಿತ್ರರ ಕಥೆ. ಇದು ಯಕ್ಷಗಾನ ಶೈಲಿಯದು. ವೇಷ ಹಾಕಿ ಅಭಿನಯಿಸುತ್ತಾರೆ. ಹಿನ್ನೆಲೆಯಾಗಿ ಭಾಗವತರು, ಚಂಡೆ, ಮೃದಂಗ, ತಾಳ ಗಾರರೂ ಇರುತ್ತಾರೆ. ನಂತರ ಪದ್ಯದ ಅರ್ಥ ಹೇಳುತ್ತ ಸಂಭಾಷಣೆಯು ನಡೆಯುತ್ತದೆ. ನಾಟಕೀಯ ಶೈಲಿಯ ಮಾತುಗಾರಿಕೆ; ಇದರಲ್ಲಿ ಶೃಂಗಾರ ಪ್ರಣಯ, ಹಾಸ್ಯ, ಕರುಣ, ವೀರ, ರೌದ್ರ, ಬೀಭತ್ಸ ರಸಗಳೂ ಸರಾಗವಾಗಿ ಹರಿದು ಪ್ರೇಕ್ಷಕರ ಮನವನ್ನು ಸೂರೆಗೊಳ್ಳುತ್ತದೆ. ಎಲ್ಲೂ ನೀರಸವಾಗದೆ ಕಥೆಯು ಉದ್ದಕ್ಕೂ ಪ್ರೇಕ್ಷಕರ ಮನವನ್ನು ಸೆರೆಹಿಡಿಯುತ್ತದೆ. ರಾತ್ರಿ ಯಲ್ಲಿ ಇದನ್ನು ಆಡುತ್ತಾರೆ (ಯಕ್ಷಗಾನದಂತೆ). ಮೊದಲು ಗಣಪತಿ, ತಿರುಪತಿ ತಿಮ್ಮಪ್ಪ, ಶಿವ, ಶಕ್ತಿಯರ ಸ್ತುತಿಯೊಡನೆ ಕಥೆ ಪ್ರಾರಂಭವಾಗುತ್ತದೆ.

"ಗಣಪತಿ ಗಣ ರಾಯ್ಗೆ ಮುಗ್ದೇನ ಕೈಯ
ತಿರುಪತಿ ತಿಮ್ಮಪ್ಪ ರಾಯ್ಗೆ ಮುಗ್ದೇನ ಕೈಯ"

ಎಂತಲೂ "ಸಾಕೋ ಸಿಂಗ್ಯಾ ನಿನ್ನ ಗೆಳೆತನ" ಮೊದಲಾಗಿ ಬರುತ್ತದೆ.

ಇಂಥ ಶ್ರೇಷ್ಠ ಕಲೆಯುಳ್ಳ ಈ ಜನಾಂಗಕ್ಕೆ ಸರಕಾರ ಗಮನ ಕೊಡುವುದು ಮುಖ್ಯ. ಇವರಿಗೆ ವಸತಿ, ಕಡ್ಡಾಯ ಶಿಕ್ಷಣಗಳನ್ನು ಕೊಟ್ಟು ಇವರ ಸಂಸ್ಕೃತಿ ಕಲೆಗಳಿಗೆ ಉತ್ತೇಜನ ಕೊಟ್ಟು ಇವರನ್ನು ಸಮಾಜದಲ್ಲಿ ಮುಂದಕ್ಕೆ ತರದಿದ್ದಲ್ಲಿ ಇವರ ಕಲೆ ಅಳಿದುಹೋಗುವುದರಲ್ಲಿ ಸಂಶಯವಿಲ್ಲ. ಇದಕ್ಕೆ ಕಾರಣ ಅಜ್ಞಾನ, ಬಡತನ ಹಾಗೂ ಕೆಟ್ಟ ವ್ಯಸನಗಳು. ಇವರಿಗೆ ಪ್ರಾಥಶಿಕ್ಷಣ, ಕಡ್ಡಾಯ ಶಿಕ್ಷಣಗಳೆಲ್ಲ ಅವಶ್ಯವಾದದ್ದು. ಬಹಳ ಜನರು ಬಡವರಾಗಿದ್ದು ವಾಸಿಸಲು ಮನೆ, ಹೊಟ್ಟೆಗೆ, ಬಟ್ಟೆಗೆ ಗತಿಯಿಲ್ಲದೆ ಅನೇಕ ರೋಗಗಳಿಗೆ ತುತ್ತಾಗಿ ಸಾಯುತ್ತಿದ್ದಾರೆ. ಈ ದಾರುಣ ಪರಿಸ್ಥಿತಿಯನ್ನು ಸರಕಾರದವರು ಕೂಡಲೇ ಹೋಗಲಾಡಿಸಿದಲ್ಲಿ ಈ ಜನಾಂಗದ ಸಂಸ್ಕೃತಿ ಕಲೆಗಳೆಲ್ಲ ಉಳಿದಾವು. ಇನ್ನೂ ತನಕ ಸರ್ಕಾರದ ಗಮನವಿಲ್ಲದಿರುವುದು ನಿಜಕ್ಕೂ ವಿಷಾದದ ಸಂಗತಿ. ಇವರ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹವಿತ್ತು ಅಜ್ಞಾನ ಹಾಗೂ ದಾರಿದ್ರ್ಯಗಳನ್ನು ನಿವಾರಿಸಲು ಸರಕಾರ ಎಲ್ಲ ರೀತಿಯಿಂದಲೂ ಗಮನನೀಡಿ ಜಾನಪದ ಕಲೆಯನ್ನು ಉಳಿಸುವುದು ಅತಿ ಅವಶ್ಯ.

ಹಾಲಕ್ಕಿ ಎಂಬುದು ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಹಾಲಕ್ಕಿ ಒಕ್ಕಲಿಗರು ಮಾತನಾಡುವ ಒಂದು ಪ್ರಾದೇಶಿಕ ಭಾಷೆ. ಆ ಜಿಲ್ಲೆಯ ಕುಮುಟಾ, ಕಾರವಾರ, ಅಂಕೋಲ, ಹೊನ್ನಾವರ ತಾಲೂಕುಗಳಲ್ಲಿ ವಾಸಿಸುವ ಸುಮಾರು 40,000 ಜನರು ಈ ಭಾಷೆಯನ್ನು ಬಳಸುತ್ತಾರೆ. ವ್ಯವಸಾಯ ಅವರ ಮುಖ್ಯ ಕಸಬು. 'ನವೆಲ್ಲ ಕಬ್ಬು ತಿನ್ನುವೆನಿ', 'ಹೆಲ್ಲುನೋವು ಬಂದ್ರೆ ತಡೆಕೊಳ್ಳುಕಾಗ' ಎಂಬಿವು ಅವರ ಭಾಷೆಯ ಉದಾಹರಣೆಗಳು. ಶ್ರೀ ಎ. ಎಸ್. ಆಚಾರ್ಯ ಎಂಬುವವರ 'ಹಾಲಕ್ಕಿ ಕನ್ನಡ' ಎಂಬ ಪುಸ್ತಕವನ್ನು ಪುಣೆಯ ಡೆಕ್ಕನ್ ಕಾಲೇಜು ಈಗ ಒಂದು ದಶಕಕ್ಕೂ ಹಿಂದೆಯೇ ಪ್ರಕಟಿಸಿದೆ.

(ಸಂಪಾದಕ, ಮಾ. ಕ.)

ಮೂಲ: ರಾಲ್ಫ್ ಮ್ಯಾನ್‌ಹೀಮ್
ಅನು: ಎಚ್. ಎಂ. ನಾಗರಾಜರಾವ್

ಭಾಷಾಂತರಕಾರನ ಪಾಕಶಾಲೆಯಲ್ಲಿ

ನಾನು ಭಾಷಾಂತರಿಸಿದ ಬಹುಮಟ್ಟಿಗೆ ಪ್ರತಿಯೊಂದು ಕೃತಿಯೂ ರಚಿತವಾದುದು ಒಂದು ರೀತಿಯಲ್ಲಿ ಸರ್ವಸಾಧಾರಣ ಸಾಂಸ್ಕೃತಿಕ ಚೌಕಟ್ಟಿಯಾದ, ಪರಸ್ಪರ ಭಿನ್ನಾಭಿಪ್ರಾಯಗಳಿದ್ದರೂ ಜೀವನವಿಧಾನ ಮತ್ತು ವಿಚಾರಗಳ ಮುಕ್ತ ವಿನಿಮಯವನ್ನು ಸಂಭವನೀಯವನ್ನಾಗಿ ಮಾಡಿದ, ಮೂಲಭಾವನೆಗಳಲ್ಲಿ ಸಾಕಷ್ಟು ಸದೃಶವಾಗಿರುವ ಪ್ರದೇಶಗಳಿಂದ ಕೂಡಿದ, ಇಪ್ಪತ್ತನೆಯ ಶತಮಾನದ ಪಾಶ್ಚಾತ್ಯ ಪ್ರಪಂಚದಲ್ಲಿ. ಒಂದು ವಿಧದಲ್ಲಿ ಇದು ಭಾಷಾಂತರಕಾರನ ವ್ಯಾಪ್ತಿಯನ್ನು ಸೀಮಿತಗೊಳಿಸುತ್ತದೆ. ಒಂದು ಯುಗ ಅಥವಾ ಸಂಸ್ಕೃತಿ ಪೂರ್ತಿ ಬೇರೆಯದಾದ ಇನ್ನೊಂದು ಯುಗ ಅಥವಾ ಸಂಸ್ಕೃತಿಯ ಮೇಲೆ ಬೀರಿದ ಪ್ರಭಾವದ ಪರಿಣಾಮವಾಗಿ ಉಂಟಾಗುವ ರಚನಾತ್ಮಕ ಭಿನ್ನಾಭಿಪ್ರಾಯಗಳನ್ನು ಗುರುತಿಸುವ ಬಗ್ಗೆ ಆತ ನಿರೀಕ್ಷೆಯನ್ನಿಟ್ಟುಕೊಳ್ಳುವಂತಿಲ್ಲ: ಬೈಬಲ್ಲ ಭಾಷಾಂತರವನ್ನು ಮತ್ತು ಹೋಮರ್, ಅರಿಸ್ಟೋಫೇನ್ಸ್, ಡಾಂಟೆ, ಇ ಚಿಂಗ್ ಮುಂತಾದವರ ಕೃತಿಗಳ ಭಾಷಾಂತರಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಮಾತನ್ನು ಹೇಳುತ್ತಿದ್ದೇನೆ.

ನಾನು ಸ್ವಲ್ಪ ವಿಷಾದದಿಂದಲೇ ತಿಳಿಸಬೇಕಾಗಿದೆ: ಹೀಗೆ ಕೈಗೊಂಡ ಕಾರ್ಯಗಳ ಸಾಫಲ್ಯ ವ್ಯತ್ಯಾಸಗೊಳ್ಳುತ್ತದೆ ಎಂದು; ಆದರೂ ಅವು ಭಾಷಾಂತರದ ಪ್ರೌಢ ಅಂಶವನ್ನು ಪ್ರತಿನಿಧಿಸುತ್ತವೆ: ಅಸಾಧ್ಯವಾದುದನ್ನು ಸಾಧಿಸಲು ನಡೆಸುವ ಹೋರಾಟ; ಎಂದರೆ ಸಂಪೂರ್ಣವಾಗಿ ಬೇರೊಂದು ಪ್ರಪಂಚದಲ್ಲಿ ವಾಸಿಸುವ ಓದುಗನಿಗೆ ಪಠ್ಯಗಳ ಮೂಲಾರ್ಥ ಮತ್ತು ಪರಕೀಯವಾದ ಪಠ್ಯವಲಯವನ್ನು ಒಯ್ದು ಮುಟ್ಟಿಸುವುದು. ಸಾಮಾನ್ಯ ಸಾಂಸ್ಕೃತಿಕ ಚೌಕಟ್ಟಿಯೊಳಗೆ ರಫ್ತುಗಾರ ಮತ್ತು ಆಮದುಗಾರರು ಪರಸ್ಪರ ಹೆಚ್ಚು ನಿಕಟವಾಗಿರುತ್ತಾರೆ. ಅವರ ನಡುವಣ ಒಪ್ಪಂದ ವಾಸ್ತವವಾಗಿರುತ್ತದೆ ಹಾಗೂ ಅಭಿವ್ಯಕ್ತಿ ಒಮ್ಮೆ ಸೂಕ್ಷ್ಮ ಮತ್ತು ಸಂಕೀರ್ಣವಾದಂತೆ (ಈ ಒಪ್ಪಂದ) ಇನ್ನೂ ಸಾಪೇಕ್ಷವಾಗಿರುತ್ತದೆ. ಈ ಅಭಿವ್ಯಕ್ತಿ ಕ್ಷೇತ್ರದಲ್ಲಿ ನಿರಪೇಕ್ಷ ಸಮಾನಾರ್ಥಕಗಳನ್ನು ನಿರೀಕ್ಷಿಸಲಾಗದು. ಭಾಷಾಂತರಕಾರನ ಜವಾಬ್ದಾರಿ ಎಂದರೆ ಸಾಧ್ಯವಿದ್ದಷ್ಟೂ ಅತ್ಯಂತ ನಿಕಟ ಅರ್ಥರೂಪಗಳನ್ನು ಪಡೆಯುವುದು.

ಅನೇಕ ವೃತ್ತಿನಿರತ ಭಾಷಾಂತರಕಾರರಂತೆ ನಾನೂ ಹತ್ತು ಹಲವು ಕ್ಷೇತ್ರಗಳಲ್ಲಿ ಕೆಲಸ ಮಾಡಿದ್ದೇನೆ. ನನ್ನ ಕಾರ್ಯಕ್ಷೇತ್ರಗಳೆಂದರೆ ತತ್ವಶಾಸ್ತ್ರ, ಮನಶ್ಶಾಸ್ತ್ರ, ರಾಜ್ಯಶಾಸ್ತ್ರ, ಜೀವವಿಜ್ಞಾನ, ಧರ್ಮಗಳ ಇತಿಹಾಸ, ಕಲೇತಿಹಾಸ ಮತ್ತು ಲಲಿತಸಾಹಿತ್ಯ. ಭಾಷಾಂತರಕಾರನ

ವೃತ್ತಿಯ ದೃಷ್ಟಿಯಿಂದ ಈ ಕ್ಷೇತ್ರಗಳ ಮೇರೆಗಳನ್ನು ನಿವಾರಿಸುವ ಶ್ರೇಣಿಯೊಂದು ನನಗೆ ಕಾಣುತ್ತದೆ. (ಇದರ) ಮಾನದಂಡಗಳೆಂದರೆ ಇವು: ಮೂಲದ ಶೈಲಿಯನ್ನು ಎಷ್ಟರ ಮಟ್ಟಿಗೆ ಗಂಭೀರವಾಗಿ ಪರಿಗಣಿಸಬೇಕು ? ಹಾಗೂ ಅದನ್ನು ಗಂಭೀರವಾಗಿ ಪರಿಗಣಿಸಬೇಕಾದಲ್ಲಿ ಅದನ್ನು ಪುನರ್‌ನಿರ್ಮಿಸುವುದು ಎಷ್ಟರ ಮಟ್ಟಿಗೆ ಕಷ್ಟವಾಗುತ್ತದೆ ?

ಅನೇಕ ಪುಸ್ತಕಗಳು, ವಿಶೇಷವಾಗಿ–ಯಾವ ವಿಧದಲ್ಲೂ ಪೂರ್ತಿಯಾಗಿ ಅಲ್ಲದಿದ್ದರೂ–ವ್ಯಾಖ್ಯಾನಾತ್ಮಕ ಸ್ವರೂಪದ ಗ್ರಂಥಗಳು ಕೆಟ್ಟ ರೀತಿಯಲ್ಲಿ ರಚಿತವಾಗಿವೆ. ಅಂಥ ಸಂದರ್ಭಗಳಲ್ಲಿ ಭಾಷಾಂತರಕಾರರು ಮೂಲವನ್ನು ಉತ್ತಮಪಡಿಸಬೇಕೆಂದು ಹೆಚ್ಚಿನ ಪ್ರಕಾಶಕರು ನಿರೀಕ್ಷಿಸುತ್ತಾರೆ — ಇದು ಸರಿಯಾದುದೇ ಎಂದು ಮತ್ತು ಭಾಷಾಂತರಕಾರನ ಸುದೈವವೆಂದು ನಾನು ನಂಬುತ್ತೇನೆ; ಏಕೆಂದರೆ ಹೊಂದದ ಶೈಲಿಯನ್ನು ವಿಧೇಯವಾಗಿ ಪುನರ್‌ಸೃಷ್ಟಿಸುವುದು ತುಂಬ ಕಷ್ಟವೇ. ಅಂಥ ಕೃತಿಯನ್ನು ಮತ್ತೆ ರಚಿಸುವುದರಲ್ಲೇ ಅದರ ಕನಿಷ್ಠತರ ಮಿತಿ ಅಡಗಿದೆ; ಭಾಷಾಂತರಕ್ಕೆ ಅದು ಸಂಬಂಧಪಡುವುದು ಅತ್ಯಲ್ಪವೇ. ಅದರೆ ಅಲ್ಲೂ ಅಸಂಖ್ಯ ದರ್ಜೆ ಮತ್ತು ಸಮ್ಮಿಶ್ರಗಳಿರುತ್ತವೆ. ಕೆಲವೊಮ್ಮೆ ಚತುರನಲ್ಲದ ಲೇಖಕನೂ ವೈಶಿಷ್ಟ್ಯ ತೋರುವುದುಂಟು: ಒಂದು ಧ್ವನಿ, ಸಿಡುಕು, ಮಿಂಚು. ಉತ್ತಮ ಭಾಷಾಂತರಕಾರ ಬರಹವನ್ನು ಪರಿಷ್ಕರಿಸುವಲ್ಲಿ ಈ ಲಕ್ಷಣವನ್ನು ಸಂರಕ್ಷಿಸಿಕೊಳ್ಳಲೂ ಸಮರ್ಥನಾಗಿರಬೇಕಾಗುತ್ತದೆ.

ಕಳೆದ ವರ್ಷ ಹತ್ತು ಜನ ಜರ್ಮನ್ ಸಮಾಜಶಾಸ್ತ್ರಜ್ಞರ ಲೇಖನಗಳ ಸಂಕಲನ ಕೃತಿಯೊಂದನ್ನು ಅನುವಾದಿಸಿದೆ; ಇವರಲ್ಲಿ ಒಬ್ಬನನ್ನು ಮಾತ್ರ ಲೇಖಕನೆಂದು ಪರಿಗಣಿಸಬಹುದು. ಆದರೂ ತಮ್ಮ ಬರಹಗಳಲ್ಲಿ ಅವರು ಸ್ವಲ್ಪಮಟ್ಟಿನ ಸ್ವಂತಿಕೆಯನ್ನು ತೋರಿದರು; ಕೃತಿಯ ದೋಷವನ್ನು ಸರಿಪಡಿಸುವಾಗ ಆ ಸ್ವಂತಿಕೆಯನ್ನು ಅಸ್ಪಷ್ಟವಾಗಿ ಉಳಿಸುವುದಕ್ಕಿಂತ ಹೆಚ್ಚು ಸ್ಪಷ್ಟವಾಗಿ ತಿಳಿಸಲು ಮತ್ತು ಪ್ರತಿಯೊಂದೂ ಬೇರೆಬೇರೆಯಾಗಿ ಧ್ವನಿಸುವಂತೆ ಮಾಡಲು ಪ್ರಯತ್ನಿಸಿದೆ. ಅಥವಾ ಬಹುಶಃ ನಾನು ಪ್ರಯತ್ನಿಸಿದೆ ಎಂದು ಹೇಳುವುದೂ ತಪ್ಪಾಗುತ್ತದೆ: ಮೂಲದ ಅಂಥ ಲಕ್ಷಣಕ್ಕೆ ಪ್ರತಿಕ್ರಿಯೆ ವೃತ್ತಿಯಲ್ಲೇ ಅಂತರ್ಗತವಾಗಿರುತ್ತದೆ; ವಾಕ್ಯ, ಪ್ಯಾರಾ ಅಥವಾ ಅದಕ್ಕೂ ಹೆಚ್ಚಿನ ಸೇರ್ಪಡೆಗೆ ಅವಕಾಶವಿರುವ ಸಂದರ್ಭಗಳಲ್ಲಿ ಲೇಖಕನೊಬ್ಬ ಆತ್ಮಭ್ರಾಂತ್ಯವಾಗಿ ಬದಲಾಗಬೇಕಾದಂಥ ತೀರ ಅಪರೂಪದ ದೃಷ್ಟಾಂತಗಳ ಹೊರತಾಗಿ ಬೇರೆಲ್ಲೂ ಭಾಷಾಂತರಕಾರ ಎಂದೂ ಸ್ವಂತಿಕೆ ತೋರಿ ಬರೆಯತೊಡಗಬಾರದು.

ಉತ್ತಮಗೊಳಿಸಲು ಪ್ರಯತ್ನವನ್ನೂ ಮಾಡದೆ ಅವಲಕ್ಷಣಕರವಾದ ರೀತಿಯಲ್ಲಿ ನಾನು ಬರೆದ ಒಂದೇ ಒಂದು ಪುಸ್ತಕ 'ಮೈನ್ ಕಾಂಫ್'. ದೋಷ ನನ್ನದಲ್ಲ, ಅಡಾಲ್ಫನದು ಎಂಬುದನ್ನು ತೋರಿಸುವುದಕ್ಕಾಗಿ ಹೆಚ್ಚು ಅಸಂಗತವಾದ ವಾಕ್ಯಗಳಲ್ಲಿ ಕೆಲವಕ್ಕೆ ಜರ್ಮನ್ ಮೂಲಸಹಿತ ಅಡಿಟಿಪ್ಪಣಿಗಳನ್ನೂ ಸೇರಿಸಿದೆ. ಆದರೂ ಅನುದ್ದೇಶಪೂರ್ವಕವಾಗಿ ಅದನ್ನು ಉತ್ತಮಪಡಿಸಿದೆ; ಉದ್ದೇಶ ಸಾಧನೆಗಾಗಿ ಅಜ್ಞಾನಿಯಾಗಿರುವುದು ತುಂಬ ಕಷ್ಟವೇ.

ಉತ್ತಮ ಮತ್ತು ಅಧಮ ಬರಹಗಳ ವಿಸ್ಮಯಕರ ಮಿಶ್ರಣಗಳಿಂದ ಕೂಡಿದ ಪುಸ್ತಕಗಳು ಕೂಡ ಇವೆ. ಇದಕ್ಕೆ ಒಂದು ನಿದರ್ಶನವೆಂದರೆ ಕೊನೆಯ ಪುಟಗಳವರೆಗೂ ಹೆಚ್ಚು ಕಡಿಮೆ ಸ್ವತಃ ಭಾಷಾಂತರಿಸಿಕೊಳ್ಳುವ ಲಕ್ಷಣದ, ಜೀವಂತ ಮತ್ತು ನಿರ್ಮಲ ಪತ್ರಿಕೋದ್ಯಮಿಯ ಶೈಲಿಯಲ್ಲಿ ಬರೆಯಬಲ್ಲ, ಆದರೆ ಚಿತ್ರವೊಂದನ್ನು ವರ್ಣಿಸುವಾಗ ಅತಿರೇಕಕ್ಕೆ ಹೋಗುವ, ಕಲೇತಿಹಾಸಕಾರನ ಕೃತಿ. ಇಲ್ಲಿ ಭಾಷಾಂತರಕಾರನೊಬ್ಬ ಉದ್ದೇಶಪೂರ್ವಕವಾಗಿಯೇ ಅಥವಾ ಅಪೇಕ್ಷೆಯಿಂದಲ್ಲದಿದ್ದರೂ ಅನ್ಯಮಾರ್ಗವಿಲ್ಲದೆ "ಉತ್ತಮಪಡಿಸುತ್ತಾನೆ". ತರ್ಕದ ಮತ್ತು ಪದವಿನ್ಯಾಸದ ಬಂಧನಗಳಿಂದ ಸ್ವತಂತ್ರವಾದ ಆಡಂಬರ ಶೈಲಿಯಲ್ಲಿ ರಚಿತವಾದ ಭ್ರಮಾವೇಶ

ವನ್ನು ಇನ್ನೊಂದು ಭಾಷೆಗೆ ಯಥಾವತ್ತಾಗಿ ಸ್ಥಳಾಂತರ ಮಾಡುವುದು ಸಾಧ್ಯವಿಲ್ಲ; ಭಾಷಾಂತರಕಾರ ಭ್ರಮಾವೇಶದ ಜಾಡ್ಯವನ್ನು ತಾನೇ ಸೋಂಕಿಸಿಕೊಂಡು 'ಏನನ್ನೋ' ಬರೆಯಬೇಕಾಗುತ್ತದೆ.

ಎಲ್ಲಿ ಸಂಭವನೀಯ ಸಂದೇಹವಿರುವುದಿಲ್ಲವೋ ಅಲ್ಲಿ ಮಾತ್ರ ಭಾಷಾಂತರಕಾರನ ಪರ ಇಂಥ ಸಂಪಾದಕೀಯ ಚಟುವಟಿಕೆಗಳು ಸಮರ್ಥಿತವಾಗುತ್ತವೆ. ಆದರೆ ಶೈಲಿಯು ಉದ್ದೇಶಪೂರ್ವಕ, ಸ್ವೋಪಜ್ಞ ಮತ್ತು ಒಳವಿನ್ಯಾಸವೊಂದರ ಅಭಿವ್ಯಕ್ತಿಯಾಗಿದ್ದಿರುವಾಗ ಭಾಷಾಂತರಕಾರನನ್ನು (ಹಾಗೂ ಇತರ ಪ್ರತಿಯೊಬ್ಬನನ್ನೂ) ಚಕಿತಗೊಳಿಸಿದ್ದು ಏನು ಎಂಬುದನ್ನು ಭವಿಷ್ಯದ ವಿಮರ್ಶಕರು ಕಂಡುಹಿಡಿಯಬಹುದೇನೋ.

ಶೈಲಿಯೊಂದನ್ನು ಪುನಸ್ಸೃಷ್ಟಿಸುವ ಸಮಸ್ಯೆಯನ್ನು ಕುರಿತು ಈಗ ವಿವೇಚಿಸೋಣ. ಕೆಲವು ಶ್ರೇಷ್ಠ ಶೈಲಿಗಳನ್ನು ಭಾಷಾಂತರಿಸುವುದು (ಲಲಿತ ಸಾಹಿತ್ಯದಲ್ಲಿ ಇದು ತುಂಬ ಅಪರೂಪವಾಗಿ ಪರಿಣಮಿಸಿದೆಯಾದರೂ) ಬಹಳ ಸುಲಭ. ಕೆಲವು ಅತ್ಯುತ್ತಮ ಕೃತಿಗಳ ಬಗೆಗೆ ಕೆಲಸಮಾಡುವುದರಿಂದ ಭಾಷಾಂತರಕಾರ ಒಬ್ಬ ಕುಶಲಕಲಾ ಕೆಲಸಗಾರನಾಗಿ ಸ್ವಲ್ಪವೂ ತೃಪ್ತಿಯನ್ನು ಪಡೆಯಲಾರ; ಅಷ್ಟೇ ಅಥವಾ ಇನ್ನೂ ಹೆಚ್ಚು ಫಲಪ್ರದವಾಗಿರಬಹುದಾದ ವಿಷಯವಸ್ತುವಿನಲ್ಲೇ ಆತ ಮಗ್ನನಾಗಿರದೆ ಜಾಗೃತನಾಗಿರುತ್ತಾನೆ. ಉದಾಹರಣೆಗೆ ಅರ್ನೆಸ್ಟ್ ಕ್ಯಾಸಿಯರ್‌ನ 'ದಿ ಫಿಲಾಸಫಿ ಆಫ್ ಸಿಂಬಾಲಿಕ್ ಫಾರ್ಮ್ಸ್' ಎಂಬ ಕೃತಿಯಲ್ಲಿ ಬರವಣಿಗೆ ಸಂಪೂರ್ಣವಾಗಿ ಸ್ಪಷ್ಟವೂ ನೇರವೂ ಆಡಂಬರರಹಿತವೂ ಆಗಿದೆ. ಓದಿದುದು ಸುಲಭಗ್ರಾಹ್ಯವಾಗುತ್ತದೆ. ನನಗೆ ಅಪರಿಚಿತ ಕ್ಷೇತ್ರಗಳಾದ ವಿಜ್ಞಾನ ಮತ್ತು ಗಣಿತಕ್ಕೆ ಸಂಬಂಧಿಸಿದ ಕೊನೆಯ ಸಂಪುಟ ಕೂಡ ಪಾರಿಭಾಷಿಕ ಶಬ್ದಗಳ ಹುಡುಕಾಟವನ್ನು ಬಿಟ್ಟರೆ ಉಳಿದಂತೆ ನನಗೇನೂ ತೊಂದರೆ ಕೊಡಲಿಲ್ಲ. ವಿಷಯವನ್ನು ಖಚಿತವಾಗಿ ಅರ್ಥಮಾಡಿಕೊಂಡು ಮತ್ತು–ನಾನು ಬರೆದಿದ್ದುದು ಅಪವಾದಗಳಿಲ್ಲದೆ ಅರ್ಥವನ್ನು ಒದಗಿಸಿದ್ದು–ಅದನ್ನು ಬಾಲಸದೃಶ ಸಂತೋಷದಿಂದ ಕಲಿತನನ್ನ ಸ್ನೇಹಿತರಿಗೆ ನನ್ನ ಪರಿಶ್ರಮಗಳ ಫಲ ಸಲ್ಲಬೇಕು.

ಇದು ಆಗಾಗ ನನ್ನನ್ನು ಕೇಳಲಾಗುತ್ತಿರುವ ಸಮಸ್ಯೆಯೊಂದಕ್ಕೆ ತಂದು ನಿಲ್ಲಿಸುತ್ತದೆ: ವಿಷಯವಸ್ತುವನ್ನು ಅರ್ಥಮಾಡಿಕೊಳ್ಳದೆ ಕೃತಿಯೊಂದನ್ನು ಭಾಷಾಂತರಿಸಲು ಸಾಧ್ಯವೆ? ನನಗನ್ನಿಸುತ್ತದೆ, ಬರವಣಿಗೆ ತುಂಬ ನೇರವಿದ್ದರೆ (ಸ್ವಯಂಚಾಲಿತ ಯಂತ್ರಶಾಸ್ತ್ರದಂಥ ತೀರ ತಾಂತ್ರಿಕ ಕ್ಷೇತ್ರಗಳಲ್ಲೇನೋ ಆಗುವುದಿಲ್ಲವಾದರೂ) ಸಾಧ್ಯ ಎಂದು. ಇಲ್ಲದಿದ್ದರೆ ಬಿಡುವುದು ಉತ್ತಮ. ಅಂಥ ಕಾರ್ಯವನ್ನು ಕೈಗೊಳ್ಳಲೂ ಪರಿಸ್ಥಿತಿ ಅಪರೂಪವಾಗಿ ನನಗೆ ನೆರವಾದುದುಂಟು—ಒಂದು ಅಥವಾ ಎರಡು ಸಲ ತಂದಿತ್ತ ಸಂತಾಪಾರ್ಹ ಫಲಿತಾಂಶಗಳನ್ನು ಪರಿಣತನೊಬ್ಬ ಸರಿಪಡಿಸಬೇಕಾಗಿ ಬಂತು.

ಭಾಷಾಂತರವನ್ನು ಗಂಭೀರವಾಗಿ ಪರಿಗಣಿಸಲು ಪ್ರತಿಯೊಂದು ಕಾರಣವೂ ಇರುವ ಸಂಕೀರ್ಣಶೈಲಿಯ ಲೇಖಕರ ಕೃತಿಗಳಲ್ಲಿ ಈ ಶ್ರೇಣಿ ವಿವಿಧ ಹಂತಗಳ ಮೂಲಕ ಶಿಖರಕ್ಕೇರುತ್ತದೆ. ಅಂಥ ಕೃತಿಗಳು ಅವಶ್ಯಕವಾಗಿ ಇತರ ಕೃತಿಗಳಿಗಿಂತ ಹೆಚ್ಚು ಉಪಯುಕ್ತ ಎಂದು ನಾನು ಹೇಳುತ್ತಿಲ್ಲ; ಅವು ಹೆಚ್ಚು ಫಲಪ್ರದವೆಂದು ಹೇಳಬಹುದೆಂಬುದು ನನ್ನ ವಿಶಿಷ್ಟ ಅನುಭವ. ಕಥಾಸಾಹಿತ್ಯೇತರ ಭಾಷಾಂತರಗಳಲ್ಲಿ ಶೈಲಿಯ ಬಗ್ಗೆ ನಾನು ನಿರೀಕ್ಷಿಸಬಹುದಾಗಿದ್ದ ಎಲ್ಲ ಸಮಸ್ಯೆಗಳನ್ನು ಕೊನೆಯ ಪಕ್ಷ ಎರಡಾದರೂ ಕೃತಿಗಳು—ಹೈಡ್‌ಗರ್‌ನ 'ಇಂಟ್ರೊಡಕ್ಷನ್ ಟು ಮೆಟಾಫಿಸಿಕ್ಸ್' ಮತ್ತು ಎರಿಚ್ ಆರ್‌ಬಚ್‌ನ 'ಲಾ ಕೋರ್ ಎಟ್ ಲಾ ವಿಲ್ಲೆ'–ಒದಗಿಸಿದವು; ಆದರೂ ಕಥಾಸಾಹಿತ್ಯೇತರ ಕ್ಷೇತ್ರದಲ್ಲಿ ಅನೇಕ ವರ್ಷಗಳ ಅನಂತರ ನಾನು ಬೇರೆನನ್ನಾದರೂ ಮಾಡಬಲ್ಲೆನೆಂಬ ಅಭಿಪ್ರಾಯತಳೆದಿದ್ದ ಪ್ರಕಾಶಕನಿಗೆ ನಾನು ತುಂಬ ಕೃತಜ್ಞನಾಗಿರಬೇಕು.

ಭಾಷಾಂತರಕಾರನ ಪಾಕಶಾಲೆಯನ್ನು ಕುರಿತು ಏನಾದರೊಂದು ಕಲ್ಪನೆಯನ್ನು ಕೊಡಲು ಪ್ರಯತ್ನಿಸುವಲ್ಲಿ ಇಬ್ಬರು ಕ್ಲಿಷ್ಟಕರ ಲೇಖಕರಾದ ಗಂಟರ್‌ಗ್ರಾಸ್ ಮತ್ತು ಸೆಲೈನ್–ಇವರಿಬ್ಬರನ್ನು ಕುರಿತ ಪರ ಮತ್ತು ವಿರುದ್ಧ ರೀತಿಯ ಕಾರ್ಯಾನುಭವವನ್ನು ತಿಳಿಸುತ್ತೇನೆ; ನಾನು ಇವರಿಬ್ಬರನ್ನೇ ಆರಿಸಿಕೊಂಡದ್ದೇಕೆಂದರೆ ಭಾಗಶಃ ಈಚೆಗೆ ಇವರಿಬ್ಬರ ಕೃತಿಗಳ ಅನುವಾದದಲ್ಲಿ ನಾನು ತೊಡಗಿರುವುದರಿಂದ ಹಾಗೂ ಭಾಗಶಃ ಇವರು ನೇರಿದಿರಾಗಿ ವಿರುದ್ಧ ಪ್ರವೃತ್ತಿಗಳನ್ನು ಭಾಷಾಂತರಕಾರನಲ್ಲಿ ವಿಧಿಸುವುದರಿಂದ. ಗ್ರಾಸ್‌ನನ್ನು ಭಾಷಾಂತರಿಸುವಾಗ ನಾನು ಬಂದಿ, ಅತ ನನ್ನ ಕೈಗಳನ್ನು ನಿರ್ಬಂಧಿಸುತ್ತಾನೆ; ಸೆಲೈನ್ ಜೊತೆ ನೋವಿನಿಂದಲೂ ನಲಿವಿನಿಂದಲೂ ನಾನು ಸ್ವತಂತ್ರವಾಗಿರುತ್ತೇನೆ. ಈ ವಿಷಯದಲ್ಲಿ ಅನೇಕರು ಗ್ರಾಸ್ ಧ್ರುವಕ್ಕೆ ಹೆಚ್ಚು ನಿಕಟವಾಗಿರುತ್ತಾರಾದರೂ ಬೇರೆಲ್ಲ ಕ್ಲಿಷ್ಟ ಲೇಖಕರು ಇವರಿಬ್ಬರ ನಡುವೆ ಎಲ್ಲೋ ನಿಲ್ಲುತ್ತಾರೆಂದು ನನಗನ್ನಿಸುತ್ತದೆ.

ಆದರೂ ಇವರಿಬ್ಬರ ಶೈಲಿಗಳು ಸರಿಸಮವಾಗಿಯೇ ಸಮರ್ಥವಾದವು. ಕಾಲದ ದೃಷ್ಟಿಯಿಂದ ಅವಶ್ಯಕವಾಗಲ್ಲದಿದ್ದರೂ ತಾರ್ಕಿಕ ದೃಷ್ಟಿಯಿಂದ ಮೊದಲು ಮಾಡಬೇಕಾದ ಕಾರ್ಯವೆಂದರೆ ಲೇಖಕನ ಶೈಲಿಯ ಬಗ್ಗೆ ಪರಿಕಲ್ಪನೆಯೊಂದನ್ನು ರೂಪಿಸಿಕೊಳ್ಳುವುದು. ನನ್ನದೇ ನಿದರ್ಶನದಲ್ಲಿ ಇದು ಕಾಲದ ದೃಷಿಯಿಂದ ಕೂಡಿರಲಿಲ್ಲ; ಏಕೆಂದರೆ—ನಾನು ಈ ವೃತ್ತಿಯಲ್ಲಿ ತಕ್ಕ ಮಟ್ಟಿಗೆ ನೆಲೆನಿಂತಿರುವುದರಿಂದ ಒಂದು ಗುಟ್ಟನ್ನು ರಟ್ಟುಮಾಡುತ್ತೇನೆ—ಭಾಷಾಂತರ ಕಾರ್ಯಕ್ಕೆ ತೊಡಗುವ ಮುನ್ನ ಒಂದು ಪುಸ್ತಕವನ್ನು ನಾನು ಓದುವುದೇ ಅಪರೂಪ. "ಓದುಗನಾಗಿ" ಹೆಚ್ಚು ಪರಿಚಯ ಮಾಡಿಕೊಂಡು ಕೃತಿಯೊಂದನ್ನು ಕೆಲವೊಮ್ಮೆ ಭಾಷಾಂತರಿಸುತ್ತೇನೆ, ನಿಜ; ಉದಾಹರಣೆಗೆ 'ಮೋರ್ಟ್ ಎ ಕ್ರೆಡಿಟ್'. ಆದರೆ ಅದು ಸಂತೋಷಕ್ಕಾಗಿ ಕೈಗೊಂಡ ವಾಚನವೆಂಬುದರಲ್ಲಿ ಸಂಶಯವಿಲ್ಲ; ಆ ಕೃತಿಯನ್ನು ಎಂದಾದರೊಂದು ದಿನ ಭಾಷಾಂತರಿಸುತ್ತೇನೆಂಬ ಕಲ್ಪನೆ ಸಹ ನನಗಿರಲಿಲ್ಲ. ಗ್ರಾಸ್‌ನನ್ನು ಮೊದಲ ಬಾರಿಗೆ ಓದಿದಾಗ ಅವನ ಶೈಲಿ ಸಾಕಷ್ಟು ಗಲಿಬಿಲಿಗೊಳಿಸಿತು. 'ಡೈ ಬ್ಲೆಷ್‌ಟ್ರೊಮೆಲ್' ಎಂಬ ಕೃತಿಯ ಮೊದಲ ನೂರು ಪುಟಗಳನ್ನು ಓದಿದನಂತರ ಅದನ್ನು ಭಾಷಾಂತರಿಸಲು ತೊಡಗಿದೆ. ಏಕೆಂದರೆ ಅದನ್ನು ಭಾಷಾಂತರಿಸುತ್ತಿದ್ದ ಹಾಗೆ, ಅದು ಇತರ ಅನೇಕ ಉದ್ಯಮಗಳಂತೆ ಈ ವೃತ್ತಿಯಲ್ಲೂ ಬೇರ್ಪಡಿಸಲಾಗದ ಕಾರ್ಯಶ್ರಮವನ್ನು ಹಗುರಗೊಳಿಸುತ್ತದಷ್ಟೇ ಅಲ್ಲದೆ ನನಗೆ ಸಹಾಯಕವೆಂದು ಕಂಡುಬಂದ ಒಂದು ತುಡಿತವನ್ನೂ ಸೃಷ್ಟಿಸುತ್ತದೆಂಬುದರ ಅರಿವಾಯಿತು. ಇದರಲ್ಲಿನ ಅವಗುಣವೆಂದರೆ ಕೆಲವೊಮ್ಮೆ ಕೃತಿಯೊಂದರ ಉತ್ತರಭಾಗಗಳು ಆರಂಭಭಾಗದ ಸರಿಯಾದ ಭಾಷಾಂತರಕ್ಕೆ ಅಗತ್ಯವಾದ ಅರಿವನ್ನು ಮೂಡಿಸುತ್ತವೆ ಎಂಬುದು. ಆದರೆ ಭಾಷಾಂತರಕಾರನೊಬ್ಬ ತನ್ನ ಹಸ್ತಪ್ರತಿಯನ್ನು ಅನೇಕ ಸಲ ಪರಿಷ್ಕರಿಸಿ ಏನೂ ನಷ್ಟವಾಗದಂತೆ ನೋಡಿಕೊಳ್ಳುತ್ತಾನೆ.

ಹೀಗೆ ಶೈಲಿಯನ್ನು ಕುರಿತ ನನ್ನ ಕಲ್ಪನೆ ಕಾರ್ಯಕ್ರಮದ ಮೊದಲ ಹಂತಗಳಲ್ಲೇ ರೂಪುಗೊಳ್ಳುತ್ತದೆ. ಸ್ವಲ್ಪ ಹೊತ್ತಿನ ನಂತರ ಅದು ಬುದ್ಧಿ ಮನಸ್ಸುಗಳ ನಡುವೆ ಎಲ್ಲೋ ನೆಲಸಿ ಆಜ್ಞೆಗಳನ್ನು ನೀಡುತ್ತದೆ. ಗ್ರಾಸ್‌ನ ಶೈಲಿ ಅದರ ಸ್ಫುಟಲಕ್ಷಣಗಳಿಗಿಂತಲೂ ಹೆಚ್ಚಿನದೇನೋ ಆಗಿರುತ್ತದೆ–ಅರ್ಥಗರ್ಭಿತ ಅಪೂರ್ಣ ವಾಕ್ಯಗಳು, ಪಾರಿಭಾಷಿಕ ಶಬ್ದಗಳಿಂದ ಕೂಡಿದ, ಸೂತ್ರಪ್ರಾಯ ಅಡುಶೈಲಿಯ, ವ್ಯಂಗ್ಯದಲ್ಲಿ ವೈಭವವಾದ, ರಚನಾತ್ಮಕವಾದ, ಒಂದಾದ ಮೇಲೊಂದರಂತೆ ಬರುವಂಥ ಗಂಭೀರ ವಾಕ್ಸರಣಿಯ ಅತ್ಯುಪಯೋಗ; ಸೆಲೈನ್‌ನಲ್ಲಿ ಕೆಲವೊಮ್ಮೆ ಆಡಂಬರ ಶೈಲಿಯಲ್ಲಿ ಸಾಹಿತ್ಯಿಕ ತಿರುವುಗಳಿಂದ ವಿರೂಪಗೊಳಿಸಿದ ಮತ್ತು ಮಧ್ಯೆ ಮಧ್ಯೆ ತಲೆಹಾಕುವ ಜನಪ್ರಿಯ ಹೇಳಿಕೆಗಳು, ಚಿಕ್ಕದಾದ ನೀರಸ ವಾಕ್ಯಗಳು ಅಥವಾ ವಾಕ್ಯ ತುಣುಕುಗಳು, ಅನೇಕ ಕಡೆಗಳಲ್ಲಿ ಮೂರು ಚುಕ್ಕಿಗಳು ಹಾಗೂ ನೂರಾರು ಆಶ್ಚರ್ಯಸೂಚಕ

ಚಿಹ್ನೆಗಳು. ಲೇಖಕನ ನಿಜವಾದ ಶೈಲಿ ಒಂದು ವ್ಯಕ್ತಿತ್ವದಂತೆ; ಅದು ಬೆಲೆಕಟ್ಟಲು ಸಾಧ್ಯವಾಗದ ಗುಣಲಕ್ಷಣಗಳಿಂದ ಕೂಡಿರುತ್ತದೆ. ಒಬ್ಬನಿಗೆ ಅದು ತುಂಬ ತೀವ್ರವಾದ ಅನುಭವವನ್ನು ಉಂಟುಮಾಡಬಹುದು. ಆದರೆ ಆ ಅನುಭವದ ಸರಿತಪ್ಪುಗಳ ಬಗ್ಗೆ ಮತ್ತು ಅದನ್ನು ಸರಿಯಾಗಿ ಪರಿವರ್ತಿಸುವ ವಿಷಯದಲ್ಲಿ ಆತನೆಂದೂ ಖಚಿತವಾಗಿರಲಾರ.

ಈ ಎಲ್ಲ ವಿಮಾನಮೇಷ ಎಣಿಕೆಯ ನಂತರ ಕಾಗದದ ತುಣುಕೊಂದನ್ನು ತೆಗೆದುಕೊಂಡು ಭಾಷಾಂತರವನ್ನು ಆರಂಭಿಸುತ್ತೇನೆ. ನನ್ನ ಮುಖ್ಯ ಉದ್ದೇಶ ಎಲ್ಲ ಅರ್ಥವನ್ನೂ ಪಡೆಯುವುದಾಗಿದ್ದು ನನ್ನ ಕರಡುಪ್ರತಿ ಎರಡು ಭಾಷೆಗಳ ನಡುವೆ ಓಲಾಡುತ್ತಿರುತ್ತದೆ; ಅದಕ್ಕೆ ಸರಿಯಾದ ರಂಗು ಮೂಡಿಸುವುದಕ್ಕೆ ಮತ್ತು ಗಹನ ಶಬ್ದಗಳಿಗೆ ಸಮಾನಾರ್ಥಕಗಳನ್ನು ಹುಡುಕಾಡುವುದಕ್ಕೆ ಸ್ವಲ್ಪಕಾಲ ತೆಗೆದುಕೊಳ್ಳುತ್ತೇನೆ. ಆದರೆ ಎಲ್ಲ ಸಂಕೀರ್ಣ ರಚನೆಗಳನ್ನು ಹಾಗೇ ರಹಸ್ಯವಾಗಿಟ್ಟು ಬಿಡುತ್ತೇನೆ. ಯಾವಾಗಲೂ ನನ್ನ ಬುದ್ಧಿಗೇ ಪೂರ್ತಿಯಾಗಿ ಅರ್ಥ ಹೊಳೆದು, ಅರಳಿ ಹೊಮ್ಮುತ್ತದೆಂದು ನಟಿಸಲಾರೆ. ಗ್ರಾಸ್ ಶೈಲಿಯ ಮುಖ್ಯ ಸಮಸ್ಯೆಗಳೆಂದರೆ ಅವನು ವಿರಳವಾಗಿ ಬಳಸುವ ಪಶ್ಚಿಮ ಪ್ರಷ್ಯನ್ ಉಪಭಾಷೆ, ಅಪೂರ್ಣ ವಾಕ್ಯಗಳು ಮತ್ತು ಪಾರಿಭಾಷಿಕ ಶಬ್ದಗಳು: ಸ್ಟೋನ್–ಕಟಿಂಗ್, ಪೊಟ್ಯಾಷ್ ಮೈನ್ಸ್, ವಿಂಡ್‌ಮಿಲ್ಸ್, ಮೈನ್‌ಸ್ವೀಪರ್ಸ್ ಹಾಗೂ ಕೊನೆಯಲ್ಲಿ ಡೆಂಟಿಸ್ಟ್ರಿ ಅಂಡ್ ಸಿಮೆಂಟ್ ಇಂಡಸ್ಟ್ರಿ. ಈ ಉಪಭಾಷೆಗೆ ಗ್ರಾಸ್‌ನನ್ನು ಬಿಟ್ಟು ಬೇರಾವ ಆಧಾರವೂ ಕಂಡುಬಂದಿಲ್ಲ. ಅಂತೆಯೇ ಅಪೂರ್ಣವಾಕ್ಯಗಳನ್ನು ಕುರಿತು ನನಗೆ ಊಹಿಸಲು ಸಾಧ್ಯವಾಗದಿದ್ದಾಗಲೂ ಹೀಗೆಯೇ. ಕೊನೆಯಲ್ಲಿ ಭೂತಕೃದಂತವನ್ನು ಬಿಟ್ಟು ಬಿಡುವ ಗ್ರಾಸ್‌ನ ತಂತ್ರ ಜರ್ಮನ್ ಭಾಷೆಯಲ್ಲಿ ಮಾತ್ರ ಸಾಧ್ಯ. ಇಂಗ್ಲಿಷಿನಲ್ಲಾದರೋ ಸಕರ್ಮಕ ಅಥವಾ ಅಕರ್ಮಕ ಶಬ್ದವನ್ನು ಬಿಡುವುದು ವಾಡಿಕೆ; ಆದರೂ ಇದಕ್ಕೆ ಸದೃಶವಾಗಿ ಇಂಗ್ಲಿಷ್‌ಭಾಷೆಯಲ್ಲೂ ಪಾತವನ್ನು (abortion) ಮಾಡುವುದಕ್ಕೆ ಮೊದಲು ಗ್ರಾಸ್ ಮನಸ್ಸಿನಲ್ಲಿದ್ದ ಕ್ರಿಯಾಪದಗಳೇನೆಂಬುದನ್ನು ನಾನು ತಿಳಿಯುವುದು ಅವಶ್ಯವಾಗುತ್ತದೆ.

ಪಾರಿಭಾಷಿಕ ಶಬ್ದಗಳ ವಿಷಯದಲ್ಲಿ ಹೇಳುವುದಾದರೆ ಅವಕ್ಕೆ ಸಂವಾದಿಯಾದ ಇಂಗ್ಲಿಷ್ ಸಮಾನಾರ್ಥಕಗಳ ಹುಡುಕಾಟದಲ್ಲಿರುವಷ್ಟು ಸಮಸ್ಯೆ ಜರ್ಮನ್ ಮೂಲವನ್ನು ಅರ್ಥಮಾಡಿಕೊಳ್ಳುವುದರಲ್ಲೇ ಇಲ್ಲ. ನಾನು ಸರಿಹೊಂದಿಸಿ ಪರಾಮರ್ಶಿಸುವುದುಂಟು—ದಂತಶಾಸ್ತ್ರಜ್ಞ, ಹಿಂದು ಕಾಲದ ನೌಕಾಧಿಕಾರಿ, ಗಣಿ ಇಂಜಿನಿಯರ್ ಮುಂತಾದವು. ಈಚಿನ ದಿನಗಳಲ್ಲಿ ಉಂಟಾಗುವ ಸಮಸ್ಯೆ ಎಂದರೆ ಗಾಳಿಯಂತ್ರಗಳನ್ನು ಕುರಿತು ಅಧಿಕಾರವಾಣಿಯಿಂದ ಮಾತನಾಡಬಲ್ಲವರನ್ನು ಪತ್ತೆಹಚ್ಚುವುದು. ಈ ವಿಷಯದ ಬಗ್ಗೆ ಗ್ರಂಥವನ್ನೊಮ್ಮೆ ಓದಿದೆ: ಗಾಳಿಯಂತ್ರದ ಬಾಲ್ಟಿಕ್ ಮಾದರಿ ಇಂಗ್ಲಿಷ್ ಮಾದರಿಗಿಂತ ಭಿನ್ನವೆಂಬುದು ದುರದೃಷ್ಟವಶಾತ್ ನನಗೆ ನೆನಪಾಗತೊಡಗಿತು. ಕಾಲವ್ಯಯವೆನ್ನಿಸಬಹುದಾದರೂ ಒಟ್ಟಿನಲ್ಲಿ ಅಂಥ ಪತ್ತೇದಾರಿ ಕೆಲಸ ಸಂತೋಷವನ್ನು ಉಂಟುಮಾಡುವಂಥದು. ಇದು ಕರಡುಪ್ರತಿಯ ಹಂತದಲ್ಲೇ ಉಂಟಾಯಿತೆಂದು ನಾನು ಸೋಗುಹಾಕಬಾರದು. ಹಾಗೇ ಖಾಲಿ ಬಿಡಲು ಇಷ್ಟಪಡದಿರುವುದರಿಂದ ಯಾವುದಾದರೂ ಸಮೀಪಾರ್ಥಕವನ್ನು ಹಾಕಿ ಬರವಣಿಗೆಯನ್ನು ಮುಂದುವರಿಸಿಕೊಂಡು ಹೋಗುತ್ತೇನೆ ಹಾಗೂ ಸಮಯ ಸಿಕ್ಕಾಗ ಸರಿಯಾದ ಮಾಹಿತಿ ಪಡೆದು ಸೇರಿಸಿಬಿಡುತ್ತೇನೆ.

ಸೆಲೈನ್ ಏನು ಹೇಳುತ್ತಾನೆಂಬುದನ್ನು ಅರ್ಥೈಸುವುದು ಊಹಿಸಿದಷ್ಟು ವ್ಯಾಪಕವಾಗಿ ಕಷ್ಟಕರವಾಗುವುದಿಲ್ಲ. ಅವನ ಭಾಷೆ ಕೆಳವರ್ಗದ ರಸತಂತ್ರದ 'ಸಂಕೇತಭಾಷೆ'ಯಲ್ಲವಾದರೂ ಬಹಳಷ್ಟು ಸಂಕೇತಭಾಷೆಯನ್ನು ಲೀನವಾಗಿಸಿಕೊಂಡ ಪ್ಯಾರಿಸ್ ಮತ್ತು ಅದರ ಸುತ್ತಮುತ್ತಲಿನ ಜನಪ್ರಿಯ ಭಾಷೆ. ಆದರೆ ಕೆಳವರ್ಗದ ಭಾಷಾಪ್ರಕಾರದಂತಲ್ಲದೆ ಮೊದಲಿನಿಂದಲೂ ಶ್ರೀಮಂತ ಜನಪ್ರಿಯ ಭಾಷೆ. ಆದರೆ ಕೆಳವರ್ಗದ ಭಾಷಾಪ್ರಕಾರದಂತಲ್ಲದೆ ಮೊದಲಿನಿಂದಲೂ ಶ್ರೀಮಂತವಾಗಿರುವ ಮತ್ತು ನಿರರ್ಗಳವಾಗಿ ಹರಿಯುವ ಈ ಜನಪ್ರಿಯ ಸಂಕೇತಭಾಷೆ ತಕ್ಕಮಟ್ಟಿಗೆ ದೃಢವಾದ ಬುನಾದಿಯನ್ನು ಹೊಂದಿದೆ. ಸುಮಾರು ಮೂವತ್ತೈದು ವರ್ಷಗಳ ಹಿಂದೆ ಪ್ಯಾರಿಸ್ಸಿನಲ್ಲಿ

ನಾನು ನೆಲಸಿದ್ದಾಗ ಅದು ಮಾಂಟ್ ಪರ್ನೆಸ್ ಕೆಫೆಗಳಲ್ಲಿನ ಪ್ರಧಾನ ಭಾಷೆಯಾಗಿದ್ದಿತು. ಆಗ ಈ ಭಾಷೆಯನ್ನು ತಕ್ಕಮಟ್ಟಿಗೆ ಕಲಿತಿದ್ದೆ. ಆಗಿನಿಂದ ಅದೇನೂ ಗುರುತಿಸಲಾಗದಷ್ಟು ಬದಲಾಗಿಲ್ಲವೆಂಬುದು ಗಮನಾರ್ಹ. ಸಂಕೇತಭಾಷೆಯ ಬಹಳಷ್ಟು ಶಬ್ದಗಳನ್ನು ಅನೇಕ ನಿಘಂಟುಗಳಲ್ಲಿ ಕಾಣಬಹುದು.

ಪರಂಪರೆ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದ ಉಲ್ಲೇಖಗಳನ್ನು ಅರ್ಥೈಸುವುದು ಹೆಚ್ಚು ಕ್ಲಿಷ್ಟ. ಸೆಲೈನ್‌ನನ್ನು ಭಾಷಾಂತರಿಸುವಾಗ ಹೆಚ್ಚು ಕಡಿಮೆ ಅದೇ ತಲೆಮಾರಿಗೆ ಸೇರಿದ ಮತ್ತು ಅದೇ ಹಿನ್ನೆಲೆಯುಳ್ಳ ಫ್ರೆಂಚ್ ಸ್ನೇಹಿತನೊಬ್ಬನೊಡನೆ ನಾನು ನಿಯತವಾಗಿ ಸಮಾಲೋಚನೆ ನಡೆಸುತ್ತಿದ್ದೆ. ಅದುಭಾಷೆಯ ಶೈಲಿಯ ಓಟ ಹಾಗೂ ಹುಚ್ಚುಚ್ಚಾಗಿ ಹಾಕಿದ ವಿರಾಮ ಚಿಹ್ನೆಗಳು (ಕೆಲವೊಮ್ಮೆ ಪ್ಯಾರಾದ ಕೊನೆಯಲ್ಲಿ ಬಿಟ್ಟು ಉಳಿದೆಡೆ ಎಲ್ಲೂ ಪೂರ್ಣವಿರಾಮಚಿಹ್ನೆಗಳಿರುವುದಿಲ್ಲ; ಆಗ ಅದು ಪ್ರೂಫ್‌ರೀಡರ್‌ನ ತಪ್ಪೆಂದು ಸಂದೇಹಿಸುತ್ತಿದ್ದೆ)—ಇವುಗಳಿಂದಾಗಿ ಯಾವುದು ಯಾವುದಕ್ಕೆ ಸಂಬಂಧಿಸುತ್ತದೆಂಬುದನ್ನು ನಿರ್ಧರಿಸುವುದು ಬಹುಶಃ ಅತ್ಯಂತ ಕಾಡುವ ಸಮಸ್ಯೆಯಾಗುತ್ತಿತ್ತು. ಅಂಥ ಭಾಗಗಳನ್ನು ಗಟ್ಟಿಯಾಗಿ ಓದಲು ನನ್ನ ಸ್ನೇಹಿತನನ್ನು ಕೋರುತ್ತಿದ್ದೆ. ಸಾಮಾನ್ಯವಾಗಿ ಅವನ ಸ್ಥಳೀಯ ಸಹಜ ಪ್ರವೃತ್ತಿ ಈ ಗೋಜಲನ್ನು ಬಿಡಿಸುತ್ತಿತ್ತು. ಕೆಲವೊಮ್ಮೆ ಆತ ಖಚಿತವಾಗಿ ತಿಳಿಸಲು ಬರುವುದಿಲ್ಲವೆಂದು ತೀರ್ಮಾನಿಸುತ್ತಿದ್ದ; ಅಂಥ ಕಡೆಗಳಲ್ಲಿ ಮೂಲದ ಸಂದಿಗ್ಧತೆಯನ್ನು ಪುನಸ್ಸೃಷ್ಟಿಸಲು ಪ್ರಯತ್ನಿಸುತ್ತಿದ್ದೆ.

ನನ್ನ ಬರಹದ ಈ ಹಾಳೆ ಹಾಗೂ ಇದರಂಥ ಇನ್ನೂ ಕೆಲವು ಮಾರನೆಯ ಬೆಳಗ್ಗೆ ಮಾಡಬೇಕಾದ ಮರುಪರಿಷ್ಕರಣಕ್ಕಾಗಿ ಸಿದ್ಧಪಡಿಸಿದ ಸ್ಥೂಲ ಕರಡಿನ ಒಂದು ಕಂತಾಗಿ ಪರಿಣಮಿಸುತ್ತವೆ. ಮೂಲಪಠ್ಯದ ನೆನಪುಗಳನ್ನು ರಾತ್ರಿ ನಿವಾರಿಸುತ್ತದೆಂದು ಭಾವಿಸಲಾಗಿದೆ. ಮುಂದಿನ ಹಂತ ಕಹಿಯಾದುದು, ಕೋಪತರಿಸುವಂಥದು—ಇದರಲ್ಲಿ ಮೂಲ ಲೇಖಕ ಹಾಗೂ ಆತನ ಭಾಷೆಯ ವಿರುದ್ಧ ನಾನೇ ಹೋರಾಟ ನಡೆಸಲು ಕಾರ್ಯೋನ್ಮುಖನಾಗುತ್ತೇನೆ: ಈ ಅಸಂಬದ್ಧ ಪದಕ್ರಮ ಯಾಕೆ? (ಬೇರೆ ಬೇರೆ ಕಾರಣಗಳಿದ್ದರೂ ಒಂದು ಪದ ಇನ್ನೊಂದರಷ್ಟೇ ಅಸಂಬದ್ಧವಾಗಿರುತ್ತದೆ). ಈತ ಸರಳ ಇಂಗ್ಲಿಷಿನಲ್ಲಿ ಏಕೆ ಬರೆಯಬಾರದಿತ್ತು? ಮೂಲಭಾಷೆಯ ಪ್ರತಿಯೊಂದು ಕುರುಹನ್ನೂ ನಿವಾರಿಸುತ್ತಲೇ ಅರ್ಥವನ್ನು ಉಳಿಸಿಕೊಳ್ಳಲು ಹಾಗೂ ಶೈಲಿಯ ಬಗ್ಗೆ ನನ್ನ ಪರಿಕಲ್ಪನೆ ಅಥವಾ ಭಾವನೆಗೆ ಅನುಗುಣವಾಗಿ ಮುಂದುವರಿಯಲು ಹೋರಾಟ ನಡೆಸುತ್ತೇನೆ.

ನಾನು ತಿಳಿಸಿದಂತೆ, ಗ್ರಾಸ್‌ನ ವಿಷಯದಲ್ಲಿ ಸ್ವಲ್ಪವಾದರೂ ಇಂಥ ಅನುಸರಣೆಗೆ ಈ ವಿಧಾನ ಅವಕಾಶನೀಡುವುದಿಲ್ಲ. ನುಡಿಗಟ್ಟುಗಳನ್ನು ಬದಲಿಸಿ, ವಾಕ್ಯಗಳನ್ನು ಬೇರೆ ಮಾಡಿ ಅವುಗಳನ್ನು ಮತ್ತೆ ಒಟ್ಟಿಗೆ ಜೋಡಿಸುತ್ತಿರುವಾಗ ಮೇಲ್ವಿಚಾರಕ ನನ್ನನ್ನು ಗಮನಿಸುತ್ತಿರುತ್ತಾನೆ. ಆತನಿಂದ ಏನೊಂದು ಸಹಾಯವೂ ಒದಗಿಬರುವುದಿಲ್ಲವಾದರೂ ಇಲ್ಲೊಂದು ಗಮನಿಸಬೇಕಾದ ಅಂಶವಿದೆ:—ಶ್ಲೇಷೆ. ಕೆಲವೊಮ್ಮೆ ಶ್ಲೇಷೆಯ ಶಬ್ದವೊಂದು ಸ್ವತಃ ಭಾಷಾಂತರಗೊಳ್ಳುವುದುಂಟು; ಇದಕ್ಕಾಗಿ ಜರ್ಮನ್ ಮತ್ತು ಇಂಗ್ಲಿಷ್‌ಗಳಲ್ಲಿನ ಸಜಾತೀಯ ಶಬ್ದಗಳಿಗೆ ಕೃತಜ್ಞತೆಗಳು ಸಲ್ಲುತ್ತವೆ. ಹಾಗೆ ಭಾಷಾಂತರವಾಗದಿದ್ದಲ್ಲಿ ಕೆಲವು ನಿಮಿಷಗಳ ಕಾಲ ಯೋಚಿಸುತ್ತೇನೆ; ಅನಂತರ ಬರೆಯುವುದನ್ನು ನಿಲ್ಲಿಸಿ ಹವಾಸೇವನೆಗೆ ಹೋಗುತ್ತೇನೆ; ಹಾಗೂ ಬಸ್ ಪ್ರಯಾಣ ಮಾಡುತ್ತೇನೆ—ಕೆಲವೊಮ್ಮೆ ಯಾವುದೇ ಉತ್ತಮ ಫಲಗಳು ದೊರೆಯದೆ. ತೀರ ದೂರ ಎಳೆದು ಅನ್ವಯಿಸಿದ ಮತ್ತು ಫಲಪ್ರದವಲ್ಲದ ಏನನ್ನೋ ಸಾಧಿಸುವುದಕ್ಕಿಂತ ಸೋಲನ್ನು ಒಪ್ಪಿಕೊಳ್ಳುವುದೇ ಉತ್ತಮವೆಂದು ನನಗನ್ನಿಸುತ್ತದೆ. ಏನೇ ಆದರೂ ಶ್ಲೇಷೆಯ ಶಬ್ದ ನಿಷ್ಕೃಷ್ಟವಾಗಿ ಒಂದೇ ಸ್ಥಾನದಲ್ಲಿ ಇರಬೇಕೆಂದಿಲ್ಲ. ಮುಂದಿನ ವಾಕ್ಯದಲ್ಲಿ ಅಥವಾ ಅದರ ನಂತರದ ವಾಕ್ಯದಲ್ಲಿ ಇಂಗ್ಲಿಷ್ ಭಾಷೆಗೆ ಸಹಜವಾದ ಶ್ಲೇಷೆ ಹೊಮ್ಮಬಹುದು.

ಸೆಲೈನಿನ ವಿಷಯದಲ್ಲಿಯೂ ಸಮಗ್ರ ಪರಿಕಲ್ಪನೆ ಅಥವಾ ದೂರದ ವಾಣಿಯೊಂದು ನನ್ನನ್ನು ನಿಯಂತ್ರಿಸುತ್ತದೆಂದು ನನಗನ್ನಿಸುತ್ತದೆಯಾದರೂ ಪ್ರತಿಯೊಂದು ಕ್ಷಣದಲ್ಲೂ ನನ್ನ ಕೈಯನ್ನು ತಡೆಹಿಡಿದಂತಾಗುವುದಿಲ್ಲ. ಆತ ಯಾವಾಗಲೂ ನಿಂತು ಮುಂದುವರಿಯುತ್ತಾನೆ; ಅಲ್ಲಿ ರಭಸವಿದೆ, ಆದರೆ ಎಲ್ಲೆಡೆ ಅದು ಭಾಷಾಂತರಕಾರನನ್ನೂ ಸೆಳೆದುಕೊಂಡು ಹೋಗುವ ಅನ್ವಯದ ರಭಸವಲ್ಲ. ಸೆಲೈನ್ ಶೈಲಿಯಿಂದಾಗಿ ಮಾತ್ರವೇ ಅಲ್ಲ, ಇಂಗ್ಲಿಷಿಗೆ ಹರಿದು ಬರಲು ತುಂಬ ಒಗ್ಗದ ಪ್ರವೃತ್ತಿಯ ಫ್ರೆಂಚ್‌ನ ಆಡುಭಾಷೆಯ ಸ್ವರೂಪದಿಂದಾಗಿ ಕೂಡ ಈ ಶಬ್ದ ಮತ್ತು ನುಡಿಗಟ್ಟುಗಳು ಸ್ವಯಂ ಒಡಂಬಡುವ ವಲಯಕ್ಕೆ ಸೇರುವುದು ವಿರಳ. ಜರ್ಮನ್ ಮತ್ತು ಇಂಗ್ಲಿಷ್ ಆಡುಭಾಷೆಗಳೂ ಇಂಥವೇ ಮಾದರಿಗಳನ್ನು ಅನುಸರಿಸುತ್ತವೆ; ಅನೇಕ ಸಮಾನವಾದ ನುಡಿಗಟ್ಟುಗಳು ಇವೆ. ಸಾಹಿತ್ಯಿಕ ಭಾಷೆಯ ಅತಿವೈಚಾರಿಕತೆಗೆ ಬಹುಶಃ ಪ್ರತಿಕ್ರಿಯೆಯಾಗಿ ಫ್ರೆಂಚ್ ಆಡುಭಾಷೆ ಅದ್ಭುತವಾಗಿ ಸ್ವೋಪಜ್ಞ, ಚಟುವಟಿಕೆಯ ಮತ್ತು ವಿಚಾರಹೀನರಾದ ಜನರ ಹೃದಯದಿಂದ ನೇರವಾಗಿ ಹೊಮ್ಮುತ್ತದೆ; ವಾಸ್ತವವಾಗಿ ಅವರನ್ನು ವಿಚಾರಹೀನರೆನ್ನುವಂತಿಲ್ಲ; ಅವರು ಅಪೇಕ್ಷಿಸಿದ್ದರೆ ವಿಚಾರವಂತರಾಗಿದ್ದಿರಬಹುದಿತ್ತು. ಆದರೆ ಅವರು (ಜ್ಞಾನದ) ಹೆಜ್ಜೆಗಳನ್ನು ಜರೆಸುವ ಅಥವಾ ಒಂದು ಇಲ್ಲವೇ ಅನೇಕ ಹೆಜ್ಜೆಗಳನ್ನು ಹಾರಿಸಿಬಿಡುವ ಮಾರ್ಗವನ್ನು ಆರಿಸಿಕೊಂಡರು, ಅಷ್ಟೇ.

ಇಂಗ್ಲಿಷ್ ಅಥವಾ ಕೆಲವು ಪರಿಕಲ್ಪನೆಗಳಿಗೆ ಇರುವ ಅಭಿವ್ಯಕ್ತಿಗಳಲ್ಲಾದರೂ ಜನಪ್ರಿಯ ಫ್ರೆಂಚ್ ಭಾಷೆ ನನ್ನ ಆಂಗ್ಲೋ–ಅಮೆರಿಕನ್ ಭಾಷೆಗಿಂತಲೂ ತುಂಬ ಹೆಚ್ಚು ಶ್ರೀಮಂತವಾದುದಾಗಿದೆ. ಅಸಂಬದ್ಧತೆ, ತಮಾಷೆ ಮಾಡುವಿಕೆ, ಪಲಾಯನ, ವಿಶ್ವಾಸದ್ರೋಹ, ಬೂಟಾಟಿಕೆ ಮುಂತಾದ ವಿಷಯಗಳಲ್ಲಿ ಇರುವ ಶಬ್ದ ಅಥವಾ ನುಡಿಗಟ್ಟುಗಳ ಸಮೃದ್ಧಿ ತತ್ತರಿಸುವಂತೆ ಮಾಡುತ್ತದೆ. ಇದಕ್ಕಿರುವ ಪರಿಹಾರವೆಂದರೆ ಹೊಸಶಬ್ದಗಳ ರಚನೆ ಮತ್ತು ಗತಕಾಲದ ಕೆಲವು ಅಸಂಸ್ಕಾರಿ ಶಬ್ದಗಳನ್ನು ಮತ್ತೆ ಬಳಕೆಗೆ ತರುವ ಪ್ರಯತ್ನ ಮಾಡುವುದು. ಎರಡೂ ಸಮರ್ಥನೆಗೆ ಅರ್ಹವಾದುದೆಂದು ನನಗನ್ನಿಸುತ್ತದೆ; ಏಕೆಂದರೆ ಸೆಲೈನ್ ಕೂಡ ಹೊಸ ಶಬ್ದಗಳನ್ನು ಸೃಷ್ಟಿಸುತ್ತಾನೆ ಹಾಗೂ ಒಂದೇ ಕಾಲದಲ್ಲಿ ಎಲ್ಲವೂ ಪ್ರಚಲಿತವಿಲ್ಲದಿದ್ದ ಶಬ್ದಗಳನ್ನು ಕೂಡ ಬಳಸುತ್ತಾನೆ.

ಒಂದು ವಾಕ್ಯವನ್ನು ಓದಿ ಅದನ್ನೇ ನನ್ನ ಭಾಷೆಯಲ್ಲಿ ಅಥವಾ ನಾನು ಭಾಷಾಂತರಿಸಬೇಕೆಂದಿರುವ ಕೆಲವೊಮ್ಮೆ ಆಡುನುಡಿಯ ವರ್ಗದಲ್ಲಿ ನಿಲ್ಲುವ ಜನಪ್ರಿಯ ಭಾಷೆ ಮತ್ತು ಸಾಹಿತ್ಯಿಕ ಸರ್ಕಸ್‌ಗಳ ಮಿಶ್ರಣಗಳಿಗೆ ಸಂವಾದಿಯಾದದ್ದೆಂದು ಭಾವಿಸಲಾಗಿರುವ ಭಾಷೆಯಲ್ಲಿ ಹೇಗೆ ತಿಳಿಸಬಹುದೆಂಬುದನ್ನು ಕುರಿತು ಆಲೋಚಿಸುತ್ತೇನೆ. ಗ್ರಾಸ್ ಶೈಲಿಯ ಶ್ಲೇಷೆಗಳ ಹಾಗೆಯೇ ಶಬ್ದ ಮತ್ತು ನುಡಿಗಟ್ಟುಗಳ ವಿಕೃತರೂಪಗಳನ್ನು ಸದಾ ಅದೇ ಕ್ರಮದಲ್ಲಿ ತರಲಾಗುವುದಿಲ್ಲ; ಇಂಗ್ಲಿಷ್ ಭಾಷೆಯಲ್ಲಿ ಅವು ಹೊಮ್ಮುವಂತೆ ಮಾಡಬೇಕು. ಕೆಲವೊಮ್ಮೆ ನಾಟಕವೊಂದನ್ನು ಆಡುತ್ತಿರುವ ಹಾಗೆ ಗಟ್ಟಿಯಾಗಿ ಇಂಗ್ಲಿಷನ್ನು ಓದುತ್ತೇನೆ—ಭಾಗಶಃ ಅದರ ಲಯ ಮತ್ತು ಧ್ವನಿಗಾಗಿ ಹಾಗೂ ಭಾಗಶಃ ಏಕೆಂದರೆ ಕೆಲವೊಮ್ಮೆ ಮೂಕ ಮನಸ್ಸಿನಲ್ಲಿ ಉದಯಿಸದ ವಿಚಾರಗಳು ನಾಲಗೆಗೆ ಲಭ್ಯವಾಗುವುದುಂಟು.

ನಾಟಕಗಳ ಹೊರತಾಗಿ ಸೆಲೈನ್ ಕೃತಿಯ ಭಾಷಾಂತರದಲ್ಲಿ ನಾನಷ್ಟು ಸೂಕ್ಷ್ಮವಾಗಿನ್ನೂ ಅಧ್ಯಯನ ಮಾಡದಿರುವ ವಿಶೇಷ ಸಮಸ್ಯೆ ಎಂದರೆ ಅದರ ಲಂಬತೆ. ಗ್ರಾಸ್‌ನಲ್ಲಿ ಮತ್ತು ಇತರ ಅನೇಕ ಗದ್ಯ ಬರಹಗಾರರಲ್ಲಿ ಭಾಷಾಂತರವು 'ಸಹಜವಾಗಿ' ಮೂಲದಷ್ಟೇ ದೀರ್ಘವಾಗಿ ಹೊಮ್ಮುತ್ತದೆ. ಆದರೆ ಅನೇಕ ಸರಳ ಫ್ರೆಂಚ್ ಶಬ್ದಗಳು ವಿಸ್ಮಯಕರವಾಗಿ ಸಂಕ್ಷಿಪ್ತವಾಗಿರು

ತ್ರವೆ ಮತ್ತು ಅಂಥವನ್ನು ಭಾಷಾಂತರಿಸಲು ಆಶ್ಚರ್ಯವನ್ನುಂಟುಮಾಡುವಷ್ಟು ಸಂಖ್ಯೆಯ ಶಬ್ದಗಳು ಅಗತ್ಯವಾಗುತ್ತವೆ. ಅನೇಕ ಫ್ರೆಂಚ್ ಅಧ್ಯಾಹಾರಗಳು ಇಂಗ್ಲಿಷಿನಲ್ಲಿ ಬಳಕೆಗೆ ಬರುವುದಿಲ್ಲ. ಮೂಲಕ್ಕಿಂತ ಭಾಷಾಂತರವು ಹೆಚ್ಚು ದೀರ್ಘವಾಗಿರಬಾರದು ಎಂಬ ಹೇಳಿಕೆಗೆ ಯಾವುದೇ ನಿಯಮವಿಲ್ಲವಾದರೂ ವ್ಯತ್ಯಾಸ ಅತಿಯಾಗಿದ್ದರೆ ಮುದ್ರಣದ ನಿಯಮವನ್ನು ಬಿಟ್ಟು ಲಯ ನಷ್ಟವಾಗಿಬಿಡುತ್ತದೆ. ಅಚ್ಚುಕಟ್ಟಾದ ಇಂಗ್ಲಿಷ್ ರಚನೆಗಳಿಗಾಗಿ (ಹಲವಿದ್ದರೂ ಅವು ಫ್ರೆಂಚ್ ಶಬ್ದಗಳಿಗೆ ಸಂವಾದಿಯಾಗುವುದು ವಿರಳ) ಮತ್ತು ಸಂಭವನೀಯ ಇಂಗ್ಲಿಷ್ ಅಧ್ಯಾಹಾರಗಳಿಗಾಗಿ ಭಾಷಾಂತರಕಾರ ಎಚ್ಚರಿಕೆಯಿಂದ ಸದಾ ನೋಡಬೇಕಾಗುತ್ತದೆ.

ಮೂಲಕ್ಕೆ ವಿಧೇಯವಾಗಿರಬೇಕೆಂದು ನಾನು ಪ್ರಯತ್ನಿಸಿ, ನಿರಾಶೆ ಹೊಂದಿ, ಸ್ವತಂತ್ರವಾಗಿರಬೇಕಾದ ಪ್ರಮೇಯ ಬಂದ ಭಾಷಾಂತರ ಈ ರೀತಿಯದು; ನನಗೆ ಅತ್ಯಂತ ತೃಪ್ತಿಯನ್ನು, ಆದರೆ ಜಾಗರೂಕತೆಯಿಂದ ಮುಕ್ತವಲ್ಲದ ತೃಪ್ತಿಯನ್ನು, ಅದು ನೀಡುತ್ತದೆ. ನಾನು ಬಳಸಿದ ಕೆಲವು ಸಮಾನಾರ್ಥಕಗಳನ್ನು ಹೆಚ್ಚು ಕಡಿಮೆ ವಸ್ತುನಿಷ್ಠ ಮಾನದಂಡಗಳಿಂದ ನೋಡಿ ಪ್ರಶಂಸಿಸಬಹುದಾದರೂ, ಹೆಚ್ಚಿನವು ಪ್ರಶಂಸಾರ್ಹವಲ್ಲ. ಕಾಲ, ವಿಮರ್ಶಕರು ಹಾಗೂ ನಿರೀಕ್ಷಕ ವಾಚಕರ ಸನುಷ್ಠಿಪ್ರಜ್ಞೆ ಅಥವಾ ಅಪ್ರಜ್ಞೆ—ಇವೇ ಹೇಳಬಲ್ಲವು. ಈ ಕಲೆಯಲ್ಲಿ ಎದುರಾಗುವ ಅಪಾಯ ಮತ್ತು ಅನಿರ್ದಿಷ್ಟತೆಗಳ ಬಗ್ಗೆ ಒಂದು ಕಲ್ಪನೆಯನ್ನು ಮೂಡಿಸುವುದಕ್ಕಾಗಿ ಈ ದೃಷ್ಟಾಂತವನ್ನು ತಿಳಿಸುತ್ತೇನೆ: 'ಡೆತ್ ಆನ್ ದಿ ಇನ್‌ಸ್ಟಾಲ್‌ಮೆಂಟ್ ಪ್ಲಾನ್' ಎಂಬ ಕೃತಿಯನ್ನು ಭಾಷಾಂತರಿಸುತ್ತಿದ್ದ ಸಮಯ: 'ಕ್ರಿಯಾಶೀಲ ಗೊಂದಲ'ದ ಬಗ್ಗೆ ಕೋರ್ಟಿಯಲ್‌ನ ಸ್ವಗತವನ್ನು ನನ್ನ ಮಗಳ ಮುಂದೆ ಓದಿ ಹೇಳಿದೆ. ತನಗದು ಮಾರ್ಕ್‌ಟ್ವೈನಿನ ಶೈಲಿಯಂತೆ ಭಾಸವಾಯಿತೆಂದು ಅವಳು ಹೇಳಿದಳು. ಆ ಸಮಯದಲ್ಲಿ ನಾನು ಓದುತ್ತಿದ್ದುದು ಕರಡು ಪ್ರತಿ ಎಂಬುದನ್ನು ಒಪ್ಪಿಕೊಳ್ಳಬೇಕು. ಬೇರೆ ಯಾರಾದರೂ ಮಾರ್ಕ್‌ಟ್ವೈನಿನ ಹಾಗೆ ನನ್ನ ಬರಹವಿದೆ ಎಂದು ತಿಳಿಸಿದ್ದರೆ ನನಗೆ ಸಂತೋಷವಾಗುತ್ತಿತ್ತು. ಆದರೆ ಸೆಲೈನ್ ಭಾಷಾಂತರ ? ಈ ಭಾಗದ ಅನುವಾದವನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ನಾನು ಬದಲಾಯಿಸಬಯಸುವಂಥದ್ದು ಏನೂ ನನಗೆ ಕಂಡುಬರಲಿಲ್ಲ. ಕೊನೆಯಲ್ಲಿ ಅವಳ ಮುಂದೆಯೇ ಫ್ರೆಂಚ್ ಭಾಷೆಯಲ್ಲಿ ಅದೇ ಭಾಗವನ್ನು ಓದಿ ಹೇಳಿದೆ. ಆಗಲೂ ಮಾರ್ಕ್‌ಟ್ವೈನಿನ ಶೈಲಿಯ ಭಾವನೆ ಬಂದಿತೆಂದು ಹೇಳಿದಳು; ಆದರೆ ಬಹುಶಃ ನಂಬಿಕೆಗಿಂತ ಹೆಚ್ಚಾಗಿ ನನ್ನ ಮೇಲಿನ ಪ್ರೀತಿಯಿಂದಷ್ಟೇ.

ಕೊನೆಯ ಹಂತಗಳು ಶುದ್ಧವಾಗಿ ಟೈಪುಮಾಡಿದ ಹಸ್ತಪ್ರತಿ ಮತ್ತು ಕರಡು ತಿದ್ದುವುದು, ಇವುಗಳನ್ನು ಒಳಗೊಂಡಿವೆ—ದೊಡ್ಡ ಸಮಸ್ಯೆಗಳೆಲ್ಲ ಪರಿಹಾರವಾಗಿವೆ ಎಂಬ ಗ್ರಹಿಕೆಯಿಂದ. ಭಾಷಾಂತರಕಾರ ಹೆಚ್ಚು ವೇಗವಾಗಿ ಓದುತ್ತ ಹೋದಂತೆ, ಈ ಮೊದಲು ತಪ್ಪಿಸಿಕೊಂಡಿದ್ದ ಶಬ್ದಗಳ ಅನಪೇಕ್ಷಿತ ಪುನರಾವರ್ತನೆ, ತೊಂದರೆ ಕೊಡುವ ಮತ್ತು ಉದ್ದೇಶರಹಿತ ಪ್ರಾಸಗಳು, ಅಸಾಂಗತ್ಯಗಳು ಅಥವಾ ಹಿಂದಿನ ಹಂತದಲ್ಲಿ ಅವನ ಗಮನ ಕಡಿಮೆಯಾಗಿ ಸಂಭವಿಸಿದ ಅವ್ಯವಸ್ಥೆಗಳು ಇವೇ ಮುಂತಾದ ವಿವರಗಳನ್ನು ಗಮನಿಸುತ್ತಾನೆ. ಆಗಾಗ ಪುಟವೊಂದು ಮತ್ತೆ ರಚಿತವಾಗಬೇಕಾದ ಪ್ರಮೇಯ ಬರುವುದುಂಟು. ಕೃತಿಯೊಂದನ್ನು ಕೊನೆಯ ಪಕ್ಷ ನಾಲ್ಕು ಸಲವಾದರೂ ಪರಿಶ್ರಮದಿಂದ ಕೈಯಾಡಿಸುವ ಕಾರ್ಯದಿಂದ ಭಾಷಾಂತರಕಾರ ಹೇಗೆ ತಪ್ಪಿಸಿಕೊಳ್ಳಬಲ್ಲನೆಂಬುದು ನನಗೆ ಅರ್ಥವಾಗುವುದಿಲ್ಲ. ಪ್ರತಿಸಲವೂ ಯಾರಿಗಾದರೂ ಏನಾದರೂ ದೋಷ ಕಾಣಿಸಿಕೊಳ್ಳುತ್ತದೆ. ಪ್ರಕಟಣೆಯ ನಂತರ ಕೃತಿಯೊಂದನ್ನು ಓದಲು ಕೈಗೆತ್ತಿಕೊಂಡರೆ ಆಗಲೂ ಏನಾದರೂ ದೋಷ ಕಂಡುಬರುವ ಸಾಧ್ಯತೆ ಇರುತ್ತದೆ. ನೋಡದಿರುವುದನ್ನೇ ನಾನು ಆರಿಸಿಕೊಂಡುಬಿಡುತ್ತೇನೆ!

ಎಸ್. ವೇಣುಗೋಪಾಲಾಚಾರ್ಯ

ಪ್ರಾಚೀನ ಬೃಹದ್ಭಾರತ ಹಾಗೂ ಹಿಂದೂಧರ್ಮ

ಭಾರತೀಯ ಸಂಸ್ಕೃತಿ ಪ್ರಧಾನವಾಗಿದ್ದ ಚಂಪಾರಾಜ್ಯವು ಈಗ ಇಂಡೋಚೀನಾದ ಅನ್ನಾಂ ರಾಜ್ಯವೆನಿಸಿಕೊಂಡಿದೆ. ಅಲ್ಲಿಯ ಕ್ರಿಸ್ತಶಕ 2ನೆಯ ಶತಮಾನದಲ್ಲಿ ಕೆತ್ತಿದ ಪಲ್ಲವಲಿಪಿಯಲ್ಲಿರುವ ಸಂಸ್ಕೃತ ಶಾಸನವು ಒಕನ್ಹ್ ಎಂಬಲ್ಲಿ ಸಿಕ್ಕಿದೆ. ಇದರಲ್ಲಿರುವ ಒಕ್ಕಣೆಯಂತೆ ಅಲ್ಲಿ ಶ್ರೀಮಾರವಂಶದ ರಾಜರೂ, ಸತ್ರಂಗ್‌ನಲ್ಲಿ ಕೌಠಾರವಂಶದ ರಾಜರೂ ಮತ್ತು ಫನ್ರಂಗ್‌ನಲ್ಲಿ ಪಾಂಡುರಂಗವಂಶದ ರಾಜರೂ ಆಳುತ್ತಿದ್ದರೆಂದು ತಿಳಿಯುತ್ತದೆ. ಹತ್ತನೆಯ ಶತಮಾನದಲ್ಲಿ ಅನ್ನಮೈಟರು ಚಂಪಾರಾಜ್ಯವನ್ನು ಆಕ್ರಮಿಸಲು ಅಲ್ಲಿಯ ರಾಜನಾದ ಹರಿವರ್ಮನು ರಾಜಧಾನಿಯನ್ನು ವಿಜಯ (ಬಿನ್ಹ್ ದಿನ್ಹ್) ಎಂಬ ಪಟ್ಟಣಕ್ಕೆ ಬದಲಾಯಿಸಿದನು.

ಕ್ರಿ.ಶ. 658 ರಲ್ಲಿ ಬ್ರಹ್ಮದೇಶದ ಮೀನಂ ನದಿಯ ಮುಖಜ ಭೂಮಿಯಲ್ಲಿ ದ್ವಾರಾವತೀ, ಐರಾವತೀ ನದಿಗರ ಪಕ್ಕದಲ್ಲಿ ಶ್ರೀ ಕ್ಷೇತ್ರ, ಕ್ರಿ.ಶ. 680ರಲ್ಲಿ ಮಲಯದ ಶ್ರೀವಿಜಯ, ಕ್ರಿ.ಶ. 750 ರಲ್ಲಿ ಜಾವಾದಲ್ಲಿ ಶೈಲೇಂದ್ರ ರಾಜ್ಯಗಳು ಭಾರತೀಯರಿಂದ ಸ್ಥಾಪಿಸಲ್ಪಟ್ಟವೆಂದು ತಿಳಿದುಬರುತ್ತದೆ.

ಸಯಾಂನಲ್ಲಿ ಕ್ರಿಸ್ತಶಕ ಹದಿನೈದನೆಯ ಶತಮಾನದವರೆಗೆ ಪ್ರಸಿದ್ಧವಾಗಿದ್ದ ಸುಖೋದಯ ಮತ್ತು ಸಜ್ಜನಾಲಯಗಳೆಂಬ ಹಿಂದೂ ರಾಜ್ಯಗಳಲ್ಲಿ ಗುಪ್ತ ಮತ್ತು ಪಲ್ಲವ ಶಿಲ್ಪಗಳ ಅವಶೇಷಗಳನ್ನು ರಾಜಪುರಿ, ಚಾಂತಪುರಿ ಮತ್ತು ಕೇಡಾಗಳಲ್ಲಿಯೂ ಅಯುತಿಯಾವಿನಲ್ಲಿ (ಅಯೋಧ್ಯಾ) ಪೌರಾಣಿಕ ದೇವೀದೇವತೆಗಳ ಹಾಗೂ ನರಸಿಂಹ ಮೂರ್ತಿಗಳನ್ನೂ ವಿಯೆನ್ಸ್ರಾವಿನ ವಿಷ್ಣು ಮತ್ತು ಜಯಾವಿನ ಲೋಕೇಶ್ವರ ಪ್ರತಿಮೆಗಳನ್ನು ಬಾಂಗ್‌ಕಾಕಿನ ರಾಷ್ಟ್ರೀಯ ಪುಸ್ತಕಾಲಯಗಳಲ್ಲಿ ಸುರಕ್ಷಿತವಾಗಿಟ್ಟಿದ್ದಾರೆ.

ಬ್ರಹ್ಮದೇಶ, ಮಲಯ, ಕಾಂಭೋಜ ಮತ್ತು ಆಗ್ನೇಯ ಸಮುದ್ರ ದ್ವೀಪಗಳು ಸಹಸ್ರಾರು ವರ್ಷಗಳಿಂದ ಬೃಹದ್ಭಾರತದ ಭಾಗಗಳಾಗಿದ್ದು, ಈಗ ಸುಮಾರು ಮೂರುನಾಲ್ಕು ಶತಮಾನಗಳಿಂದ ಕ್ರಮೇಣ ಭಾರತದಿಂದ ದೂರವಾಗುತ್ತಿರುವುದು ಅತ್ಯಂತ ಶೋಚನೀಯವಾದ ವಿಷಯ.

ಅಶೋಕನು ಮಗಧಸಾಮ್ರಾಜ್ಯದ ಚಕ್ರವರ್ತಿಯಾಗಿದ್ದಾಗ ಬ್ರಹ್ಮದೇಶ (ಬರ್ಮಾ) ಕ್ಕೆ ಕಪಿಲವಸ್ತುವಿನ ಅಭಿರಾಜನು ರಾಜನಾಗಿದ್ದನು. ಕ್ರಿಸ್ತಶಕದ ಮೊದಲನೆಯ ಶತಾಬ್ದಿಯಲ್ಲಿ ಪ್ರೋಂ ಮತ್ತು ಥಾಟನ್‌ನ ಪ್ರದೇಶಗಳಲ್ಲಿ ಶ್ರೀಕ್ಷೇತ್ರ ಮತ್ತು ವಿಷ್ಣುನಗರಗಳೆಂಬ ಭಾರತೀಯ

ಉಪನಿವೇಶಗಳು ವೈದಿಕ ಮತ್ತು ಬೌದ್ಧ ಧಾರ್ಮಿಕ ಕೇಂದ್ರಗಳಾಗಿದ್ದವು. ಐದನೆಯ ಶತಮಾನದಲ್ಲಿ ಆ ಪ್ರದೇಶದಲ್ಲಿ ನಿರ್ಮಿತವಾದ ವೈಷ್ಣವ ಮತ್ತು ಶೈವ ದೇವಾಲಯಗಳನ್ನೂ ಬೌದ್ಧ ಸ್ತೂಪಗಳನ್ನೂ ಹ್ಲಾಂಗ್ ಗೂಂಗ್ ನಗರದ ಬಳಿ ಒಂಭತ್ತನೆಯ ಶತಮಾನದಲ್ಲಿ ನಿರ್ಮಿತವಾದ ವೈಷ್ಣವನಾಥ ಮಂದಿರದ ದಶಾವತಾರ ಶಿಲ್ಪಗಳ ಅವಶೇಷಗಳನ್ನೂ ಇಂದಿಗೂ ನೋಡಬಹುದಾಗಿದೆ. ಬರ್ಮಾಯರಲ್ಲಿ ಜಾತ್ರೆ, ಶ್ರಾದ್ಧ, ಮದುವೆ ಇತ್ಯಾದಿ ಸಂದರ್ಭಗಳಲ್ಲಿ ಪೌರಾಣಿಕ, ಜಾತಕ ಮತ್ತು ರಾಮಾಯಣದ ವಿಶಿಷ್ಟ ಘಟನೆಗಳನ್ನು ನೆರಳು ನಾಟಕಗಳಲ್ಲಿ ಪ್ರದರ್ಶಿಸುವ ಪದ್ಧತಿಯು ಈಗಲೂ ರೂಢಿಯಲ್ಲಿದೆ. ಬ್ರಿಟಿಷರು 19ನೆಯ ಶತಮಾನದಲ್ಲಿ ತಮ್ಮ ವಶಪಡಿಸಿಕೊಳ್ಳುವವರೆಗೂ ಬರ್ಮಾದ ಪ್ರತಿಯೊಂದು ಪಟ್ಟಣಕ್ಕೂ ಮತ್ತು ಪ್ರತಿಯೊಬ್ಬ ರಾಜರಿಗೂ ಬರ್ಮಾವ ಹೆಸರಲ್ಲದೆ ಸಂಸ್ಕೃತ ಭಾಷೆಯ ಹೆಸರುಗಳಿರುತ್ತಿದ್ದವು. ಅರಿಮರ್ದನಪುರ, ಹಂಸವತೀ, ಸುಧರ್ಮವತೀ ಎಂಬ ಪಟ್ಟಣಗಳ ಹೆಸರುಗಳೂ, ಅನೋರಥ, ಜಯತಾಂಕ ಮತ್ತು ನರಪತಿ ಸೀತು ಎಂಬ ರಾಜರ ಹೆಸರುಗಳೂ ಇವುಗಳಿಗೆ ಉದಾಹರಣೆಗಳಾಗಿವೆ. ಗಂಗಾ, ಬ್ರಹ್ಮಪುತ್ರ, ಐರಾವತೀ ಮತ್ತು ಮಾಗಂಗಾ (ಮೀಕಾಂಗ್) ನದೀ ಮತ್ತು ಅವುಗಳ ಪಕ್ಕದ ಕಣಿವೆಗಳ ಮೂಲಕ ಉತ್ತರ ಭಾರತದಿಂದ ಹಿಂದೂ ಚೀಣ ಮತ್ತು ಆಗ್ನೇಯ ಏಷ್ಯಾದ ಮಲಯ, ಕಾಂಭೋಜ, ಚಂಪಾ, ಶ್ರೀವಿಜಯ ರಾಜ್ಯಗಳಿಗೆ ಭೂಮಾರ್ಗವಾಗಿಯೂ ತಾಮ್ರಲಿಪ್ತಿ, ಗೋಪಾಲಪುರ, ಮಚಲೀಪಟ್ಟಣ, ಕಾಂಚೀ, ಕಾವೇರೀಪಟ್ಟಣ, ಗೂಡೂರು, ಕೊಚ್ಚಿ, ಶೂರ್ಪಾರಕ ಬಂದರುಗಳಿಂದ ದೋಣಿ, ಹಡಗು, ಮೊದಲಾದವುಗಳಿಂದ ಜಲಮಾರ್ಗದಲ್ಲಿ, ವಿಜಯನಗರ ಸಾಮ್ರಾಜ್ಯದ ಅಧಃಪತನವಾಗುವವರೆಗೂ ವ್ಯಾಪಾರ ಮತ್ತು ಸಂಸ್ಕೃತಿಯ ಆದಾನ ಪ್ರದಾನವೂ ಜಾರಿಯಲ್ಲಿತ್ತು.

ಹದಿನೈದನೆಯ ಶತಮಾನದಿಂದ ಮಹಮ್ಮದೀಯರ ಆಕ್ರಮಣ ಮತ್ತು ಹತ್ತೊಂಬತ್ತನೆಯ ಶತಮಾನದಿಂದ ಐರೋಪ್ಯರ ಆಕ್ರಮಣಗಳು ಆ ದೇಶಗಳಲ್ಲಿ ಹಿಂದೂಗಳ ರಾಜನೈತಿಕ ಸಾಮ್ರಾಜ್ಯವನ್ನು ನಾಶಪಡಿಸಿದರೂ ಅವುಗಳಲ್ಲಿ ಅದರ ಪ್ರಭಾವವು ಸಾಕಷ್ಟು ಉಳಿದಿರುವುದನ್ನು ಈಗಲೂ ಕಾಣಬಹುದಾಗಿದೆ. ಫಿಲಿಪ್ಪೈನ್ಸ್‌ನ ಅಧಿಕಜನರು ಕ್ರೈಸ್ತಧರ್ಮಕ್ಕೂ ಇಂಡೋನೇಷಿಯಾ ಮತ್ತು ಮಲೇಷಿಯಾದ ಬಹುಭಾಗದ ಜನರು ಇಸ್ಲಾಂ ಧರ್ಮಕ್ಕೂ ಮತಾಂತರಗೊಂಡಿದ್ದರೂ ಭಾರತೀಯ ಸಂಸ್ಕೃತಿಯ ಪ್ರಭಾವವು ಅವರಲ್ಲಿ ಇನ್ನೂ ಹಾಗೇ ಉಳಿದಿರುವುದು ಗೋಚರವಾಗುತ್ತದೆ. ಹತ್ತೊಂಬತ್ತನೆಯ ಶತಮಾನದಲ್ಲಿ ತಮಿಳನ್ನರಿಯದೆ ಸುಮಾತ್ರಾದೊಡನೆ ವ್ಯಾಪಾರ ನಡೆಸುವುದೇ ಕಷ್ಟವಾಗಿತ್ತೆಂದು ಮಲೇಷಿಯದ ಚರಿತ್ರಕಾರ ಫೇ ಕೂಪರ್ ಕೋಲ್ ತನ್ನ 'ದಿ ಪೀಪಲ್ಸ್ ಆಫ್ ಮಲೇಷಿಯಾ'ದಲ್ಲಿ ತಿಳಿಸಿದ್ದಾನೆ (ಪುಟ 21).

ವಾಲ್ಮೀಕಿ ರಾಮಾಯಣದ ಕಿಷ್ಕಿಂಧಾಕಾಂಡದ ನಲವತ್ತನೆಯ ಸರ್ಗ ಮೂವತ್ತನೆಯ ಶ್ಲೋಕದಲ್ಲಿ ಏಳು ರಾಜ್ಯಗಳುಳ್ಳ ಯವದ್ವಿಪ ಮತ್ತು ಸುವರ್ಣಕಾಂತಿಯಿರುವ ಸುಮಾತ್ರಾ ದ್ವೀಪಗಳು ಸೂಚಿತವಾಗಿವೆ.

> ಯತ್ನವನ್ತೋ ಯವದ್ವೀಪಂ ಸಪ್ತರಾಜ್ಯೋಪಶೋಭಿತಂ
> ಸುವರ್ಣರೂಪ್ಯಕದ್ವೀಪಂ ಸುವರ್ಣಕರಮಣ್ಡಿತಂ ॥''

ಪಶ್ಚಿಮ ಜಾವಾದಲ್ಲಿ ನಾಲ್ಕನೆಯ ಶತಮಾನದ ಪಲ್ಲವಲಿಪಿಯಲ್ಲಿ ಕೆತ್ತಿರುವ ಶಾಸನದಲ್ಲಿ ತಾರುಮಾ ವಂಶದ ಭಾರತೀಯ ರಾಜರ ಮತ್ತು ಆಗಿನ ರಾಜನಾಗಿದ್ದ ಪೂರ್ಣವರ್ಮನ ರಾಜ್ಯದ

ಪರಿಚಯವು ಸಿಕ್ಕತ್ತವೆ. ಕ್ರಿ.ಶ. 760 ರಲ್ಲಿ ಕೆತ್ತಿದ್ದ ದಿನಯ ಶಾಸನದಲ್ಲಿ ಅಲ್ಲಿ ಪ್ರತಿಷ್ಠಾಪಿಸಲ್ಪಟ್ಟ[1] ಜ್ಯೋತಿರ್ಲಿಂಗವು ದಕ್ಷಿಣಭಾರತದ 'ಕುಂಜರ ಕುಂಜ'ದಿಂದ ತರಲ್ಪಟ್ಟತೆಂದಿದೆ.

ಪಶ್ಚಿಮ ಜಾವಾದಲ್ಲಿರುವ ವಿಶ್ವ ವಿಖ್ಯಾತ ಬೊರೊಬುದೂರ್ ಅಥವಾ ದೊಡ್ಡ ಬುದ್ಧನ ದೇವಾಲಯವು ಶೈಲೇಂದ್ರರಾಜರಿಂದ ನಿರ್ಮಿತವಾಯಿತು. ಅದರ ಹೆಸರೇ ತಿಳಿಸುವಂತೆ ಅದು ಬುದ್ಧನ ವಿಶ್ವದಲ್ಲೇ ದೊಡ್ಡ ಮಂದಿರವಾಗಿದೆ. ಅದರ ಸುತ್ತಲೂ ಬುದ್ಧನ ಸಂಪೂರ್ಣ ಜೀವನವು ಕಲ್ಲಿನಲ್ಲಿ ಕೆತ್ತಿರುವ ಚಿತ್ರಗಳ ಮೂಲಕ ಅಂಕಿತವಾಗಿದೆ. 1927 ರಲ್ಲಿ ಕವೀಂದ್ರ ರವೀಂದ್ರರು ಅದನ್ನು ನೋಡಲು ಹೋಗಿ ಹತ್ತಿರದಲ್ಲೇ ವೃಕ್ಷಾರೋಪಣಮಾಡಿದ್ದರೆಂದು ಜ್ಞಾಪಿಸಿಕೊಳ್ಳಬಹುದು. ಶೈಲೇಂದ್ರರಾಜರು ಸುಮಾತ್ರಾ ಮತ್ತು ಜಾವಾದಲ್ಲಿ ನಿರ್ಮಿಸಿದ ಅನೇಕ ಕಟ್ಟಡಗಳಲ್ಲಿ ಕ್ರಿ.ಶ. ಎಂಟು ಒಂಬತ್ತನೆಯ ಶತಮಾನದಲ್ಲಿ ಕಟ್ಟಿದ್ದ ಬೊರೊಬುದೂರ್ ಹೊಸದಾಗಿ ನಿರ್ಮಾಣವಾದಂತಿರುವುದು ಅಚ್ಚರಿಯ ವಿಷಯ. ಇದು ಒಂದು ಗುಡ್ಡದ ಮೇಲೆ ಅನೇಕ ಸೋಪಾನಗಳನ್ನೊಳಗೊಂಡ ಭವ್ಯ ನಿರ್ಮಿತಿಯಾಗಿದೆ. ಬೌದ್ಧ ಭಿಕ್ಷುಗಳು ಮುಸಲ್ಮಾನರ ಆಕ್ರಮಣದ ಭಯದಿಂದ ಅದನ್ನು ಮಣ್ಣಿನಲ್ಲಿ ಮುಚ್ಚಿದ್ದುದು ಇಂಗ್ಲೀಷರ ಆಳ್ವಿಕೆಯ ಕಾಲದಲ್ಲಿ ಸರ್ ಥಾಮಸ್ ರ್‍ಯಾಫಲ್ಸ್‌ನಿಂದ ಪತ್ತೆಹಚ್ಚಲ್ಪಟ್ಟು ಜಾಗರೂಕತೆಯಿಂದ ಮಣ್ಣಿನಿಂದ ಹೊರತರಲ್ಪಟ್ಟಿತು.

ಶೈಲೇಂದ್ರ ವಂಶದ ರಾಜರ ಮೂಲಪುರುಷರು ಒರಿಸ್ಸಾದಿಂದ ಬಂದವರೆಂದು ಪ್ರಸಿದ್ಧ ಇತಿಹಾಸಜ್ಞ ಆರ್. ಸಿ. ಮಜುಂದಾರರ ಅಭಿಪ್ರಾಯವಾಗಿದೆ. ಇವರು ಪಾಂಡ್ಯರಾಜರಂತೆಯೇ ಮೀನಲಾಂಛನ ಹೊಂದಿದ್ದರಿಂದಲೂ ಚೋಳರಿಗೂ ಶೈಲೇಂದ್ರರಾಜರಿಗೂ ಪರಸ್ಪರ ದ್ವೇಷದ ಕದನಗಳು ನಡೆಯುತ್ತಿದ್ದುದರಿಂದಲೂ ಇವರು ಪಾಂಡ್ಯರಾಜರಿಗೆ ಸಂಬಂಧಿಸಿದ್ದವರೆಂಬ ಸಂಶಯವುಂಟಾಗುತ್ತದೆ. ವಾಯುಪುರಾಣದಲ್ಲಿ ಯವದ್ವೀಪವನ್ನು ಭಾರತದ ಒಂದು ಭಾಗವಾಗಿರುವಂತೆಯೇ ವರ್ಣನೆಯಿದೆ.

"ಅಂಗದ್ವೀಪಂ ಯವದ್ವೀಪಂ ಮಲಯದ್ವೀಪಮೇವಚ ।
ಶಂಖದ್ವೀಪಂ ಕುಶದ್ವೀಪಂ ವಾರಾಹದ್ವೀಪಮೇವ ಚ ॥
ಏವಂ ಷಡೈತೇ ಥಿತಾ ಅನುದ್ವೀಪಾ ಸಮಂತತಃ
ಭಾರತಂ ದ್ವೀಪದೇಶಾವ್ಯೆ ದಕ್ಷಿಣೇ ಬಹು ವಿಸ್ತರಾಃ ॥"

ಚೀಣಾದ ಯಾತ್ರಿಕ ಫಾಹಿಯಾನ್ ಮಧ್ಯ ಏಷ್ಯಾದಿಂದ ಪಂಜಾಬ್ ಮೂಲಕ ಮಗಧ ರಾಜ್ಯಕ್ಕೆ ಬಂದು ಅಲ್ಲೂ ಬಂಗಾಳದಲ್ಲೂ ಆರುವರ್ಷ ವ್ಯಾಸಂಗಮಾಡಿ ಸಿಂಹಳ ಮತ್ತು ಸುಮಾತ್ರಾವಿನ ಮಾರ್ಗವಾಗಿ ಕ್ರಿ. ಶ. 388ರಿಂದ 413ರವರೆಗೆ ಹದಿನಾಲ್ಕು ವರ್ಷ ಸಂಚಾರ ವರ್ಷ ಸಂಚಾರ ಮಾಡಿ ಚೀಣಾವಿಗೆ ಹಿಂತಿರುಗಿದನು. ಸುಮಾತ್ರಾದ ಪಲಂಬಂಗ್ ನದಿಯ ಅಕ್ಕಪಕ್ಕದ ಕೋಟಿ ಕೊತ್ತಲಗಳಲ್ಲಿ ಆರಂಭವಾದ ಶ್ರೀವಿಜಯವೆಂಬ ಹಿಂದೂ ಸಾಮ್ರಾಜ್ಯವು ವೈದಿಕ, ಪೌರಾಣಿಕ ಮತ್ತು ಬೌದ್ಧ ಧರ್ಮಗಳ ವಿದ್ಯಾಪ್ರಸಾರಕ್ಕೂ ಸಂಸ್ಕೃತ ಭಾಷೆ ಮತ್ತು ಸಾಹಿತ್ಯಕ್ಕೂ ಆಶ್ರಯಸ್ಥಾನವಾಗಿತ್ತು. ಎಂಟನೆಯ ಶತಮಾನದಲ್ಲಿ ಚೀಣಾದ ಒಂದು ಸಾವಿರ ಮಂದಿ ವಿದ್ಯಾರ್ಥಿಗಳೂ ಭಿಕ್ಷುಗಳೂ ಅಲ್ಲಿಯ ವಿಶ್ವವಿದ್ಯಾಲಯದಲ್ಲಿ ಸಂಸ್ಕೃತ ಮತ್ತು ಧರ್ಮ ಗ್ರಂಥಗಳ ಅಧ್ಯಯನ ನಡೆಸುತ್ತಿದ್ದರು. ಅರಬ್ಬಿ ಮತ್ತು ಚೀಣೀ ದಾಖಲೆಗಳಂತೆ ಕ್ರಿ. ಶ. 717

---

1 ಡಾ॥ ಆನಂದಕುಮಾರ ಸ್ವಾಮಿ–ಹಿಸ್ಟರಿ ಆಫ್ ಇಂಡಿಯನ್ ಎಂಡ್ ಇಂಡೋನೇಷಿಯನ್ ಆರ್ಟ್–ಪುಟ 200.

ರಲ್ಲಿ ಸುಮಾತ್ರಾದ ಜಲಸಂಧಿಯ ಮೂಲಕ ಪರ್ಶಿಯಾದ ಮೂವತ್ತೈದು ಹಡಗುಗಳು ಚೀಣಾವಿಗೆ ಹೋಗಿಬರುತ್ತಿದ್ದವಂತೆ. ಕ್ರಿ.ಶ. 860ರಲ್ಲಿ ಶ್ರೀ ವಿಜಯದ ರಾಜನು ನಳಂದ ಮತ್ತು ಗಂಗಾನದೀ ತೀರಗಳಲ್ಲಿ ಸುಮಾತ್ರಾದ ಯಾತ್ರಿಗಳಿಗೆ ತಂಗಲು ಅನೇಕ ಸತ್ರಗಳನ್ನು ಕಟ್ಟಿಸಿದನು. ಹನ್ನೆರಡನೆಯ ಶತಮಾನದಲ್ಲಿ ಪ್ರಸಿದ್ಧ ಭಾರತೀಯ ಬೌದ್ಧ ಭಿಕ್ಷುವಾದ ಅತೀಶ ದೀಪಂಕರ ಶ್ರೀಜ್ಞಾನನು ಸುಮಾತ್ರದಲ್ಲಿ ಹತ್ತು ವರ್ಷ ಶುದ್ಧ ಸರ್ವಾಸ್ತಿವಾದೀ ಬೌದ್ಧತತ್ವದ ಅಧ್ಯಯನ ನಡೆಸಿ ವಿಕ್ರಮಶಿಲೆ ವಿಶ್ವವಿದ್ಯಾಲಯದಲ್ಲಿ ಅಧ್ಯಾಪನ ಕಾರ್ಯನಿರತ ಪಂಡಿತನಾಗಿದ್ದನು.

ಸುಮಾತ್ರಾದ ಶೈಲೇಂದ್ರ ರಾಜರು ತಮಿಳು ಮಾತಾಡುವ ಭಾರತೀಯರೊಡನೆ ಸೇರಿದ ಭಾರತದ ಚೋಳರಾಜರ ವಶದಲ್ಲಿದ್ದ ಸಿಂಹಳದೊಡನೆ ಯುದ್ಧ ನಡೆಸಿದರು. 8ನೆಯ ಶತಮಾನದಿಂದ ಸುಮಾತ್ರಾದ ರಾಜಧಾನಿಯಾಗಿದ್ದ ಶ್ರೀವಿಜಯವೆಂಬ ನಗರದ ಹೆಸರೇ ಉಳ್ಳ ಶ್ರೀವಿಜಯ ಸಾಮ್ರಾಜ್ಯವು ಹದಿಮೂರನೆಯ ಶತಮಾನದವರೆಗೂ ಬಹಳ ಪ್ರಬಲವಾಗಿದ್ದು ಫಿಲಿಪ್ಪೈನ್ಸ್ ದ್ವೀಪದವರೆಗೂ ಅದರ ಆಡಳಿತವಿತ್ತೆಂದೂ ಹದಿನಾಲ್ಕನೆಯ ಶತಮಾನದಲ್ಲಿ ಅದರ ಪ್ರಾಬಲ್ಯವು ಕಡಮೆಯಾಗಿ ಜಾವಾದ ಮಜಾಪಹಿತದ ಭಾಗವಾಗಿ ಪರಿಣಾಮುಗೊಂಡಿತೆಂದೂ ತಿಳಿದುಬರುತ್ತದೆ. ಈಗಲೂ ಬೃಹದ್ಭಾರತದ ಶೈಲೇಂದ್ರ ನರೇಶರಿಂದ ನಿರ್ಮಿತವಾದ ಬೊರೊಬುದೂರ್‌ನಷ್ಟೇ ದೊಡ್ಡದಾದ ತ್ರಿಮೂರ್ತಿಗಳ ದೇವಾಲಯಗಳ ಅವಶೇಷಗಳು ಚಂಡೀಸೇವು (Candisevu)ನಲ್ಲಿದೆ ಅವುಗಳಲ್ಲಿ ರಾಮಾಯಣ ಮತ್ತು ಕೃಷ್ಣಾವತಾರದ ಅಸಂಖ್ಯ ದೃಶ್ಯಗಳು ಕೆತ್ತಲ್ಪಟ್ಟಿವೆ ಚಂದ್ ಶ್ರೀಕಂಡಿಯ ಪ್ರಾಚೀನ ವಿಷ್ಣು ಮಂದಿರದಲ್ಲಿಯೂ ಗುಪ್ತ, ಪಲ್ಲವ ಮತ್ತು ಚಾಲುಕ್ಯರ ಶಿಲ್ಪವನ್ನು ಕಾಣಬಹುದಾಗಿದೆ. ಹತ್ತನೆಯ ಶತಮಾನದ ಅದಿಯಲ್ಲಿ ಭೂಕಂಪದಂತಹ ಯಾವುದೋ ಪ್ರಾಕೃತಿಕ ಉತ್ಪಾತದಿಂದಾಗಿ ಆ ಪ್ರದೇಶಗಳು ಪಾಳುಬಿದ್ದವು. ಇದೇ ಕಾಲದಲ್ಲಿ ಮಧ್ಯ ಅಮೆರಿಕದ ಮಾಯಾನಾಗರಿಕತೆಯೂ ಅಂತ್ಯಗೊಂಡದ್ದನ್ನು ಸ್ಮರಿಸಬಹುದು. ಹನ್ನೊಂದನೆಯ ಶತಮಾನದಲ್ಲಿ ಜಾವಾದ ರಾಜನಾದ ಅರ್ಲಿಂಗ (ಅರ್ಯಲಿಂಗ)ನ ಕಾಲದಲ್ಲಿ (1010–1042) ಕವಿ ಭಾಷೆಯಲ್ಲಿ ಭಾರತೀಯ ಪುರಾಣಗಳೂ, ರಾಮಾಯಣ, ಮಹಾಭಾರತಗಳೂ ರಚಿತವಾದವು. ಆಗ ಅಲ್ಲಿ ಅರ್ಜುನ ವಿವಾಹ ಇತ್ಯಾದಿ ನೆರಳು ನಾಟಕಗಳು ಬಹಳ ಜನಪ್ರಿಯವಾಗಿದ್ದವು. ಅರ್ಲಿಂಗನು ವಿಷ್ಣುವಿನ ಅವತಾರವೆಂದು ಭಾವಿಸಲ್ಪಟ್ಟದ್ದಂತೆ ಕಾಣುತ್ತದೆ. ವಿಷ್ಣುವಿನಂತೆ ಗರುಡವಾಹನನಾದ ಅರ್ಲಿಂಗನ ಪ್ರತಿಮೆಯು ಜಾವಾದ ಬಲಹಾನ್‌ನಲ್ಲಿ ಸುರಕ್ಷಿತವಾಗಿದೆ. ಹನ್ನೊಂದನೆಯ ಶತಮಾನದಿಂದ ಹದಿನಾಲ್ಕನೆಯ ಶತಮಾನದವರೆಗೆ ಮಜಾಪಹತ್ (ಮಯೂಪಹೃತ) ಎಂಬ ಹಿಂದೂ ಸಾಮ್ರಾಜ್ಯಕ್ಕೆ ಜಾವಾವು ಕೇಂದ್ರವಾಗಿ ಫಿಲಿಪೈನ್‌ವರೆಗಿನ ಎಲ್ಲಾ ದ್ವೀಪ ಸಮುದಾಯಗಳೂ ಸೇರಿದ್ದವು. ಹದಿನಾಲ್ಕನೆಯ ಶತಮಾನದ ವೈಷ್ಣವ ಶೈವ ಮಂದಿರಗಳು ಪೂರ್ವ ಜಾವಾದ ಪಂತಾರಣ್‌ನಲ್ಲಿ ಎಲ್ಲೆಲ್ಲೂ ಪಾಳುಬಿದ್ದಿರುವುದನ್ನು ಕಾಣಬಹುದಾಗಿದೆ. ಹದಿನೈದನೆಯ ಶತಮಾನದಿಂದ ಮಹಮ್ಮದೀಯರ ಆಡಳಿತಕ್ಕೆ ಒಳಗಾದ ಮೇಲೆ ಅಧಿಕಾಂಶ ಜನರು ಮಹಮ್ಮದೀಯ ಧರ್ಮಾವಲಂಬಿಗಳಾಗುತ್ತಾ ಬರಲು, ಅಲ್ಲಿಯ ಚಕ್ರವರ್ತಿಯು ರಾಜಪರಿವಾರ, ಪುರೋಹಿತರು, ವಿದ್ವಾಂಸರು, ಕಲಾವಿದರೊಡನೆ ಪ್ರಾಚೀನ ಪರಂಪರೆ ಮತ್ತು ಹಿಂದೂ ಸಂಸ್ಕೃತಿಯ ರಕ್ಷಣೆಗಾಗಿ ಬಲಿದ್ವೀಪಕ್ಕೆ ಹೋಗಿ ನೆಲಸಿದನು. ಜಾವಾದ ಜೋಗ್ಜಕರ್ತ ಮತ್ತು ಸುರಕರ್ತಾದ ರಾಜ ಪರಿವಾರದವರು ಇಂದಿಗೂ ಪ್ರಾಚೀನ ಪರಂಪರೆಯ ಸಂಗೀತ, ನೃತ್ಯ, ಕಲೆಗಳು ಮತ್ತು ಪೌರಾಣಿಕ ಹಾಗೂ ರಾಮಾಯಣ ಮತ್ತು ಮಹಾಭಾರತದ ನಾಟಕಗಳ ಪ್ರದರ್ಶನಕ್ಕೆ ಪ್ರೋತ್ಸಾಹ ನೀಡುತ್ತಿದ್ದಾರೆ. ಸುಮಾತ್ರಾ (ಸುವರ್ಣದ್ವೀಪ)ದ ರಾಣಿ ಮತ್ತು ರಾಜಕುಮಾರನಿಗೆ ಕಾಶ್ಮೀರದ ರಾಜಕುಮಾರ ಗುಣವರ್ಮನ

ಮತ್ತು ಬೌದ್ಧಭಿಕ್ಷು ಕುಮಾರಜೀವನಿಂದ ಕ್ರಿಸ್ತಶಕ 383ರಲ್ಲಿ ಬೌದ್ಧ ದೀಕ್ಷೆ ದೊರಕಿತೆಂದೂ ಅನಂತರ ಗುಣವರ್ಮನೂ ಕುಮಾರಜೀವನೂ ಚೀಣದ ಕ್ಯಾನ್‌ಟನ್‌ನಲ್ಲಿ ಜಾತಕದ ಕಥೆಗಳ ಲೇಪ ಚಿತ್ರಗಳನ್ನು ನಿರ್ಮಿಸಿದರೆಂದೂ ತಿಳಿದುಬರುತ್ತದೆ.

ಮೇಲ್ಕಂಡ ಎಲ್ಲಾ ದೇಶಗಳಲ್ಲೂ ಇದ್ದ ಭಾರತೀಯ ಸಂಸ್ಕೃತಿ, ಸಾಹಿತ್ಯ ಮತ್ತು ಕಲೆ ಮತ್ತು ಧಾರ್ಮಿಕ ರೂಢಿಗಳನ್ನು ಪರಕೀಯರ ಧಾರ್ಮಿಕ ರೂಢಿಗಳನ್ನು ಪರಕೀಯರ ಧಾಂಧಲೆಗಳಿಂದ ರಕ್ಷಿಸುತ್ತಾ ಇರುವ ದೇಶವೆಂದರೆ ಬಲಿದ್ವೀಪ. ಅವರ ಜೀವನದ ಪ್ರತಿಯೊಂದು ಕೆಲಸವೂ ಅಧ್ಯಾತ್ಮಿಕ ಆಧಾರದ ಕಲಾತ್ಮಕ ಕ್ರಿಯೆಯೆನ್ನಬಹುದಾಗಿದೆ. ಸಿಂಹರಾಜನಗರ ಬಲಿದ್ವೀಪದ ಶಾಸನ ಕೇಂದ್ರವಾಗಿದೆ. 15ನೆಯ ಶತಮಾನದಲ್ಲಿ ಜಾವಾ ಮತ್ತು ಸುಮಾತ್ರಾದಲ್ಲಿ ಮಹಮದ್ಮೀಯರ ಪ್ರಾಬಲ್ಯವು ಅಧಿಕವಾಗಲು ಹಿಂದೂ ಸಂಸ್ಕೃತಿ ಮತ್ತು ಧರ್ಮದ ರಕ್ಷಣೆಗಾಗಿ ಪಣದೊಟ್ಟುಬಂದ ಇಲ್ಲಿಯ ಜನರ ಮೂಲಪುರುಷರೂ, ಅವರ ವಂಶದವರೂ ಹತ್ತೊಂಬತ್ತನೆಯ ಶತಮಾನದಲ್ಲಿ ಡಚ್ಚರ ಆಕ್ರಮಣವನ್ನೆದುರಿಸಬೇಕಾಯಿತು. 1849ರಲ್ಲಿ ಬಲಿದ್ವೀಪದ ರಾಜರೂ ಪ್ರಜೆಗಳೂ ಡಚ್ಚರೊಡನೆ ವೀರಾವೇಶದಿಂದ ಕಾದಾಡಿದರು. ಡಚ್ಚರು ಹೊಂದಿದ್ದ ಮದ್ದು ಗುಂಡುಗಳಿಂದ ಅವರಿಗೆ ಜಯ ಲಭಿಸಲು ರಾಜರೂ, ಸರದಾರರೂ ಪುರೋಹಿತ ವರ್ಗದವರೂ ಅಗ್ನಿಪ್ರವೇಶಮಾಡಿ ತಮ್ಮ ಧರ್ಮನಿಷ್ಠೆಯನ್ನು ವ್ಯಕ್ತಪಡಿಸಿದರು. ಡಚ್ಚರು ಬಲಿದ್ವೀಪದ ಒಡೆಯರಾದರೂ ಅವರು ಅಲ್ಲಿ ಕ್ರೈಸ್ತ ಧರ್ಮವನ್ನು ಹೇರಲು ಪ್ರಜೆಗಳು ಒಪ್ಪಲಿಲ್ಲ.

ಈಗಲೂ ವರ್ಣಾಶ್ರಮ ಧರ್ಮ, ಸಗುಣಾರಾಧನೆ, ಸಂಗೀತ ಸಾಹಿತ್ಯ, ನೃತ್ಯ, ಚಿತ್ರಕಲೆ, ಮೂರ್ತಿಶಿಲ್ಪ, ಕುಲಕಸಬುಗಳನ್ನು ಬಿಡದೆ ನಡೆಸಿಕೊಂಡು ಬರುವುದು, ಜನ್ಮೋತ್ಸವ, ಮುಂಜಿ ಮೊದಲಾದ ಷೋಡಶ ಸಂಸ್ಕಾರಗಳಲ್ಲಿ ಶ್ರದ್ಧೆ ಮೊದಲಾದವು ಬಲಿದ್ವೀಪದ ನಿವಾಸಿಗಳಲ್ಲಿ ಹಿಂದಿನಂತೆಯೇ ಇವೆ. ಪ್ರತಿಯೊಂದು ಮನೆಯಲ್ಲಿಯೂ ಇಷ್ಟದೇವರ ಮೂರ್ತಿಗೆ ಪುಷ್ಪಾರಾಧನೆ ಮತ್ತು ನೈವೇದ್ಯದ ಸಮರ್ಪಣೆಯಲ್ಲಿ ಗೃಹಿಣಿಯ ಮುಖ್ಯ ಪಾತ್ರವಿರುತ್ತದೆ. ಬ್ರಹ್ಮ, ವಿಷ್ಣು, ಶಿವ, ಉಮಾ, ಸೂರ್ಯ, ಬುದ್ಧ, ಇಂದ್ರ, ಯಮ, ಗಣೇಶರ ಪೂಜೆಯು ಎಲ್ಲಾ ಕಡೆಯೂ ಪ್ರಚಾರದಲ್ಲಿದೆ. ಪ್ರತಿ ಹಳ್ಳಿಯಲ್ಲಿಯೂ ಅರಳೀಕಟ್ಟೆ ಮತ್ತು ನಾಗರ ಪೂಜೆಯೂ, ಪರ್ವತ, ನದೀ ಮತ್ತು ಗ್ರಾಮದ ಅಧಿದೇವತೆಗಳ ಪೂಜೆಯೂ ರೂಢಿಯಲ್ಲಿವೆ. ಹಬ್ಬ ಜಾತ್ರೆಗಳಲ್ಲಿ ದೇವಾಲಯಗಳನ್ನು ತೋರಣದಿಂದ ಅಲಂಕರಿಸಿ ಧಾನ್ಯಗಳಿಂದ ಮೂರ್ತಿಗಳನ್ನು ರಚಿಸಿ ಫಲ, ಪುಷ್ಪ, ದೋಸೆ ಮೊದಲಾದವುಗಳ ನೈವೇದ್ಯ ಸಮರ್ಪಿಸಿ, ಸಂಗೀತ ನೃತ್ಯಗಳೊಡನೆ ಪೂಜೆನಡೆಸಿ ಗ್ರಾಮಸ್ಥರೆಲ್ಲರೂ ಪ್ರಸಾದ ಸ್ವೀಕರಿಸುವ ಪದ್ಧತಿಯಿದೆ. ಬ್ರಾಹ್ಮಣರು ವ್ರತೋಪವಾಸ ಮತ್ತು ವಿದ್ಯಾಧ್ಯಯನದಲ್ಲಿ ನಿರತರಾಗುತ್ತಾರೆ. ಸಂಗೀತ, ಸಾಹಿತ್ಯ, ಶಿಲ್ಪ ಮತ್ತು ಚಿತ್ರಕಲೆಗಳನ್ನು ಪುರುಷರೂ, ನೃತ್ಯ ಮತ್ತು ನೇಯ್ಗೆಯ ಕೆಲಸಗಳನ್ನು ಸ್ತ್ರೀಯರೂ ಶ್ರದ್ಧೆಯಿಂದ ಕಲಿಯುತ್ತಾರೆ. ಚಿನ್ನ ಮತ್ತು ಬೆಳ್ಳಿಯ ಸಾಮಾನುಗಳನ್ನೂ ಮರ, ಕಲ್ಲು ಮೊದಲಾದವುಗಳಲ್ಲಿ ಕೆತ್ತನೆಯ ಕೆಲಸ ಮಾಡುವುದನ್ನೂ ಪರಂಪರಾಗತವಾಗಿ ಕಲಿಯುವ ರೂಢಿಯಿದೆ. ದೇವಾಲಯಗಳೂ ಪಂಚಾಯಿತಿಮನೆ ಮತ್ತು ಪೇಟೆಯ ಚೌಕಗಳೂ ಸಾರ್ವಜನಿಕರಿಗೆ ಸೇರಿರುತ್ತವೆ. ಶವಸಂಸ್ಕಾರಕ್ಕೆ ಬಲಿದ್ವೀಪದ ನಿವಾಸಿಗಳು ಅತ್ಯಧಿಕ ಗಮನ ಕೊಡುತ್ತಾರೆ. ಆಧುನಿಕ ವಿಜ್ಞಾನ ಮತ್ತು ಶಿಕ್ಷಾಪದ್ಧತಿಗಳ ಪ್ರಸಾರವು ತಮ್ಮ ಪ್ರಾಚೀನ ಪರಂಪರೆಯ ಆಚಾರ–ವಿಚಾರ, ಕಲಾಕೌಶಲ್ಯಗಳನ್ನು ಹಾಳುಮಾಡದಂತೆ ಅವರು ಬಹಳ ಎಚ್ಚರದಿಂದ ನೋಡಿಕೊಳ್ಳುತ್ತಾರೆ. ಪ್ರತಿಯೊಬ್ಬರೂ ದೇವತಾಮೂರ್ತಿ ಕೆತ್ತಿರುವ ಕ್ರಿಸ್ ಎಂಬ ಕತ್ತಿಯನ್ನು ತಾಯತಿಯಂತೆ ಆತ್ಮರಕ್ಷಣೆಗಾಗಿ ಧರಿಸುತ್ತಾರೆ. ಇದನ್ನು ವಿಷ್ಣುವು ಪ್ರಪ್ರಥಮವಾಗಿ ಅಸುರಮರ್ದನಕ್ಕಾಗಿ ಧರಿಸಿ ಅವರಿಗೆ ಮಾರ್ಗದರ್ಶನ ಮಾಡಿದರೆಂಬ ನಂಬಿಕೆಯಿದೆ.

ಹದಿನೈದನೆಯ ಶತಮಾನದಿಂದ ಮುಹಮ್ಮದೀಯರ ಅಧೀನವಾಗಿ ಹತ್ತೊಂಬತ್ತನೆಯ ಶತಮಾನದಿಂದ ಯೂರೋಪಿಯನ್ನರ ಅಧೀನದಲ್ಲಿದ್ದ ಆಗ್ನೇಯ ಏಷ್ಯಾದ ಇಂಡೋನೇಷಿಯವು 1950ರಿಂದ ಸ್ವತಂತ್ರ ರಾಷ್ಟ್ರವಾದುದು ಸರ್ವವಿದಿತವಾಗಿದೆ. ಇಂಡೋನೇಷಿಯವು ಯುಗ ಯುಗಾಂತರಗಳಿಂದ ಭಾರತದೊಡನೆ ಸಂಬಂಧ ಹೊಂದಿದ್ದು ಅಲ್ಲಿ ಈಗಲೂ ವೈಷ್ಣವ ಭಕ್ತಿಯ ಮೂಲ ಮಂತ್ರವಾದ ವಸುಧೈವ ಕುಟುಂಬಕಂ ಮತ್ತು ವೈವಿಧ್ಯದಲ್ಲಿ ಏಕತೆಯನ್ನು ಆದರ್ಶವಾಗಿ ಉಳ್ಳ ಪಂಚಶೀಲ ಮತ್ತು ಸುವರ್ಣದ ಗರುಡಲಾಂಛನದ ಕೆಳಗಡೆ "ಭಿನ್ನೇಕಾತುಂಗಲ ಇಕಾಂ" ಅರ್ಥಾತ್ "ಭಿನ್ನತೆಯಲ್ಲಿ ಏಕತೆ" ಎಂಬ ಆದರ್ಶ ವಾಕ್ಯವುಳ್ಳ ಧ್ವಜವು ರಾಷ್ಟ್ರ ಧ್ವಜವಾಗಿದೆ.

ಭೂಮಧ್ಯ ರೇಖೆಯ ಎರಡು ಕಡೆಗೂ ಹರಡಿರುವ ಸುಮಾರು 3000 ದ್ವೀಪ ಸಮುದಾಯಗಳುಳ್ಳ ಈ ರಾಷ್ಟ್ರದಲ್ಲಿ ಜಾವಾ, ಸುಮಾತ್ರಾ, ಬೋರ್ನಿಯೊ, ಮಲಯಾ, ಬಲಿ ಮೊದಲಾದವು ದೊಡ್ಡವು.

ಭಾಷಾ ಇಂಡೋನೇಸಿಯಾ ರಾಷ್ಟ್ರಭಾಷೆ. ಅಲ್ಲಿಯ ಲಿಪಿಗಳು ಬ್ರಾಹ್ಮೀಲಿಪಿಯ ವಿಕೃತ ರೂಪಗಳೇ ಆಗಿವೆ. ಈಗ ಅಲ್ಲಿಯ ಅಧಿಕಾಂಶ ಜನರು ಮುಹಮ್ಮದೀಯರಾಗಿದ್ದರೂ ಅವರ ನಡೆ-ನುಡಿ, ಆಚಾರ, ಪೂಜೆ, ವ್ಯವಹಾರಗಳ ಮೇಲೆ ವೈಷ್ಣವ ಭಕ್ತಿಯನ್ನಾಧಾರವುಳ್ಳ ಭಾರತೀಯ ಸಂಸ್ಕೃತಿಯ ಪ್ರಭಾವವು ಅಚ್ಚಳಿಯದೇ ಉಳಿದಿರುವುದು ಕಾಣಬಹುದಾಗಿದೆ. ವ್ಯವಸಾಯ ಪ್ರಧಾನವಾಗಿರುವ ಅವರ ಹೊಲಗದ್ದೆಗಳಲ್ಲಿ ಧಾನ್ಯಸಂಪತ್ತಿನ ಅಧಿದೇವತೆಯಾದ ಶ್ರೀದೇವಿಯ ಪೂಜೆಯೂ ಪೌರಾಣಿಕ ಹಾಗೂ ರಾಮಾಯಣ ಮಹಾಭಾರತದ ಕಥೆಗಳನ್ನಾಧಾರವಾಗಿ ಉಳ್ಳ ನೃತ್ಯ ನಾಟಕ ಪ್ರದರ್ಶನಗಳೂ ಅವರ ಸಾಂಸ್ಕೃತಿಕ ಜೀವನದ ಮುಖ್ಯ ಅಂಗವಾಗಿವೆ. ಅವರ ವಸ್ತ್ರ, ಕಲೆ, ಲೋಹದ ಕೃತಿಗಳಲ್ಲೂ ಸಂಗೀತ ಸಾಹಿತ್ಯದಲ್ಲೂ ಅವನ್ನು ಗುರುತಿಸಬಹುದಾಗಿದೆ.

ಕ್ರಿಸ್ತ ಪೂರ್ವ ಸಾವಿರಾರು ವರ್ಷಗಳಿಂದ ಮಧ್ಯಏಷ್ಯಾದ ರಾಜವಂಶಗಳು ಭಾರತೀಯ ರಾಜವಂಶಗಳಿಗೆ ಸಂಬಂಧಿಸಿದ್ದವು. ಕ್ರಿಸ್ತಶಕ ಏಳನೆಯ ಶತಮಾನದಲ್ಲಿ ತುರ್ಕಿ ಆಕ್ರಮಣಗಳು ನಡೆಯುವವರೆಗೂ ಖೋತಾನ್‌ನಲ್ಲಿ ಹಿಂದೂ ರಾಜರೇ ಆಳುತ್ತಿದ್ದರು. ಅವರ ಓಯಸಿಸ್ಸುಗಳಲ್ಲಿ ಪ್ರಾಕೃತ ಭಾಷೆಯೂ ಖರೋಷ್ಠೀ ಮತ್ತು ಬ್ರಾಹ್ಮೀಲಿಪಿಯೂ ಬಳಕೆಯಲ್ಲಿದ್ದವು. ವೈಷ್ಣವ ಭಕ್ತಿಯ ಕುಬೇರ ಸಂಪ್ರದಾಯವು ಎಲ್ಲೆಲ್ಲೂ ಪ್ರಚಾರದಲ್ಲಿತ್ತು. ಕ್ಯಾಡ್‌ಫಿಸಸ್ ಮತ್ತು ಕನಿಷ್ಕನ ನಾಣ್ಯಗಳಲ್ಲಿ ಇವನ್ನು ಕಾಣಬಹುದಾಗಿದೆ. ಮಿನ್‌ಗಾಯ್ ಪ್ರದೇಶದ ಕೂಲವಿನಲ್ಲಿರುವ ಗುಹೆಗಳಲ್ಲಿ ಬ್ರಹ್ಮ, ಇಂದ್ರ, ಶಿವ, ಪಾರ್ವತಿ, ನಂದಿಗಳ ಲೇಪ ಚಿತ್ರಗಳನ್ನು ಇಂದಿಗೂ ಕಾಣಬಹುದಾಗಿದೆ. ಕ್ರಿಸ್ತಶಕ ಎಂಟು ಮತ್ತು ಒಂಬತ್ತನೆಯ ಶತಮಾನದಿಂದಲೇ ಈ ಭಾಗವು ಚೀನೀ ತುರ್ಕಿಸ್ಥಾನವೆಂದು ಕರೆಸಿಕೊಳ್ಳಲಾರಂಭವಾಯಿತು. ಕ್ರಿ. ಶ. 357ರಿಂದ 571ರವರೆಗೆ ರಾಯಭಾರಿಗಳು ಕಳುಹಿಸಲ್ಪಟ್ಟವೆಂದು ತಿಳಿದುಬರುತ್ತದೆ. ಚೀಣಾದಲ್ಲಿ ಹೋಗಿ ನೆಲೆಸಿದ್ದ ಭಾರತೀಯರಲ್ಲಿ ಕುಮಾರಜೀವ ಮತ್ತು ಕಾಶ್ಮೀರದ ರಾಜಪುತ್ರ ಗುಣವರ್ಮನು ಬೌದ್ಧ ಧರ್ಮದ ಪ್ರಸಾರ ಮತ್ತು ಕ್ಯಾಂಟನ್‌ನಲ್ಲಿ ಜಾತಕದ ಚಿತ್ರಲೇಪನಕ್ಕೂ ಪ್ರಸಿದ್ಧರಾಗಿದ್ದಾರೆ. ಕನಿಷ್ಕನು ಪೇಷಾವರಿನಲ್ಲಿ ಕಟ್ಟಿದ್ದ ಸ್ತೂಪಗಳ ಮಾದರಿಯಲ್ಲೇ ಚೀಣದ ಪಗೋಡಗಳು ನಿರ್ಮಿತವಾಗತೊಡಗಿದವು.

ಭಾರತದ ಯೋಗ ಶಾಸ್ತ್ರದ ಆಧಾರವುಳ್ಳ ಬೌದ್ಧಧರ್ಮದ ಧ್ಯಾನಮಾರ್ಗವು ಭಿಕ್ಷು ಬೋಧಿ ಧರ್ಮನಿಂದ (ಕ್ರಿ. ಶ. 527–566) ಚೀಣಾ ಮತ್ತು ಜಪಾನ್‌ಗಳಲ್ಲಿ ಅತ್ಯಂತ ಜನಪ್ರಿಯವಾಯಿತು. ಇದರೊಡನೆ, ಭಾರತದ ಆಧ್ಯಾತ್ಮಿಕ, ಪೌರಾಣಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಪ್ರಭಾವಗಳು ಆ ದೇಶಗಳಿಗೆ ಹಬ್ಬಿದವು. ಅನೇಕ ಸಂಸ್ಕೃತ ಮತ್ತು ಪ್ರಾಕೃತ ಗ್ರಂಥಗಳು ಆ ದೇಶದ ಜನ ಭಾಷೆಗಳಿಗೆ ಭಾಷಾಂತರಿಸಲ್ಪಟ್ಟವೆ. ಆ ದೇಶಗಳಲ್ಲಿನ ಮಹಾಯಾನ ಬೌದ್ಧಧರ್ಮ ಮತ್ತು ರಾಜಭಕ್ತಿ ವೈಷ್ಣವಭಕ್ತಿಯ ಪ್ರಭಾವಗಳೇ ಆಗಿವೆ.

ರು. ಮಾ. ಷಡಕ್ಷರಯ್ಯ

ಅರಗಿಲವಾಡ ತಾಮ್ರಶಾಸನ

ಬಾದಾಮಿ ಚಾಲುಕ್ಯವಂಶದ ಚಕ್ರವರ್ತಿ ವಿನಯಾದಿತ್ಯನ ಒಂದು ಕೃತಕ ತಾಮ್ರ ಶಾಸನವು ಗುಂತಕಲ್ಲು, ಅನಂತಪುರ ಜಿಲ್ಲೆ, ಆಂಧ್ರಪದೇಶದಲ್ಲಿ ಶ್ರೀ ಶ್ರೀ ೧೦೦೮ ಶ್ರೀಶೈಲ ವಾಗೀಶ ಪಂಡಿತ ಶಿವಾಚಾರ್ಯ ಸನ್ನಿಧಿಯವರಿಂದ ಜುಲೈ ೧೯೭೯ರಲ್ಲಿ ದೊರಕಿತು. ಇಪ್ಪತ್ತು ವರ್ಷಗಳ ಹಿಂದೆ ಅರಗಿಲವಾಡ (ಹರಪನ ಹಳ್ಳಿ ತಾಲ್ಲೂಕ್, ಬಳ್ಳಾರಿ ಜಿಲ್ಲೆ)ದ ಒಂದು ಹೊಲದಲ್ಲಿ ನೇಗಿಲು ಹೊಡೆಯುವಾಗ ಈ ತಾಮ್ರಶಾಸನ ಸಿಕ್ಕಿತೆಂದೂ ನಂತರ ಅಲ್ಲಿಗೆ ಬಂದಿದ್ದ ಶ್ರೀಶೈಲ ವಾಗೀಶ ಪಂಡಿತ ಸ್ವಾಮಿಗಳಿಗೆ ಇದನ್ನು ಒಪ್ಪಿಸಿದರೆಂದೂ ಅದೇ ಊರಿನ ಶ್ರೀಮತಿ ಬಂದಕ್ಕ ಭೀಮನಗೌಡ ಇವರು ನನಗೆ ತಿಳಿಸಿದರು.

ವರಾಹಮುದ್ರೆ ಇರುವ ಉಂಗುರಕ್ಕೆ ಮೂರು ತಾಮ್ರಪಟಗಳನ್ನು ಪೋಣಿಸಲಾಗಿದೆ. ಒಂದೊಂದು ಪಟದ ಉದ್ದ ೨೪ ಸೆಂ. ಮೀ. ಮತ್ತು ಅಗಲ ೧೩ ಸೆಂ. ಮೀ. ಇವೆ. ತಾಮ್ರ ಉಂಗುರದ ದಪ್ಪ ೧ ಸೆಂ. ಮೀ. ಮತ್ತು ವ್ಯಾಸ ೦.೭೫ ಸೆಂ. ಮೀ. ಇವೆ. ತಾಮ್ರ ಉಂಗುರದ ಮೇಲಿನ ಮುದ್ರೆಯು ದುಂಡಾಗಿದ್ದು ಇದರ ಒಳಗೆ ಮಧ್ಯದಲ್ಲಿ ವರಾಹ ಚಿತ್ರವನ್ನು ತೋರಿಸಲಾಗಿದೆ. ಶಾಸನದ ಭಾಷೆ ಸಂಸ್ಕೃತ ಮತ್ತು ಲಿಪಿ ವಿವಿಧ ಕಾಲದ ದೇವನಾಗರಿಯಾಗಿದೆ. ಸಂಸ್ಕೃತ ಭಾಷೆಯಲ್ಲಿ ಕನ್ನಡ ಭಾಷೆ ಕೂಡಿಕೊಂಡಿದೆ. ಒಟ್ಟು ೪೯ ಸಾಲುಗಳಿವೆ.

ಈ ತಾಮ್ರಶಾಸನವನ್ನು ಹೊರಡಿಸಿದವರು ಬಾದಾಮಿ ಚಾಲುಕ್ಯ ವಂಶದ ಮಹಾರಾಜ ವಿನಯಾದಿತ್ಯನೆಂದು ತಿಳಿಸಲಾಗಿದೆ. ವಿಷ್ಣುವಿನ ಅವತಾರವಾದ ವರಾಹನ ಪ್ರಾರ್ಥನೆಯಿಂದ ಶಾಸನವು ಪ್ರಾರಂಭವಾಗಿದೆ. ಬಾದಾಮಿ ಚಾಲುಕ್ಯ ರಾಜರ ವಂಶಾವಳಿಯನ್ನು ಪುಲಕೇಶಿಯಿಂದ ವಿನಯಾದಿತ್ಯನವರೆಗೆ ೨ರಿಂದ ೨೯ ಸಾಲುಗಳಲ್ಲಿ ಸೂಚಿಸಲಾಗಿದೆ ಮತ್ತು ಆಯಾ ರಾಜರ ಬಿರುದಾವಳಿಯನ್ನು ಅವರ ಆಡಳಿತಕ್ಕೆ ಒಳಪಟ್ಟಿದ್ದ ಸಾಮಂತರ ರಾಜಧಾನಿಗಳು ಇತ್ಯಾದಿ ವಿವರಗಳನ್ನು ಕೊಡಲಾಗಿದೆ. ಶಾಸನದಲ್ಲಿ ಸೂಚಿಸಿದ ಇವರ ವಂಶಾವಳಿ ಈ ಕೆಳಗಿನಂತಿರುವುದು.

ಪುಲಕೇಶಿ
↓
ಕೀರ್ತಿವರ್ಮ
↓
ವಿಜಯಾದಿತ್ಯ
↓
ವಿಕ್ರಮಾದಿತ್ಯ
↓
ವಿನಯಾದಿತ್ಯ

ಈ ವಿನಯಾದಿತ್ಯ ಮಹಾರಾಜನು ಮಲಹಾರಿ ಅಂದರೆ ಮಲಪ್ರಭ ನದಿ ಹತ್ತಿರದ ರತ್ನಾಪುರ ರಾಜಧಾನಿ (ಪಟ್ಟದಕಲ್ಲು, ಬಾದಾಮಿ ತಾಲೂಕು, ಬಿಜಾಪುರಜಿಲ್ಲೆ) ಯಿಂದ ಸೌರಾಷ್ಟ್ರದವರೆಗೆ ಆಳುತ್ತಿದ್ದನೆಂದೂ ಸಮಸ್ತಭುವನಾಶ್ರಯ ಶ್ರೀ ಪೃಥ್ವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರ ಪರಮಭಟ್ಟಾರಕ ಶ್ರೀ ವಿನಯಾದಿತ್ಯ ಸತ್ಯಾಶ್ರಯವಲ್ಲಭನರೇಂದ್ರ ಎಂದೂ ಶಾಸನದಲ್ಲಿ ಅರಸನನ್ನು ವರ್ಣಿಸಲಾಗಿದೆ. ಅರಗಿಲ್ಲವಾಡ (ಅರಗಿಲವಾಡ, ಹರಪನಹಳ್ಳಿ ತಾಲ್ಲೂಕು, ಬಳ್ಳಾರಿ ಜಿಲ್ಲೆ) ಗ್ರಾಮವನ್ನು ಶ್ರೀ ವಿನಯಾದಿತ್ಯ ಮಹಾರಾಜನು ವಿಂಸತ್ತ್ಯೋತ್ತರ ಪಂಚಶತೇಷು ಶಕವರ್ಷ ಪ್ರಾತೀಷು ವಿಲಂಬಿ ಸಂವತ್ಸರ, ಚೈತ್ರ, ಅಮಾವಾಸ್ಯೆ ಸೂರ್ಯ ಗ್ರಹಣ, ಬೃಹಸ್ಪತಿವಾರ ಅಂದರೆ ಕ್ರಿ. ಶ. ೬೯೮ರಂದು ಭಾರದ್ವಾಜ ಗೋತ್ರದ ಗೋವರ್ಧನ ತ್ರಿವೇದಿಯ ಪಾದ ತೊಳೆದು ದಾನಕೊಟ್ಟನೆಂದು ಶಾಸನದಲ್ಲಿ ಹೇಳಿದೆ.

ಅರಗಿಲ್ಲವಾಡವು ಕೋಗಳಿ ಐದುನೂರು ವಿಷಯ ಮತ್ತು ಜೇಲೂರ ಎಪ್ಪತ್ತು ನಾಡಿನ ಮಧ್ಯದಲ್ಲಿತ್ತೆಂದು ತಿಳಿಸಿ ಅರಗಿಲ್ಲವಾಡದಿಂದ ಬೇರೆ ಬೇರೆ ದಿಕ್ಕುಗಳಲ್ಲಿರುವ ಎಂಟು ಹಳ್ಳಿಗಳು ಮತ್ತು ಈ ಎಂಟು ಹಳ್ಳಿಗಳ ವಿನ್ಯಾಸವನ್ನು ಮತ್ತು ಒಂದೊಂದು ಹಳ್ಳಿಯಿಂದ ಬೇರೆ ಬೇರೆ ದಿಕ್ಕಿನಲ್ಲಿರುವ ಭೂಮೇರೆಗಳನ್ನು 38ರಿಂದ 46ರ ಸಾಲುಗಳಲ್ಲಿ ವಿವರಿಸಲಾಗಿದೆ. ಕೊನೆಯ 47, 48 ಮತ್ತು 49ನೇ ಸಾಲುಗಳಲ್ಲಿ ದಾನದ ಅರ್ಹತೆಯನ್ನು ಪ್ರಾರ್ಥನಾ ಸ್ತೋತ್ರಗಳಿಂದ ವರ್ಣಿಸಿ ಈ ದಾನವನ್ನು ಸರಿಯಾಗಿ ಕಾಪಾಡುವ ಬಗೆಗೆ ಕೆಲವು ಕಟ್ಟಳೆಗಳನ್ನು ಶಾಸನಗಳಲ್ಲಿ ಸಾಮಾನ್ಯವಾಗಿ ಸೂಚಿಸುವ ರೀತಿಯಲ್ಲಿ, ಇಲ್ಲಿ ರೂಪಿಸಿದೆ. ಇದನ್ನು ಬರೆದವನು ಕೇಶವಾರ್ಯನೆಂದು ಶಾಸನದಲ್ಲಿ ಉಲ್ಲೇಖಿಸಲಾಗಿದೆ.

ಈ ಕೆಳಗೆ ಶಾಸನದ ಕೃತಕತೆಯನ್ನು ಸಂಕ್ಷೇಪವಾಗಿ ಚರ್ಚಿಸಲಾಗಿದೆ.

1) ಪುರಾತನ ಲಿಪಿಗಳ ಬರವಣಿಗೆಯ ಪ್ರಕಾರದಲ್ಲಿ ಸ್ಪಷ್ಟವಾಗಿ ಕಾಣುವ ಕೆಲವು ಅಕ್ಷರಗಳು ವಿವಿಧ ಕಾಲದ ಅಕ್ಷರಗಳ ಮಿಶ್ರಣದಲ್ಲಿವೆ. ಉದಾಹರಣೆಗೆ ಒಂದನೆ ಸಾಲಿನಲ್ಲಿ ಹ, ಜ, ತ, ಸ; ಎರಡನೇ ಸಾಲಿನಲ್ಲಿ ನ; ಮೂರನೇ ಸಾಲಿನಲ್ಲಿ ಣ ; ಆರನೇ ಸಾಲಿನಲ್ಲಿ ಭ ; ಏಳನೇ ಸಾಲಿನಲ್ಲಿ ಶ ; ಎಂಟನೇ ಸಾಲಿನಲ್ಲಿ ಚ, ದ, ಹ, ಭ, ಕ, ಟ ; ಒಂಬತ್ತನೇ ಸಾಲಿನಲ್ಲಿ ಫ, ಣ, ; ಮುವತ್ತೇಳನೇ ಸಾಲಿನಲ್ಲಿ ಫ ; ಮುವತ್ತೆಂಟನೇ ಸಾಲಿನಲ್ಲಿ ಇ, ; ಅಕ್ಷರಗಳು ಪುರಾತನ ಲಿಪಿಗಳ ಪ್ರಕಾರ ಕ್ರಿ. ಶ. ೧೦ನೇ ಶತಮಾನದಿಂದ ೧೧ನೇ ಶತಮಾನದ ಅಕ್ಷರಗಳನ್ನು ಹೋಲುತ್ತವೆ. ಮತ್ತು ಒಂದನೇ ಸಾಲಿನಲ್ಲಿ ದ ; ಎರಡನೇ ಸಾಲಿನಲ್ಲಿ ಮ, ನ, ಯ ; ಮೂರನೇ ಸಾಲಿನಲ್ಲಿ ರ ; ನಾಲ್ಕನೇ ಸಾಲಿನಲ್ಲಿ ಪ ; ಒಂಬತ್ತನೇ ಸಾಲಿನಲ್ಲಿ ವ ; ಹನ್ನೊಂದನೇ ಸಾಲಿನಲ್ಲಿ ಲ ; ಮುವತ್ತೇಳನೇ ಸಾಲಿನಲ್ಲಿ ಅ ; ಅಕ್ಷರಗಳು ಸುಮಾರು ಕ್ರಿ. ಶ. ೧೩ರಿಂದ ೧೪ನೇ ಶತಮಾನದ ಅಕ್ಷರಗಳಿಗೆ ಸ್ಪಷ್ಟವಾಗಿ ಹೋಲುತ್ತವೆ. ಇದರಿಂದಾಗಿ ಈ ತಾಮ್ರಶಾಸನದ ಕಾಲವು ಕ್ರಿ. ಶ. ೧೩ರಿಂದ ೧೪ನೇ ಶತಮಾನಕ್ಕೆ ಸೇರಿದ್ದಾಗಿದೆ. ಮತ್ತು ಇದೇ ಕಾಲದಲ್ಲಿ ಇಂತಹ ಕೃತಕ ಶಾಸನವನ್ನು ಯಾವುದೋ ಒಂದು ಉದ್ದೇಶಕ್ಕಾಗಿ ಬರೆಸಲಾಯಿತೆಂದು ಹೇಳಬಹುದಾಗಿದೆ.

2) ಬಾದಾಮಿ ಚಾಲುಕ್ಯರ ವಂಶದ ಚಕ್ರವರ್ತಿ ವಿನಯಾದಿತ್ಯನ ಕಾಲವು ಶಾಸನದಲ್ಲಿ ಕ್ರಿ. ಶ. ೬೯೮ ಎಂದು ಸೂಚಿಸಲಾಗಿದೆ. ಆದರೆ ಅನ್ಯಮೂಲಗಳಿಂದ ತಿಳಿದಿರುವಂತೆ ಆತನ ಆಳ್ವಿಕೆಯ ಕಾಲವು ಕ್ರಿ. ಶ. ೬೮೧ರಿಂದ ೬೯೬.[1] ಈ ಶಾಸನದಲ್ಲಿ ವಂಶಾವಳಿಯಲ್ಲಿ ಪುಲಕೇಶಿ, ಕೀರ್ತಿವರ್ಮ, ವಿಜಯಾದಿತ್ಯ ಮತ್ತು ವಿಕ್ರಮಾದಿತ್ಯರ ತರುವಾಯ ವಿನಯಾದಿತ್ಯನೆಂದು ಹೇಳಿದೆ. ಬಾದಾಮಿ ಚಾಲುಕ್ಯರ ವಂಶಾವಳಿಯಲ್ಲಿ ವಿನಯಾದಿತ್ಯ ರಾಜನ ಆಳಿಕೆಯು ವಿಜಯಾದಿತ್ಯ ಮತ್ತು ಒಂದನೇ ವಿಕ್ರಮಾದಿತ್ಯರ ಮಧ್ಯ ಕಾಲದಲ್ಲಿದ್ದಿತು ಮತ್ತು ಮೊದಲನೆಯ

ಅಥವಾ ಎರಡನೆಯ ಪುಲಕೇಶಿಯರಲ್ಲಿ ಯಾರನ್ನು ಈ ವಂಶಾವಳಿಯಲ್ಲಿ ಹೆಸರಿಸಲಾಗಿದೆ ಎಂಬುದು ಗೊತ್ತಾಗುವುದಿಲ್ಲ. ಇದರಿಂದ ಶಾಸನದಲ್ಲಿನ ಬಾದಾಮಿ ಚಾಲುಕ್ಯರ ವಂಶಾವಳಿ ಮತ್ತು ವಿನಯಾದಿತ್ಯನ ಕಾಲದ ಉಲ್ಲೇಖವು ತಪ್ಪಾಗಿದೆ ಎಂಬುದು ಸ್ಪಷ್ಟ.

3) ತಾಮ್ರಪಟಗಳು ಹೆಚ್ಚು ಉದ್ದಳತೆಯದಾಗಿದ್ದು ತಾಮ್ರ ಉಂಗುರದ ಮೇಲಿನ ಲಾಂಛನ ವರಾಹ ಚಿತ್ರಮುದ್ರಿತವಾಗಿದೆ. ವರಾಹ ಚಿತ್ರವು ಸ್ವಲ್ಪ ಒಳಗೆ ಮುಳುಗಿದಂತೆ ಕಾಣುತ್ತದೆ. ಮತ್ತು ಈ ಮುದ್ರೆಯ ಎರಡು ಬದಿಗಳ ಉಂಗುರದ ವ್ಯಾಸದಲ್ಲಿ ಸ್ವಲ್ಪ ಅಸಮಾನತೆ ಇದೆ. ಇವೆಲ್ಲವು ಬಾದಾಮಿ ಚಾಲುಕ್ಯರ ತಾಮ್ರಶಾಸನಗಳಿಂದ ಸ್ಪಷ್ಟವಾಗಿ ವಿಭಿನ್ನ ವಾಗಿರುವುದು ಕಂಡುಬರುತ್ತದೆ.

4) ಕೋಗಳಿ_೫೦೦ ವಿಷಯ ಮತ್ತು ವೇಲೂರು-೭೦ ನಾಡಿನ ಮಧ್ಯದಲ್ಲಿ ಅರಗಿಲ್ಲ ವಾಡಗ್ರಾಮವೆಂದು ಹೇಳಿ ಈ ಗ್ರಾಮಕ್ಕೆ ಸಂಬಂಧಿಸಿದ ಎಂಟು ಹಳ್ಳಿಗಳ ಮೇರೆಗಳ ದಿಕ್ಕು ಗಳನ್ನು ಶಾಸನದಲ್ಲಿ ಸೂಚಿಸಲಾಗಿದೆ. ಅವುಗಳೆಂದರೆ ಶ್ರೀವಿಷ್ಟಿ, ದುಗ್ಗತಿ, ತೆಲಗಿ, ಸಾರತಿ, ನಿಟ್ಟುರು, ಮತ್ತವುರ, ಕೊಂಚವುರ ಮತ್ತು ನಿರ್ವಿಗಕುಂದ. ಸಾರತಿ ಬಿಟ್ಟು ಉಳಿದೆಲ್ಲ ಹಳ್ಳಿಗಳು ಹರಪನಹಳ್ಳಿ ತಾಲೂಕಿನಲ್ಲಿವೆ. ಸಾರತಿಯು ಚಿತ್ರದುರ್ಗ ಜಿಲ್ಲೆ ಹರಿಹರ ತಾಲೂಕಿನಲ್ಲಿದೆ. ತುಂಗಭದ್ರ ನದಿಯ ಎಡದಂಡೆಗೆ ಸಾರತಿ ಗ್ರಾಮವಿದೆ. ಉಳಿದ ಏಳು ಹಳ್ಳಿಗಳು ಈ ನದಿಯ ಬಲದಂಡೆಯಿಂದೀಚೆಗೆ ಇವೆ. ಈಗಿನ ಹಳ್ಳಿಗಳೊಂದಿಗೆ ಈ ಎಂಟು ಹಳ್ಳಿಗಳನ್ನು ಹೀಗೆ ಗುರುತಿಸಬಹುದಾಗಿದೆ. 1. ಶ್ರೀವಿಷ್ಟಿ = ಸಿರವೆಡೆ ಅಥವಾ ಚಿರಸ್ತಹಳ್ಳಿ (?) ;2. ತೆಲಗಿ= ತೆಲಗಿ; 3. ದುಗ್ಗತಿ =ದುಗ್ಗತಿ ಅಥವ ದುಗ್ಗಾತಿ; 4. ಸಾರತಿ =ಸಾರತಿ; 5. ನಿಟ್ಟುರು = ನಿಟ್ಟೂರು; 6. ಮತ್ತವುರ = ಮತ್ತೂರ; 7. ಕೊಂಚವೂರ =ಕೊಂಚಾಪುರ ಅಥವಾ ಕುಂಚೂರು; 8. ನಿರ್ವಿಗಕುಂದ =ನೀರುಗುಂದ ಅಥವ ನೀಲಗುಂದ;

ಅರಗಿಲುವಾಡ ಮತ್ತು ಚಿರಸ್ತಹಳ್ಳಿ ಗ್ರಾಮಗಳ ಮಧ್ಯೆ ಹಿಂದೆ ಶ್ರೀವಿಷ್ಟ ಎಂಬ ಗ್ರಾಮವಿದ್ದಿತೆಂದು ಈಗ ಅದು ಹಾಳಾಗಿದೆ ಎಂಬುದು ಅಲ್ಲಿಯ ಕೆಲವರ ಅಭಿಪ್ರಾಯವಾಗಿದೆ. ಇನ್ನು ಕೆಲವರು ಚಿರಸ್ಥಹಳ್ಳಿಯು ಹಿಂದೆ ಶ್ರೀವಿಷ್ಟಿ ಗ್ರಾಮವೆಂದು ಕರೆಸಿಕೊಂಡಿತ್ತೆಂದು ಅಭಿಪ್ರಾಯಪಡುತ್ತಾರೆ. ಶ್ರೀವಿಷ್ಟಿ ಗ್ರಾಮವು ಹಿಂದೆ ಸಿರವೆಡೆ ಎಂದು ಕ್ರಿ. ಶ. ೧೦ನೇ ಶತಮಾನದಿಂದ ೧೧ನೇ ಶತಮಾನದವರೆಗೆ ಕರೆಯಲಾಗಿತ್ತೆಂದು ಅಲ್ಲಿನ ಶಿಲಾಶಾಸನಗಳು ತಿಳಿಸುತ್ತವೆ.[2] ಇದರಿಂದ ಶ್ರೀವಿಷ್ಟಿಗ್ರಾಮವು ಚಿರಸ್ತಹಳ್ಳಿ ಮತ್ತು ಅರಗಿಲವಾಡ ಗ್ರಾಮಗಳ ಮಧ್ಯದಲ್ಲಿರಬಹುದೆಂದು ಕೆಲವರು ಹೇಳುವ ಮಾತು ನಿಜವಾಗಿರಬಹುದು.

ಅರಗಿಲವಾಡ ಗ್ರಾಮವು ಕೋಗಳಿ-೫೦೦ ವಿಷಯ ಮತ್ತು ವೇಲೂರು-೭೦ರ ಮಧ್ಯ ಇರುವುದೆಂದು ಶಾಸನದಲ್ಲಿ ಉಲ್ಲೇಖಿಸಿರುವುದು ಕೋಗಳಿ ನಾಡಿನ ವಿಷಯಕ್ಕೆ ಈವರೆಗೂ ತಿಳಿಯದ ಒಂದು ಹೊಸ ವಿಷಯವಾಗಿದೆ. ದುಗ್ಗತ್ತಿ ಅಥವಾ ದುಗ್ಗಾತಿಯು ಅರಗಿಲವಾಡ ಗ್ರಾಮದ ದಕ್ಷಿಣಕ್ಕೆ ಸುಮಾರು ೧೫ ಕಿ. ಮೀ. ದೂರದಲ್ಲಿದೆ. ಇದು ಕೋಗಳಿನಾಡಿನ ಐದುನೂರು ಗ್ರಾಮಗಳಲ್ಲಿಯ ಬಿಕ್ಕಿಗ ಎಪ್ಪತ್ತರ ಒಂದು ಗ್ರಾಮವಾಗಿದ್ದಿತೆಂದು ಕ್ರಿ. ಶ. ೧೧೨೮ರ ದುಗ್ಗತ್ತಿ ಶಾಸನದಲ್ಲಿ ಉಲ್ಲೇಖಿಸಲಾಗಿದೆ.[3] ನೀಲಗುಂದವು ಅರಗಿಲವಾಡ ಗ್ರಾಮದಿಂದ ಈಶಾನ್ಯಕ್ಕೆ ಸುಮಾರು ೧೨ ಕಿ. ಮೀ. ದೂರದಲ್ಲಿದೆ. ಇದು ಸಹಾ ಕೋಗಳಿ– ೫೦೦ವಿಷಯದಲ್ಲೇ ಒಂದು ಮುಂದಾದ ಮಹಾ ಅಗ್ರಹಾರ ಮತ್ತು ಮುಖ್ಯಪಟ್ಟಣವಾಗಿತ್ತೆಂದು ಅಲ್ಲಿಯ ಶಾಸನಗಳಿಂದ ಗೊತ್ತಾಗುತ್ತದೆ.[4] ಕೋಗಳಿ ಐದುನೂರರ ವ್ಯಾಪ್ತಿಯು ದಕ್ಷಿಣಕ್ಕೆ ದುಗ್ಗಾತಿಯವರೆಗೂ ಹಬ್ಬಿರಬಹುದಾಗಿದೆ. ನೀಲಗುಂದ ಮತ್ತು ದುಗ್ಗಾತಿ ಗ್ರಾಮಗಳ ಮಧ್ಯದಲ್ಲಿಯ ಅರಗಿಲವಾಡ ಗ್ರಾಮವು ಕೋಗಳಿ

ಪ್ರಾಂತಕ್ಕೆ ಮತ್ತು ವೇಲೂರು ಎಪ್ಪತ್ತರ ನಾಡಿನ ಮಧ್ಯದಲ್ಲಿರುವುದೆಂದು ಸೂಚಿಸಿರುವುದು ಈ ಎರಡು ನಾಡುಗಳ ಮೇರೆ ಎಂದು ತಿಳಿಯಬೇಕಾಗುತ್ತೆ.

ಅರಗಿಲುವಾಡ ಗ್ರಾಮಕ್ಕೆ ಸಂಬಂಧಿಸಿದ ಎಂಟು ಹಳ್ಳಿಗಳ ದಿಕ್ಕುಸೂಚನೆಯಲ್ಲಿ ಹಿಂದಿನ ಮತ್ತು ಈಗಿನ ವ್ಯತ್ಯಾಸವನ್ನು ಈ ಕೆಳಗೆ ತೋರಿಸಲಾಗಿದೆ.

ಶಾಸನದ ಪ್ರಕಾರ ಅರಗಿಲುವಾಡ ಗ್ರಾಮಕ್ಕೆ ಸಂಬಂಧಿಸಿದ ಎಂಟು ಹಳ್ಳಿಗಳ ದಿಕ್ಕುಗಳು	ಬಳ್ಳಾರಿ ಜಿಲ್ಲಾ, ಹರಪನಹಳ್ಳಿ ತಾಲೂಕಿನ ೧೯೭೩ರ ಸೆನ್ಸಸಿನಲ್ಲಿಯ ನಕಾಶೆ ಪ್ರಕಾರ ಈ ಅರಗಿಲವಾಡದಿಂದಹಳ್ಳಿಗಳು ಈಗಿನ ದಿಕ್ಕುಗಳು.
1. ಪೂರ್ವ–ಚಿರಸ್ತಹಳ್ಳಿ	ಪೂರ್ವ–ಚಿರಸ್ತಹಳ್ಳಿ
2. ದಕ್ಷಿಣ–ತೆಲಗಿ	ಆಗ್ನೇಯ–ತೆಲಗಿ
3. ಪಶ್ಚಿಮ–ದುಗ್ಗತ್ತಿ	ದಕ್ಷಿಣ–ದುಗ್ಗತ್ತಿ
4. ಪಶ್ಚಿಮ-ಸಾರಥಿ	ಆಗ್ನೇಯ–ಸಾರಥಿ
5. ಉತ್ತರ–ಕುಂಚೂರು	ಪೂರ್ವ–ಕುಂಚೂರು
6. ಪೂರ್ವ–ಮತ್ತವೂರು	ನೈಋತ್ಯ–ಮತ್ತೂರ
7. ಉತ್ತರ–ನಿಟ್ಟೂರು	ನೈಋತ್ಯ–ನಿಟ್ಟೂರು
8. ಪೂರ್ವ–ನೀಲಗುಂದ	ಉತ್ತರ–ನೀಲಗುಂದ

ಆದರೆ ಇವುಗಳ ಬದಲಾವಣೆಯು ಈ ಶಾಸನ ಬರೆಯುವಾಗ ಪ್ರಾಯಶಃ ಮಕರ ಮತ್ತು ಕರ್ಕಾಟ ಸಂಕ್ರಾಂತಿ ವೃತ್ತಗಳ ನಡುವಿನ ಸೂರ್ಯನ ಚಲನೆಯ ಮೇರೆಗೆ ಇರಬಹುದು. ಶಾಸನ ದಲ್ಲಿ ಮತ್ತೊಂದು ಮಹತ್ವದ ವಿಷಯವೆಂದರೆ ಪ್ರತಿಯೊಂದು ಹಳ್ಳಿಗೆ ನೈಸರ್ಗಿಕ ಭೂಮೇರೆ ಗಳನ್ನು ಗುರುತಿಸಲಾಗಿದೆ. ಇದು ಶಾಸನಗಳಲ್ಲಿ ಅಪರೂಪವಾಗಿ ಬಳಕೆಯಲ್ಲಿದ್ದುದು ಕಂಡು ಬರುತ್ತದೆ. ಈ ಮೇರೆಗಳು ಕೆಳಗಿನಂತಿವೆ.

ಶಾಸನದಲ್ಲಿ ಸೂಚಿಸಿದ ಎಂಟು ಹಳ್ಳಿಗಳಿಗೆ ಹೊಂದಿಕೊಂಡ ಭೂಮೇರೆ ದಿಕ್ಕುಗಳು.

1. ಚಿರಸ್ತಹಳ್ಳಿ–ಪಶ್ಚಿಮ–ಶ್ರೋತಪ್ರಮಾಣಂ
2. ತೆಲಗಿ–ಉತ್ತರ–ಪಾಷಾಣ ಪುಂಜ ಪ್ರಮಾಣಂ
3. ದುಗ್ಗತ್ತಿ–ಉತ್ತರ–ಶೈಲಪ್ರಮಾಣಂ
೪. ಸಾರಥಿ–ಉತ್ತರ–ಶ್ರೋತಪ್ರಮಾಣಂ, ಪಶ್ಚಿಮಕ್ಕೆ-ತುಂಗಭದ್ರಾನದೀ ಪ್ರಮಾಣಂ
5. ನಿಟ್ಟೂರು–ದಕ್ಷಿಣ–ನದಾನದಿಸಂಗಮ ಪ್ರಮಾಣಂ
6. ಮತ್ತೂರು–ದಕ್ಷಿಣ–ಶ್ರೋತಪ್ರಮಾಣಂ
7. ಕುಂಚೂರು–ದಕ್ಷಿಣ–ಶೈಲಪ್ರಮಾಣಂ
8. ನೀಲಗುಂದ-ಪಶ್ಚಿಮ–ಮಿಶ್ರಿಕಶೈಲಪ್ರಮಾಣಂ ಮತ್ತು ಭೂಮಿಪ್ರಮಾಣಂ

ಸಂಸ್ಕೃತ ಭಾಷೆಯಲ್ಲಿ ಕನ್ನಡ ಭಾಷೆ ಮಿಶ್ರಣವಾಗಿದೆ. ಸಾಲು ೩೬ರಲ್ಲಿ ''ಗೋವರ್ಧನ ತ್ರಿವೇದಿಗೆ'' ಎಂದು ಪ್ರತಿಗ್ರಹಿಯನ್ನು ಸೂಚಿಸಲಾಗಿದೆ.

ಶಾಸನದ ಒಟ್ಟು ೪೯ ಸಾಲುಗಳಲ್ಲಿಯ, ಹ, ಪ, ವ, ರ, ದಿ, ಭಾ, ಪ ಮತ್ತು ಗ ಅಕ್ಷರಗಳ ಬರವಣಿಗೆಯಲ್ಲಿ ಅಲ್ಲಲ್ಲಿ ವ್ಯತ್ಯಾಸ (ಏರು, ಇಳಿತ, ಉಬ್ಬು) ಕಂಡು ಬರುತ್ತದೆ. ಣ, ಧಿ, ಶ್ವ, ಥ್ವೀ, ಥು, ಶ್ಯ, ಶೋ, ಶ್ಯೆ ಅಕ್ಷರಗಳ ಮೇಲೆ ಅಡ್ಡಪಟ್ಟಿಗಳನ್ನು ಎಳೆದಿಲ್ಲ. ಆದರೆ ಸಾಲು ಮುವತ್ತುನಾಲ್ಕರಲ್ಲಿ "ಧ" ಅಕ್ಷರಕ್ಕೆ ಅಡ್ಡಗೆರೆ ಎಳೆಯಲಾಗಿದೆ. ಇದರಿಂದಾಗಿ ಅಕ್ಷರಗಳನ್ನು ಬರವಣಿಗೆಯಲ್ಲಿ ಹೆಚ್ಚು ಕಡಿಮೆ ಮಾಡಿರುವುದು ಕಂಡುಬರುತ್ತದೆ.*

ಶಾಸನಪಾಠ

ಮೊದಲನೆಯ ಹಲಗೆಯ ಹಿಂಭಾಗ

1. ಸ್ವಸ್ತಿ ಜಯನ್ತ್ಯ(ತ್ಯ)ನಿ(ವಿ) ಷ್ಕೃತಂ ವಿಷ್ಣುರ್ವ್ವಾರಾಹಾ ಕ್ಷ(ಕ್ಷೋ)ಭಿತಾ ನೊಣ್ಣಾವ ದಕ್ಷಿಣೊಂನತ ದಂಷ್ಟ್ರಾಗ್ರೆ ವಿಸ್ರಾನ್ತ–
2. ಭುವನಂ ವಪುಃ ಶ್ರೀಮತಾಂ(ದಾಂ) ಸಕಲಾ(ಲ) ಭುವನ [ಜನ*]ಸಂಸ್ತೂಯ ಮಾನ ಮಾನವ್ಯಸಗೋತ್ರಾಣಾಂ ಹಾರಿ–
3. ತೀಪುತ್ರಾಣಾಂ ಸಪ್ತಂವಿಕಾ ಮಾತ್ರಭಿಸಪ್ತ(ಕ್ತ)ಮಾತ್ರಾಭಿರಭಿವರ್ದ್ಧಿತನಾಂ ಕಾರ್ತ್ತಿಕೇಯ ಪರಿರಕ್ಷಣ
4. ಪ್ರಾಪ್ತಕಲ್ಯಾಣಪರಂಪರಾಣಾಂ ಭಗವಂನಾರಾಯಣಪ್ರಸಾದಾಸಮಸಾದಿತ ವರಾ ಹಾಲಾ
5. ಂಛನ ಕ್ಷಣ ಕ್ಷಣ ವಸೀ(ಶೀ)ಕ್ರಿತಾಸೇಷಮಹೀಭ್ರಿತಾನಾಂ ಚಾಲುಕ್ಯನಾಂ ಕುಲ ಮಲಂಕರಿಷ್ಣೋರ–
6. ಶ್ವಮೇಧವಭ್ರಿತಸ್ನೇನಪವಿತ್ರೀಕ್ರಿತಗಾತ್ರಸ್ಯ ಜಯ ಛತ್ರಚಾಮರ ಸಿಂಹಾಸನ
7. ಪುಸ್ತಕಸ್ತಿತ ವರಾಹಸಿಂಹಶರಭಶಾರ್ದೂಲಾಶ್ವಕರಿಮಕರಮತ್ಸ (ಪ್ಯ)ಮಾ
8. ನ್ತು ಕಕ್ಷು[ರ*]ಗವ್ರಿಷಭಕಲಸಕು(ಕ)ಲಿಸಹಲಕುಕ್ಕುಟಗರುಡಚಂದ್ರಾದಿತ್ಯ ನಾಗಮಹಾಧ್ವಜ
9. [ವಿರಾಜಿತ*] ಪಾಲಿಕೇತನ ವಿಚಿತ್ರಪ್ರಾಣ ವಘುಲ್ಲರೀಶಂಕಕಲಹಭೇರಿಮ್ರಿದಂಗ ಘೋಷಣ ಸಮಸ್ತ
10. ಭುವನಾಶ್ರಯ ಶ್ರೀಪೃಥ್ವೀವಲ್ಲಭ ಮಹಾರಾಜಧಿರಾಜ ಪರಮೇಶ್ವರ ಶ್ರೀ ಪುಲಕೇಶಿ ವಲ್ಲಭ
11. ಮಹಾರಾಜಸ್ಯ ತಸ್ಯ ಸುತ ರಾಮ ಪರಾಕ್ರಮ ಕಾನ್ತೀಯವನವಾಸ್ಯಾದಿ ಪರನ್ರಿಪ ಮಂಡಲ
12. ಪುಣವದ್ಧ ವಿಸುಧಕೀರ್ತಿನೇಕ ನ್ರಿಪವೇದಂಡ ಮಸ್ತಕಪಿಂಡಶಂಡಿತ ಪ್ರಚಂಡ ದೋರ್ದ್ಧಂಡ

ಎರಡನೆಯ ಹಲಗೆಯ ಮುಂಭಾಗ

13. ಮಂಡಲೋಗ್ರಕರ ನಶ್ಯವಿರಾಜಿತೋತ್ತುಂಗ ಕೀಶೋರಕೇಸರಿ ಸಮಸ್ತಭುವನಾ ಶ್ರಯ ಶ್ರೀ ಪೃ
14. ಥ್ವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರ ಶ್ರೀ ಕೀರ್ತ್ತಿವರ್ಮ್ಮಮಹಾರಾಜ ತಸ್ಯಾಗ್ರಜ ಸಾಹಸಾಂಜೆ–
15. ನೆಯ ರಿಪುಪುರತ್ರಿಪುರಹರ ಪರಾಜಯೋಪಲಬ್ಧ ಪರಮೇಶ್ವರ ಪರಮಾಣಂ ಪರಮ ಸ್ತುತ್ಯ ಸಮ-
16. ಸ್ತಭುವನಾಶ್ರಯ ಶ್ರೀಪೃಥ್ವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರ ಶ್ರೀ ವಿಜಯಾದಿತ್ಯ ಪರಮೇಶ್ವರ
17. ತ್ಸೂನುಸಧಿಗತ ನಿಜವಿಜಯಸಮುಚಿತ ವಿ(ಪ)ತತ ರಾಜ್ಯವಿಭವಸ್ಯ ವಿಪುವರಸಿಕ ಸಮರರಿಪುಗ
18. ತರಿಪು ನರಪತಿ ಸಮೋಪಲಬ್ಧ ಕೀರ್ತ್ತಿಪತಾಕಾಧಿಸಯಿತ ದಿಗಂತರಾಲ ಸಾಹಿ ಮಕರಕುಲ
19 ವಿಲಯಹೇತು ಪಲ್ಲವಪತಿಪರಾಜಯಾನಾಂ ನರಪರಿಗ್ರೀಹಿತ ಕಾಂಚೀಪುರ ಸಂಚೂರ್ಣ್ಣಿತ ಚೀರ
20. ಚೋಳಪಾ[ಂ]ಡ್ಯ ನೃಪಮಣಿಮುಕುಟಕುಟಕಿರಣಸನಿಲಾಭಿಶಿಕ್ತ ಚರಣ ಕಮಲಸ್ಯ ಸಮಸ್ತಭುವನಾ
21. ಶ್ರಯ ಶ್ರೀಪೃಥ್ವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರ ಶ್ರೀ ವಿಕ್ರಮಾದಿತ್ಯ ಪರಮೇಶ್ವರ ತ-
22. ತ್ಪ್ರಿಯಸುತಸ್ಯ ವಿನಯವಿನಮಿತಾನೇಕ ಭೂಪಾಲಾವಾಲಿ ಮಲೋಲಾಲಿತ ಚರಣಾರವಿಂದಯುಗಲಕೊಂಕ
23. ಹೋದ್ಯನೇಕ ಮಾಲವ ಗೊಲ್ಲಗೂರ್ಜ್ಜರಕಲಿಂಗವೆಂಗೀಶಾದಿನ್ರಿಪಮಣಿಮುಕುಟ ಮಾರೀಚಿಮಂಜ
24. ರೀರಂಜಿತ ಪಾದಾಪೀಠ ತ್ರಿಸಮುದ್ರ ಮಧ್ಯವರ್ತ್ತಿ ಭುವನಮಂಡಲಾಧೀಶ್ವರಸ್ಯ ಪ್ರಿಥುರಾಜ್ಯೋಪನೀತವ

ಎರಡನೆಯ ಹಲಗೆಯ ಹಿಂಭಾಗ

25. ನೀತಲಾಸೇಪ ಸ್ವೇತಾನಿಹತ್ಯಪಾಲಮಾತ್ರಿಕಾಸಮುದ್ಭವ ಮಾತ್ರಾಭಿರಾಜ್ಯಪಾಲ ಮಾವಿಷ್ಪ್ರೇಭ್ಯಸ
26. ಮಧಿವಿಷಯ ಪ್ರಸನಾದಿಹಿತ ತತ್ರಮಾತ್ರರಾಜ್ಯೋಪನಾಂ ಶ್ರೀತ್ಯಂತರಿತ ಕುಲತ್ವಾ ದ್ಧೇರ್ಚಿ ವೃಧರ ಯಿ
27. ವ ಶ್ರೀರಾಮ ತದ್ವಾಸುದೇವ ಯಿವ ನೃಪಕಂ ಸಾತುಪರಶುರಾಮ ಯಿವ ರಾಜ ರಾಜಾಶ್ರಯಭರತ ಯಿ

28. ವ ಸಮಸ್ತಭುವನಾಶ್ರಯ ಶ್ರೀಪ್ರಿಥ್ವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರ ಪರಮಭಟ್ಟಾರ

29. ಕ ಶ್ರೀ ವಿನಯಾದಿತ್ಯ ಸತ್ಯಾಶ್ರಯವಲ್ಲಭ ನರೇಂದ್ರದೇವ ಕುಶಲಸರ್ವ್ವಾನೆವಯತಃ ಸಂವಂದ್ಯಮಾ

30. ನ ಸೌರಾಷ್ಟ್ರ ವಿಷಯ ಪತಿಗ್ರಾಮಕೂಟಯುಕ್ತಕ ಮಹಾತ್ಮಾದೀನ ಸಂವಿದಿತ ಯತಃ

31. ಮಲಹಾರೀ ನದ್ಯುತ್ತರ ತಟೇ ರಕ್ತಾಪುರ ರಾಜಧಾನೆ ಸ್ತಿರತರ ಸ್ವಸ್ಥಾನೆನ ಪಟ್ಟವಂಧೋ

32. ತ್ಸವ ಸಂಪಾದನಾನ್ವಿತ ಕುರುಂದಮುಪಾಗತೇನ ಪುಲ್ಯ(ಣ್ಯ)ಯಶೋವಿದ್ಧರ್ಯೆ ಪೂರ್ವ್ವವಿಲುಪ್ತಾನಪಿ

33. ದೇವಭೋಗಾಗ್ರಹಾರನುಪಾಲಯತಃ ವಿಂಸತ್ಯೆ(ತ್ಯಂ)ತ್ತರಪಂಚಸತೀಷು ಸ(ಶ)ಕವರ್ಷ ಪ್ರಾತಿತೀಷು

34. ವಿಲಂಧಿ(ಭಿ)ಸಂವತ್ಸರ ಪ್ರವರ್ತ್ತಮಾನೆ ಚೈತ್ರಪ್ರಾಪ್ತಮವಾಶ್ಯೆವ್ಯತೀಪಾತೆ-ಬ್ರಿಹಸ್ತಿವ(ವಾ)ರೆ ಸೂ

35. ರ್ಯಗ್ರಹಣ ತಾತ್ಕಾಲೆ ರಾಜವಿದಿ(ಹಿ)ತ ವಿಪ್ರಕುಲ ವಿಮಲಿಯಜ್ಞೋ(ಶ್ಯೋ)ಪವೀತನಾಯಕಂ ವಾಜ್ಯಾನ್ವ

36. ಯೆ ಭಾರದ್ವಾ(ದ್ವ)ಜಗೋತ್ರ ಗೋವರ್ದ್ಧನತ್ರಿವೇದಿಗೆ ಕೋಗಲಿವಿಷಯ ಪಂಚಸತಾಭ್ಯನ್ತರೆ ವೇಲೂರು–

ಮೂರನೆಯ ಹಲಗೆಯ ಮುಂಭಾಗ

37. ಸಪ್ತತಿ ಮಧ್ಯೆ ಅರಗಿಲ್ಲವಾಡನಾಮಗ್ರಾಮೆ ಘಟಿಕಸ್ವೇತಛತ್ರಚಾಮರ ಸಮೇತಂ ಪಾದಪ್ರಕ್ಷಾ

38. ಲನ ಧಾರಾಪೂರ್ವ್ವಕಂ ಸರ್ವ್ವನಮಸ್ಯಂ ಮಹಾನ್ರಿಪಂ ದತ್ತಯತಿ ಇತಿ ಶೀಮಾನ್ತರೆ ಪೂರ್ವ್ವದಿಶಾಭಾಗೆ ಶ್ರೀವಿ–

39. ಷ್ಣುನಾಮಗ್ರಾಮೆ ತಸ್ಯ ಪಶ್ಚಿಮದಿಶಾಭಾಗೆ ಶ್ರೋತಪ್ರಮಾಣಂ ತಸ್ಯ ದಕ್ಷಿಣದಿಶಾಭಾಗೆ ತೆಲಗಿನಾ–

40. ಮಗ್ರಾಮೆ ತಸ್ಯೋತ್ತರದಿಶಾಭಾಗೆ ಪಾಷಾಣಪುಂಜ ಪ್ರಮಾಣಂ ತಸ್ಯ ಪಶ್ಚಿಮದಿಶಾಭಾಗೆ ದುಗ್ಗತಿನಾ–

41. ಮಗ್ರಾಮೆ ತಸ್ಯೋತ್ತರ ದಿಶಾಭಾಗೆ ಶೈಲಪ್ರಮಾಣಂ ತಸ್ಯ ಪಶ್ಚಿಮದಿಶಾಭಾಗೆ ಸಾರತಿನಾಮಗ್ರಾ

42. ಮೆ ತಸ್ಯೋತ್ತರದಿಶಾಭಾಗೆ ಶ್ರೋತಪ್ರಮಾಣಂ ತಸ್ಯ ಪಶ್ಚಿಮದಿಶಾಭಾಗೆ ತುಂಗಭಧ್ರೆನಾದೀಪ್ರಮಾಣಂ

43. ತಸ್ಯೋತ್ತರ ದಿಶಾಭಾಗೆ ನಿಟ್ಟುರುನಾಮಗ್ರಾಮೆ ತಸ್ಯ ದಕ್ಷಿಣದಿಶಾಭಾಗೆ ನದಾನದಿ ಸಂಗಮೆ

44. ಪ್ರಮಾಣಂ ತಸ್ಯ ಪೂರ್ವ್ವದಿಶಾಭಾಗೆ ಮತ್ತವುರನಾಮಗ್ರಾಮೆ ತಸ್ಯ ದಕ್ಷಿಣದಿ ಶಾಭಾಗೆ ಶ್ರೋತಪ್ರಮಾಣಂ ತಸ್ಯೋತ್ತರ

45. ದಿಶಾಭಾಗೆ ಕೊಂಚಾವುರನಾಮಗ್ರಾಮೆ ತಸ್ಯ ದಕ್ಷಿಣದಿಶಾಭಾಗೆ ಶೈಲಪ್ರಮಾಣಂ ತಸ್ಯ ಪೂರ್ವದಿಶಾಭಾಗೆ ನಿವ್ವಿಗಕುಂದ–

46. ನಾಮಗ್ರಾಮೆ ತಸ್ಯ ಪಶ್ಚಿಮದಿಶಾಭಾಗೆ ಮಿತ್ತಿಕಶೈಲಂ ಪ್ರಮಾಣಂ ಭೂಮಿ ಪ್ರಮಾಣಂ ಜಲಪಾಷಾಣ ಸಮೇತಂ

47. ಪಂಚಸಹಾಶ್ರಾಣಂ ॥ ಸಾಮಾಯಂ ಧರ್ಮಶೇತ್ರಂ ನೃಪಾಣಾಂ ಕಾಲೇ ಕಾಲೇ ಪಾಲನಿಯೋ ಭವದ್ಭಿಃ ಸರ್ವನೇತಾಂ ಭಗಿನಃ

48. ಪಾರ್ತ್ಥಿವೇಂದ್ರ ಭುಯೋ ಭುಯೋ ಯಾಚತೇ ರಾಮಸ(ಚಂ)ದ್ರ ॥ ಸ್ವದತ್ತಂ ಪರದತ್ತಂ ವಾ ಯೋ ಹರೇತಿ ವಸುಂಧರಾ ಷಷ್ಟಿವ್ವರ್ಷಸಹಶ್ರೇ(ಶಾ)–

49. ಣಿ ವಿಷ್ಟಾಯಾ ಜಾಯತೆ ಕ್ರಿಮಿಃ। ಚಾಲುಕ್ಯವಂಶ ಸಂಜಾತೋ ಶ್ರೀ ಸತ್ಯಾಶ್ರಯ ವಲ್ಲಭ ತತ್ಪಾದಪದ್ಮೋಪಜೀವಿ ಕೇಶವಾರ್ಯ ವಿಲಿಖಿತೇಂ(ತೆ)

ಅಡಿಟಿಪ್ಪಣಿಗಳು

[1] P. B Desai, (ed): *A History of Karnataka*, 1970. ಪುಟ. 109

[2] *ARSIE.*, 1918, p. 237–39


[3] *SII.*, IX part I No. 217.

[4] ಅದೇ, No. 123 ಮತ್ತು 314


[5] ಶ್ರೀ ಶ್ರೀ ಶ್ರೀ 10008 ಶ್ರೀಶೈಲವಾಗೀಶಪಂಡಿತ ಶಿವಾಚಾರ್ಯಸ್ವಾಮಿಗಳು ಶ್ರೀಶೈಲ,

ಶ್ರೀಮತಿ ಅಂಬಕ್ಕ ಭೀಮನಗೌಡ, ಅರಗಿಲವಾಡ, ಡಾ॥ ಶ್ರೀನಿವಾಸ ರಿತ್ತಿ, ಮುಖ್ಯಸ್ಥರು, ಮತ್ತು ಅ. ಸುಂದರ, ರೀಡರ್, ಪ್ರಾಚೀನ ಭಾರತ ಇತಿಹಾಸ ಮತ್ತು ಶಾಸನ ವಿಜ್ಞಾನ ವಿಭಾಗ, ಕರ್ನಾಟಕ ವಿಶ್ವವಿದ್ಯಾನಿಲಯ ಧಾರವಾಡ ಇವರುಗಳಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ.


ಮೊಲನೆಯ ಹಲಗೆಯ ಹಿಂಭಾಗ




ಎರಡನೆಯ ಹಲಗೆಯ ಮುಂಭಾಗ



ಎರಡನೆಯ ಹಲಗೆಯ ಹಿಂಭಾಗ



ಮೂರನೆಯ ಹಲಗೆಯ ಮುಂಭಾಗ



ಮಾನವಿಕ ಕರ್ಣಾಟಕ

ಸಂಪುಟ ೯

೧೯೭೮ – ೭೯

ಸೂಚಿ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ

ವಿಷಯ ಸೂಚಿ

ಲೇಖನಗಳು

ಲೇಖನಗಳು

ಲೇಖನಗಳು

ಪುಸ್ತಕಲೋಕ

ಲೇಖಕ ಸೂಚಿ

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

★ ಪ್ರಬುದ್ಧ ಕರ್ಣಾಟಕ

★ ಮಾನವಿಕ ಕರ್ಣಾಟಕ

★ ವಿಜ್ಞಾನ ಕರ್ಣಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ .... ನಾಲ್ಕು ರೂಪಾಯಿ

ಇತರರಿಗೆ .... ಆರು ರೂಪಾಯಿ

ಸಂಸ್ಥೆಗಳಿಗೆ .... ಎಂಟು ರೂಪಾಯಿ

(ಆಜೀವ ಸದಸ್ಯತ್ವ : ನೂರು ರೂಪಾಯಿಗಳು)
(ಪ್ರತಿಯೊಂದಕ್ಕೂ)

ಡೈರೆಕ್ಟರ್
'ಪ್ರಸಾರಾಂಗ'
ಮಾನಸಗಂಗೋತ್ರಿ, ಮೈಸೂರು–೫೭೦ ೦೧೩

ಮೈಸೂರು ವಿಶ್ವವಿದ್ಯಾನಿಲಯದ ಈಚಿನ ಪ್ರಕಟಣೆಗಳು

			ಬೆಲೆ: ರೂ.
1.	ಕನ್ನಡ ಗ್ರಂಥಸೂಚಿ, ಸಂಪುಟ 4 (ಗದ್ಯ, ನಾಟಕ, ಸಣ್ಣಕತೆ, ಪ್ರಬಂಧ)	....	60-00
2.	ಕನ್ನಡ ಗ್ರಂಥಸೂಚಿ, ಸಂಪುಟ 5 (ಕಾದಂಬರಿ)	....	50-00
3.	ಜೈಮಿನಿ ಭಾರತ ಸಂಗ್ರಹ	....	13-00
4.	ಉತ್ತರ ಕನ್ನಡ ಜಿಲ್ಲೆಯ ಹವ್ಯಕರ ಹಾಡುಗಳು	....	9-00
5.	ವಿದ್ಯುತ್ಕಾಂತ ಸಿದ್ಧಾಂತ	....	21-00
6.	ಕನ್ನಡ ಒಡಪುಗಳು	....	3-50
7.	ಬಿಜಾಪುರ ಜಿಲ್ಲೆಯ ಲಾವಣಿಗಳು	....	7-00
8.	ಕೋಡಗದ ಮಾರಯ್ಯನ ವಚನಗಳು	....	5-00
9.	ಕಲೆಯು ನೆಲೆ	....	5-00
10.	ಬ್ರಿಟಿಷ್ ಪತ್ರಿಕೋದ್ಯಮ	....	3-00
11.	ಜೇನು ಸಾಕಣೆ	....	14-00
12.	ಜೇನ್ ಆಸ್ಟಿನ್	....	5-00
13.	ದ್ವಿತೀಯ ಭಾಷಾಬೋಧನೆ	....	9-00
14.	ವ್ಯವಸಾಯ ಪ್ರಗತಿ ಸಾಧನೆಯ ಸೂತ್ರಗಳು	....	5-00
15.	ಭಾರತೀಯ ನ್ಯಾಯಪದ್ಧತಿ	....	15-00
16.	ಮೌಲ್ಯ ಮತ್ತು ಬಂಡವಾಳ	....	25-00
17.	ಭೂಗೋಳ ವಿಜ್ಞಾನಕೋಶ	....	60-00
18.	ಸಂಪ್ರದಾಯದ ಹಾಡುಗಳು	....	20-00
19.	ಜಡವಸ್ತುವಿನ ಗುಣಧರ್ಮಗಳು	....	9-00
20.	ವಿಕಾಸ ಮನೋವಿಜ್ಞಾನ	....	40-00
21.	Current trends in Folklore	....	20-00
22.	Poverty of Intellectualism in India	....	6-00
23	rchaeology of Karnataka	....	23-00
	oblems of Rural Industrialisation and Reconstruction	....	6-00
	igraphia Carnatica, Vol. VII	....	100-00

ಪ್ರತಿಗಳಿಗೆ ಹಾಗೂ ಉಚಿತ ಪಟ್ಟಿಗೆ ಬರೆಯಿರಿ :

ಡೈರೆಕ್ಟರ್, ಪ್ರಸಾರಾಂಗ, ಮೈಸೂರು-570 012